ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ


ಸಂಪುಟ 3 ಸಂಚಿಕೆ 36

ಸೆಪ್ಟೆಂಬರ್ 06, 2009

ರೂ. 5/-



ಜಾತಿ ವ್ಯವಸ್ಥೆ - ಅಸ್ಪೃಶ್ಯತೆಯ ಬೇರುಗಳು



ಬಿಜೆಪಿಯೊಳಗೆ ಭುಗಿಲೆದ್ದ ಕಚ್ಚಾಟಗಳು !!



ವಿಶ್ವ ಆರ್ಥಿಕ ಬಿಕ್ಕಟ್ಟು ಮುಗಿಯಿತೇ ?



ಹೊರಳುದಾರಿಯಲ್ಲಿ ಕರಾವಳಿ ಮೀನುಗಾರಿಕೆ



ಅಡುಗೆ ಅನಿಲದ ಬೆಲೆ : ವಿಶ್ವದ ಶ್ರೀಮಂತ ಅಂಬಾನಿಗೆ ಮೂರಾಣೆ ಬಡಜನತೆಗೆ ಒಂಬತ್ತಾಣೆ !

ನೈಸರ್ಗಿಕ ಅನಿಲದ ಪಾತ್ರ:

ಅಡುಗೆ ಅನಿಲ (ಎಲ್.ಪಿ.ಜಿ)ವನ್ನು ಜಗತ್ತಿನ ಎರಡನೇ ಅತಿ ದೊಡ್ಡ ಶ್ರೀಮಂತ ಮುಖೇಶ್ ಅಂಬಾನಿಗೆ ಸರ್ಕಾರ ಕೇವಲ ಮೂರಾಣೆಗೆ ನೀಡಿದರೆ, ತಿಂಗಳಾದಲ್ಲಿ ಖಾಲಿ ಸಿಲಿಂಡರ್‌ಗೆ ಅನಿಲ ತುಂಬಿಸಲು ರೊಕ್ಕ ಹೊಂದಿಸುತ್ತಾ ಹೆಣಗುವ ಜನತೆಗೆ ಒಂಬತ್ತಾಣೆಗೆ ವಿತರಿಸುತ್ತಿದೆ. ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾದಿಂದ 1.8 ಡಾಲರಿಗೆ ಪಡೆಯುವ ನೈಸರ್ಗಿಕ ಅನಿಲವನ್ನು ಮುಖೇಶ್ ಅಂಬಾನಿ ಸ್ವಾಮ್ಯದ ರಿಲಯನ್ಸ್ ಕಂಪನಿಯಿಂದ 4.8 ಡಾಲರ್ ತೆತ್ತು ಪಡೆಯಬೇಕು. ದೇಶದ ಜನತೆ ಬಳಸುತ್ತಿರೋ ಅಡುಗೆ ಅನಿಲದ ಶೇ. 50ಕ್ಕಿಂತಲೂ ಹೆಚ್ಚಿನ ಭಾಗವನ್ನು ನೈಸರ್ಗಿಕ ಅನಿಲದಿಂದ ಉತ್ಪಾದಿಸಲಾಗುವುದರಿಂದ ಸರ್ಕಾರ ಬಡಬಗ್ಗರ ಜೇಬಿನಿಂದ ಉದಾರವಾಗಿ ತೆಗೆದು ಅಂಬಾನಿಯ ಜೇಬಿಗೆ ಹಾಕುತ್ತಿದೆ. ಅಡುಗೆ ಅನಿಲವಷ್ಟೇ ಅಲ್ಲ, ರೈತಾಪಿಯು ಬಳಸುವ ಅಮೋನಿಯದಂಥಹ ರಾಸಾಯನಿಕ ಗೊಬ್ಬರಗಳನ್ನು ತಯಾರಿಸಲು ಅತ್ಯಂತ ಪ್ರಮುಖ ವಸ್ತುವೆಂದರೆ ನೈಸರ್ಗಿಕ ಅನಿಲವೇ.

ಭೂಗರ್ಭದಲ್ಲಿ ಅನಿಲ ನಿಕ್ಷೇಪಗಳು

ನಮ್ಮ ದೇಶದಲ್ಲಿ ಅಡುಗೆ ಅನಿಲದ ಶೇ. 50ಕ್ಕಿಂತಲೂ ಹೆಚ್ಚಿನ ಭಾಗವನ್ನು ನೈಸರ್ಗಿಕ ಅನಿಲದಿಂದ ಉತ್ಪಾದಿಸಿದರೆ, ಮಿಕ್ಕಿದ್ದನ್ನು ಪೆಟ್ರೋಲಿಯಂ ತೈಲದಿಂದ ಉತ್ಪಾದಿಸಲಾಗುತ್ತದೆ. ಪೆಟ್ರೋಲಿಯಂ ತೈಲ ನಿಕ್ಷೇಪಗಳಂತೆ ನೈಸರ್ಗಿಕ ಅನಿಲವು




ಭೂಗರ್ಭದಲ್ಲಿ ಉತ್ಪತ್ತಿಯಾಗುತ್ತದೆ. ಇವುಗಳು ಹೈಡ್ರೋ ಕಾರ್ಬನ್‌ಗಳಿಂದಾಗಿರುತ್ತವೆ. ಸಾವಯವ ವಸ್ತುಗಳು ಅಂದರೆ ಸಸ್ಯ, ಪ್ರಾಣಿ, ಇತ್ಯಾದಿಗಳ ಪಳೆಯುಳಿಕೆಗಳು ಭೂಪದರಗಳಡಿಯಲ್ಲಿ ಲಕ್ಷಾಂತರ ವರ್ಷಗಳಿಂದಲೂ ಸೇರಿಕೊಂಡಿರುತ್ತವೆ. ಇವು ಭೂಗರ್ಭದೊಳಗೆ ಭೂಪದರುಗಳ ಒತ್ತಡ ಮತ್ತು ಉಷ್ಣಾಂಶಗಳಿಗೆ ಸಿಲುಕಿ ಇಂಗಾಲದ ವಿವಿಧ ರೂಪಗಳಾಗಿ ಮಾರ್ಪಡುತ್ತವೆ. ಉದಾಹರಣೆಗೆ, ಕಲ್ಲಿದ್ದಲು, ಪೆಟ್ರೋಲಿಯಂ ತೈಲ, ನೈಸರ್ಗಿಕ ಅನಿಲ, ಇತ್ಯಾದಿ. ಭಾರತದಲ್ಲಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಬಾವಿಗಳಿರುವ ಪ್ರದೇಶಗಳೆಂದರೆ, ಅಸ್ಸಾಂ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಗುಜರಾತ್, ಮುಂಬೈ, ಆಂಧ್ರಪ್ರದೇಶ ಮತ್ತು ತಮಿಳುನಾಡು.

ನೈಸರ್ಗಿಕ ಅನಿಲ ಶೋಧನೆ ಮತ್ತು ಸಂಸ್ಕರಣೆ:

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳನ್ನು ಶೋಧಿಸಿ ಹೊರತೆಗೆಯುವ ಕ್ಷೇತ್ರವನ್ನು 1990ರವರೆಗೂ ಸಾರ್ವಜನಿಕ ಉದ್ದಿಮೆ ಕಂಪನಿಗಳೇ ಮಾಡುತ್ತಾ ಬಂದಿದ್ದವು. ಆದರೆ, 1990 ರಿಂದೀಚೆಗೆ ಖಾಸಗಿ ಕಂಪನಿಗಳಿಗೂ ಈ ಕ್ಷೇತ್ರವನ್ನು ತೆರೆಯಲಾಗಿದ್ದು, ಸಾರ್ವಜನಿಕ ಉದ್ದಿಮೆ ಕಂಪನಿಗಳು ಶೋಧನೆ ನಡೆಸಿ ನಿಕ್ಷೇಪವನ್ನು ಹೊರತೆಗೆಯಲು ಅಗತ್ಯವಿರುವ ಹಣಕಾಸು ಹಂಚಿಕೆಯನ್ನು ಕಡಿತಗೊಳಿಸಲಾಗಿದೆ. ಇದರಿಂದಾಗಿ, ರಿಲಯನ್ಸ್‌ನಂಥಹ ಕಂಪನಿಗಳು ನಿಕ್ಷೇಪ ಶೋಧಿಸಿ, ಹೊರತೆಗೆದು ಸಂಸ್ಕರಿಸುವ ಕಾರ್ಯದಲ್ಲಿ ಬಲಾಢ್ಯ ಕಂಪನಿಗಳಾಗಿ ರೂಪುಗೊಳ್ಳುತ್ತಿರುವುದು.

ನೈಸರ್ಗಿಕ ಅನಿಲವು ಬಹುತೇಕ ಮಿಥೇನ್



ಎಂಬ ಅನಿಲದಿಂದ ಕೂಡಿದೆ. ಮಿಥೇನ್ ಅನಿಲವನ್ನು ಹಲವು ಗ್ರಾಮೀಣ ಪ್ರದೇಶಗಳಲ್ಲಿ ಕಾಣಬಹುದಾದ ಗೋಬರ್ ಗ್ಯಾಸ್ ಘಟಕಗಳಲ್ಲಿ ಉತ್ಪಾದನೆಯಾಗುವಂಥದು. ನೈಸರ್ಗಿಕ ಅನಿಲವನ್ನು ಭೂಮಿಯಲ್ಲಿ ಬೋರು ಹೊಡೆಯುವಂಥಹ ಸಾವಿರಾರು ಅಡಿ ಆಳದ ಕೊಳವೆ ಬಾವಿಗಳನ್ನು ತೋಡಿ ಅದರ ಮೂಲಕ ಹೊರತೆಗೆಯಲಾಗುತ್ತದೆ. ಅನಿಲ ನಿಕ್ಷೇಪಗಳಿಗಾಗಿ ಶೋಧನೆ ನಡೆಸುವುದು ಮೊದಲನೇ ಹಂತವೆನಿಸಿದರೆ, ಭೂಮಿಯಾಳದಿಂದ ಅನಿಲವನ್ನು ಹೊರತೆಗೆಯುವುದು ಎರಡನೆ



ಹಂತ.

ಮೂರನೇ ಹಂತದಲ್ಲಿ, ಹೀಗೆ ಹೊರತೆಗೆದ ಅನಿಲವನ್ನು ಮಿಥೇನ್ ಹೊರತುಪಡಿಸಿ ಉಳಿದ ಅನಿಲಗಳನ್ನು ಬೇರ್ಪಡಿಸಲಾಗುತ್ತದೆ. ಸಾರಜನಕ, ಈಥೇನ್, ಗಂಧಕ, ಇತ್ಯಾದಿ ಇದರಿಂದ ಬೇರ್ಪಡಿಸಲಾಗುವ ಅನಿಲಗಳು. ಮಿಥೇನನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ಸಂಸ್ಕರಿಸಲಾಗುತ್ತದೆ. ಪೆಟ್ರೋಲಿಯಂ ಅಥವಾ ಸಂಬಂಧಿತ ಅನಿಲಗಳನ್ನು ಬೇರ್ಪಡಿಸಿ, ಸಂಸ್ಕರಿಸುವ ಕಾರ್ಯಗಳು ಸಾಮಾನ್ಯವಾಗಿ ದೊಡ್ಡ ದೊಡ್ಡ ಪೆಟ್ರೋಲಿಯಂ ಸಂಸ್ಕರಣಾ ಘಟಕಗಳಲ್ಲಿ ನಡೆಯುತ್ತವೆ. ಸಂಸ್ಕರಿಸಿದ ನಂತರ ಅದರ ಹತ್ತನೇ ಒಂದು ಗಾತ್ರಕ್ಕೆ ಅನಿಲವನ್ನು ಇಳಿಸಿ ಟ್ಯಾಂಕರುಗಳಿಗೆ ತುಂಬಲಾಗುತ್ತದೆ. ಇಲ್ಲವೇ ಅನಿಲ ಕೊಳವೆಗಳ ಮೂಲಕ ದೇಶಾದ್ಯಂತ ಎಲ್ಲ ಭಾಗಗಳಿಗೆ ಸರಬರಾಜು ಮಾಡಲಾಗುತ್ತದೆ.

ನೈಸರ್ಗಿಕ ಅನಿಲವು ಕಡಿಮೆ ಮಲಿನಕಾರಿಯಾಗುವುದರಿಂದ ಪೆಟ್ರೋಲಿಯಂ ಮತ್ತು ಕಲ್ಲಿದ್ದಲಿಗಿಂತ ವ್ಯಾಪಕವಾಗಿ ಬಳಸಲು ಉತ್ತೇಜಿಸಲಾಗುತ್ತಿದೆ. ನೈಸರ್ಗಿಕ ಅನಿಲವನ್ನು ಇಂಧನವನ್ನಾಗಿ ಬಳಸಿದಾಗ ಕಡಿಮೆ ಇಂಗಾಲದ ಡೈ ಆಕ್ಸೈಡ್ ಉತ್ಪಾದನೆಯಾಗುವುದರಿಂದ ವಾಯು ಮಾಲಿನ್ಯ ಕಡಿಮೆ. ಪೆಟ್ರೋಲಿಯಂ ಮತ್ತು ಕಲ್ಲಿದ್ದಲಿಗೆ ಹೋಲಿಸಿದಲ್ಲಿ ಕ್ರಮವಾಗಿ ಶೇ. 30 ಮತ್ತು ಶೇ. 45ರಷ್ಟು ಕಡಿಮೆ ಇಂಗಾಲದ ಡೈ ಆಕ್ಸೈಡನ್ನು ನೈಸರ್ಗಿಕ ಅನಿಲವು ಬಿಡುಗಡೆ ಮಾಡುತ್ತದೆ.

ಗಮನಿಸಿ

ಜನಶಕ್ತಿ, ಸಂಚಿಕೆ 35, 2009 ರಲ್ಲಿ 3ನೇ ಪುಟದಲ್ಲಿ ಆಸಿಯಾನ್ ಒಪ್ಪಂದದ ದುಷ್ಪರಿಣಾಮಗಳನ್ನು ಕುರಿತು ಪ್ರಕಟವಾದ ಜಿ.ಎನ್.ನಾಗರಾಜ್‌ರವರ ಲೇಖನವು ಅಖಿಲ ಭಾರತ ಕಿಸಾನ್ ಸಭಾದ ಹೇಳಿಕೆಯನ್ನು ಆದರಿಸಿದ್ದು ಎಂಬುದನ್ನು ಗಮನಿಸಲು ಕೋರಿಕೆ

- ಸಂ.


ಬರದ ಬೆಂಕಿಗೆ ಬೇಯುತ್ತಿದೆ ಮಂಡ್ಯ

ಬರದಿಂದ ಜನ ಕಷ್ಟ ಪಡುತ್ತಿದ್ದರೆ ಸರ್ಕಾರ ನೆರವಿಗೆ ಬರುತ್ತಿಲ್ಲ. ಬದಲಾಗಿ ಬರದ ಪಟ್ಟಿ ಘೋಷಣೆಯಲ್ಲಿಯೂ ನಾಚಿಕೆಗೇಡಿನ ರಾಜಕೀಯವನ್ನೂ ನಡೆಸುತ್ತಿದೆ.

ಒಟ್ಟು ಕೃಷಿ ಯೋಗ್ಯ ಭೂಮಿಯಲ್ಲಿ ಶೇ. 60 ರಷ್ಟು ಮಳೆಯಾಶ್ರಿತ ಭೂಮಿ ಮಂಡ್ಯ ಜಿಲ್ಲೆಯದು ಎಂದರೆ ಯಾರಾದರೂ ಆಶ್ಚರ್ಯ ಪಡುತ್ತಾರೆ. ಮೇಲ್ನೋಟಕ್ಕೆ ನೀರಾವರಿ ಜಿಲ್ಲೆ ಎಂದು ಗುರುತಿಸಲ್ಪಟ್ಟಿರುವ ಮಂಡ್ಯ ಬರದ ಬೆಂಕಿಗೆ ಅಕ್ಷರಶಃ ಬೇಯುತ್ತಿದೆ. ಬಡ ಮತ್ತು ಮಧ್ಯಮ ಪ್ರಮಾಣದ ರೈತರೇ ಶೇ.90ರಷ್ಟು ಇರುವ ಈ ಜಿಲ್ಲೆ ಕೃಷಿ ಪ್ರಧಾನವಾದ ಜಿಲ್ಲೆ. ಯುಗಾದಿ ವೇಳೆಗೆ ಮೊದಲ ಮಳೆಯಾಗುತ್ತಿದ್ದು, ಜೂನ್ ಪ್ರಾರಂಭದೊಂದಿಗೆ ಮುಂಗಾರು ಮಳೆ ಬೀಳುತ್ತಿದ್ದ ಮಂಡ್ಯಕ್ಕೆ ಅಗಸ್ಟ್ ತಿಂಗಳಾದರೂ ಮಳೆ ಇಲ್ಲಾ, ಕೃಷ್ಣರಾಜ ಸಾಗರ ವಾಡಿಕೆಗಿಂತ ಮುಂಚಿತವಾಗಿ ಭರ್ತಿಯಾಗಿದ್ದರೂ, ಜಿಲ್ಲೆಯ ಯಾವುದೇ ಕೆರೆ ಕಟ್ಟೆಗಳು ತುಂಬಿಲ್ಲ. ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕಿನ ಕೆ.ಆರ್.ಎಸ್. ಆಶ್ರಿತ ಕೊನೆ ಭಾಗಕ್ಕೆ ನೀರು ಕೊಡಲು ಅಗಸ್ಟ್ ತಿಂಗಳ ಮೂರನೆ ವಾರದವರೆಗೂ ಸಾಧ್ಯವಾಗಿರಲಿಲ್ಲ. ಕೆ.ಆರ್.ಎಸ್. ಪಕ್ಕದ ನೀರಾವರಿ ಪ್ರದೇಶ ದಾಟಿ ಬರುವುದೇ ದುಸ್ತರವಾಗಿದೆ ಎಂದರೆ ಬರದ ಬವಣೆ ಯಾವ ರೀತಿ ಎಂದು ಅಂದಾಜಿಸಬಹುದು. ಜುಲೈ ತಿಂಗಳ ಮೊದಲ ವಾರದ ಹೊತ್ತಿಗೆ ಮುಕ್ತಾಯವಾಗುತ್ತಿದ್ದ ಭತ್ತದ ನಾಟಿ ಕೆಲಸ ಕೆ.ಆರ್.ಎಸ್. ಆಶ್ರಿತ ಪ್ರದೇಶದಲ್ಲೆ ಈಗ ನಡೆಯುತ್ತಿದೆ. ಕೊನೆ ಭಾಗದಲ್ಲಿ ಇನ್ನೂ ಹೊಟ್ಲು ಪಾತಿ(ಬಿತ್ತನೆ) ಕೆಲಸಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ನಾಟಿ ಮಾಡುವ ಯಾವ ಗ್ಯಾರಂಟಿಯನ್ನು ಜನ ಇಟ್ಟುಕೊಂಡಿಲ್ಲ. ನಾಟಿ ಕೆಲಸ 1 ತಿಂಗಳಿನಿಂದ 2 ತಿಂಗಳಿನ ತನಕ ವಿಳಂಬವಾಗುತ್ತಿರುವುದು ಇಳುವರಿ ಮೇಲೆ ಗಂಭೀರ ಪರಿಣಾಮ ಉಂಟಾಗಲಿದೆ.

ಮಳೆಯಾಶ್ರಿತ ಪ್ರದೇಶದಲ್ಲಿ ಅಗಸ್ಟ್ ಮೂರನೇ ವಾರದಲ್ಲಿ ಬಿದ್ದ ಮಳೆಯಿಂದಾಗಿ ಹೊಲಗಳನ್ನು ಹದಗೊಳಿಸಿ ರಾಗಿ, ಹುರಳಿ, ಜೋಳ ಮತ್ತಿತರ ಬೆಳೆಗಳಿಗೆ ಬಿತ್ತನೆ ಮಾಡಲಾಗಿದೆ. ಈ ವರ್ಷದ ಮಳೆಯ ವಾಡಿಕೆಯನ್ನು ನೋಡಿದರೆ ಈ ಬೆಳೆ ನಷ್ಟವಾಗುವ ಸಾಧ್ಯತೆಯೇ ಹೆಚ್ಚಾಗಿದೆ. ಡಿಸೆಂಬರ್ ನಂತರ ಜಾನುವಾರುಗಳ ಮೇವಿಗೆ ಹಾಹಾಕಾರ ಏಳಲಿದೆ.

ಈ ರೀತಿ ಜನ ಕಷ್ಟ ಪಡುತ್ತಿದ್ದರೆ ಬಿ.ಜೆ.ಪಿ. ನೇತೃತ್ವದ ರಾಜ್ಯ ಸರ್ಕಾರ ಜನರ ನೆರವಿಗೆ ಬರುತ್ತಿಲ್ಲ. ಕನಿಷ್ಠ ದಿನಕ್ಕೆ ಸರಿಯಾಗಿ 3ಗಂಟೆಯೂ ತ್ರಿಫೇಸ್ ವಿದ್ಯುತ್ ಸಿಗುತ್ತಿಲ್ಲ, ಪಂಪ್‌ಸೆಟ್ ಆಶ್ರಿತ ರೇಷ್ಮೆ, ಕಬ್ಬು ಒಣಗುತ್ತಿದೆ. ತಾತ್ಕಾಲಿಕ ಪಡಿತರ ಚೀಟಿಗೆ ನೀಡುತ್ತಿದ್ದ ರೇಷನ್ ಅನ್ನು ನಿಲ್ಲಿಸಲಾಗಿದೆ. ಬರದ ಇಂತಹ ಸಂದರ್ಭದಲ್ಲಿ ಜನರಿಗೆ ಸಂಜೀವಿನಿಯಾಗಿರುವ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೊಳಿಸದೇ ನಿರ್ಲಕ್ಷ್ಯ ಮಾಡಲಾಗುತ್ತಿದೆ. ಜಿಲ್ಲೆಯ ಬಹುತೇಕ ಪಂಚಾಯಿತಿಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯನ್ನು ನೆಪಕ್ಕಾಗಿ ಜಾರಿಗೊಳಿಸುತ್ತಿದ್ದು, ಪ್ರಮುಖ ಫಲಾನುಭವಿಗಳು ರಾಜಕೀಯ ಪಕ್ಷಗಳ ಹಿಂಬಾಲಕರು, ಗುತ್ತಿಗೆದಾರರೇ ಆಗಿದ್ದಾರೆ! ಕರ್ನಾಟಕ ಪ್ರಾಂತ ರೈತ ಸಂಘ, ಕೂಲಿಕಾರರ ಸಂಘ ಮತ್ತಿತರ ಪ್ರಗತಿಪರ ಸಂಘಟನೆಗಳ ಮುತುವರ್ಜಿಯಿಂದ ಜಾರಿಯಾಗಿರುವ ಕೆಲವು ಕಡೆ 2 ತಿಂಗಳಾದರೂ ಕೂಲಿ ಹಣ ನೀಡದೆ ಸತಾಯಿಸಲಾಗುತ್ತಿದೆ.



ಬರ ಪೀಡಿತ ಪ್ರದೇಶಗಳ ಘೋಷಣೆ ಪಟ್ಟಿಯಲ್ಲಿ ಬಿಜೆಪಿ ಸರ್ಕಾರ ನಾಚಿಕೆಗೇಡಿನ ರಾಜಕೀಯ ನಡೆಸುತ್ತಿದೆ. ತೀವ್ರ ಬರದ ಕಷ್ಟವನ್ನು ಅನುಭವಿಸುತ್ತಿರುವ ಮದ್ದೂರನ್ನು ಬರ ಪೀಡಿತ ಪ್ರದೇಶಗಳ ಪಟ್ಟಿಯಲ್ಲಿ ಸೇರಿಸಿಲ್ಲ. ಉಪ ಚುನಾವಣೆಯಲ್ಲಿ ಬಿ.ಜೆ.ಪಿ ಸೋತಿದ್ದರಿಂದ ಸೇಡಿನ ಕಾರಣಕ್ಕಾಗಿ ಮದ್ದೂರಿನ ಜನತೆಯನ್ನು ಬಲಿಪಶು ಮಾಡುತ್ತಿರುವುದು ಮುಂದುವರೆದಿದೆ.

■ ಯಶವಂತ

ಕ್ರಿಯಾಶೀಲ ಸಂಗಾತಿ, ರೈತ ಮುಖಂಡ

ಹೋಳೂರು ಶಂಕರ್ ಇನ್ನಿಲ್ಲ

ಕೋಲಾರ ಜಿಲ್ಲೆಯ ರೈತ ಚಳುವಳಿಯಲ್ಲಿ ಅತ್ಯಂತ ಕ್ರಿಯಾಶೀಲವಾಗಿದ್ದ ಕಾಮ್ರೇಡ್ ಹೋಳೂರು ಶಂಕರ್ ನಮ್ಮೆಲ್ಲರನ್ನೂ ಅಗಲಿದ್ದಾರೆ. 45 ವಯಸ್ಸಿನ ಶಂಕರ್ ಕೆಲ ತಿಂಗಳುಗಳಿಂದ 'ಬೋನ್‌ಮ್ಯಾರೋ' ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಅವರನ್ನು ಚಿಕಿತ್ಸೆಗಾಗಿ ಬೆಂಗಳೂರಿನ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಗೆ ಸೇರಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಇದೇ ಆಗಸ್ಟ್ 28 ರ ಬೆಳಗ್ಗೆ 6.30 ರ ಸುಮಾರಿಗೆ ಕೊನೆಯುಸಿರೆಳೆದರು. ಅವರು ಪತ್ನಿ, ಇಬ್ಬರು ಮಕ್ಕಳು, ಬಂಧುಗಳಲ್ಲದೇ ಅಪಾರ ಸಂಗಾತಿಗಳನ್ನು ಅಗಲಿದ್ದಾರೆ.

ಹೋಳೂರು ಶಂಕರ್ ಕೋಲಾರ ತಾಲ್ಲೂಕಿನ ಹೋಳೂರು ಗ್ರಾಮದಲ್ಲಿ ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿದ್ದರು. 1992-93ನೇ ಸಾಲಿನಲ್ಲಿ ವಿದ್ಯಾರ್ಥಿ ದಿಶೆಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಗೆ ಆಕರ್ಷಿತರಾಗಿ ವಿದ್ಯಾರ್ಥಿ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ನಂತರ ಎಸ್‌ಎಫ್‌ಐ ನ ಜಿಲ್ಲಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಈ ಅವಧಿಯಲ್ಲಿ ವಿದ್ಯಾರ್ಥಿ ಚಳುವಳಿ ಗಮನಾರ್ಹವಾಗಿ ಜಿಲ್ಲೆಯಾದ್ಯಂತ ವಿಸ್ತರಿಸಿತು.

ವಿದ್ಯಾರ್ಥಿ ಜೀವನದ ನಂತರ ಕೃಷಿ ಚಟುವಟಿಕೆಗಳಲ್ಲಿ ಭಾಗಿಯಾದ ಅವರು, ರೈತ ಚಳುವಳಿಗೆ ಪೂರ್ಣಾವಧಿ ಕಾರ್ಯಕರ್ತರಾಗಿ ತೊಡಗಿಕೊಂಡರು. ಕರ್ನಾಟಕ ಪ್ರಾಂತ ರೈತ ಸಂಘ (KPRS) ದಲ್ಲಿ ಕಾರ್ಯಕರ್ತರಾಗಿ ನಂತರ ಜಿಲ್ಲಾ ಸಮಿತಿಯ ಸಹ ಕಾರ್ಯದರ್ಶಿಯಾಗಿ, ರಾಜ್ಯ ಸಮಿತಿ ಸದಸ್ಯರಾಗಿಯೂ ಪ್ರಸಕ್ತವಾಗಿ ಕಾರ್ಯನಿರ್ವಹಿಸುತ್ತಿದ್ದರು. ಹಾಗೆ ಸಿಪಿಐ(ಎಂ)



ನ ಸದಸ್ಯರಾಗಿ ನಂತರದಲ್ಲಿ ನಾಯಕರಾಗಿ ಬೆಳೆದರು. ಪ್ರಸಕ್ತವಾಗಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ತಾಲ್ಲೂಕು ಸಮಿತಿಯ ಕಾರ್ಯದರ್ಶಿಯಾಗಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ ಟೊಮ್ಯಾಟೋ, ಆಲೂಗಡ್ಡೆ, ಇತ್ಯಾದಿ ಫಸಲಿಗೆ ಬೆಲೆ ಸಿಗದೇ ರೈತರು ತತ್ತರಿಸುತ್ತಿರುವಾಗ ನ್ಯಾಯಕ್ಕಾಗಿ ಆ ರೈತರ ಚಳುವಳಿ ನಡೆದದ್ದು, ಅದರಲ್ಲಿ ಕಾಂ. ಶಂಕರ್‌ರವರ ಪಾತ್ರ ಮಹತ್ವದ್ದು. ಮಾತ್ರವಲ್ಲ ರೈತ-ಕೂಲಿಕಾರರ ಪ್ರಶ್ನೆಗಳಿಗೆ ಸದಾ ಮಧ್ಯಪ್ರವೇಶಿಸಿ ಹೋರಾಟ ಸಂಘಟಿಸುವಲ್ಲಿ ಶಂಕರ್ ಶ್ರಮ ಪ್ರಧಾನವಾದುದು.

ಇಂತಹ ಕ್ರಿಯಾಶೀಲ, ಪ್ರಜ್ಞಾವಂತ ಸಂಗಾತಿಯಾಗಿದ್ದ ಕಾಮ್ರೇಡ್ ಹೋಳೂರು ಶಂಕರ್‌ರವರ ಅಕಾಲಿಕ ನಿಧನ ಜನತೆಯ ಪ್ರಜಾಸತ್ತಾತ್ಮಕ ಚಳುವಳಿಗೆ, ಸಿಪಿಐ(ಎಂ) ಪಕ್ಷಕ್ಕೆ ಅಪಾರ ನಷ್ಟ ತಂದಿದೆ. ದುಡಿವ ಜನರ ನೆಚ್ಚಿನ ಒಡನಾಡಿ ಶಂಕರ್‌ರವರಿಗೆ ಜನಶಕ್ತಿ ಸಂತಾಪ ಸೂಚಿಸಿದೆ.

ಅವರ ಅಂತ್ಯಕ್ರಿಯೆಯು ಹುಟ್ಟೂರು ಹೋಳೂರಿನಲ್ಲಿ 28 ರಂದೇ ನಡೆಯಿತು. ರೈತ ಸಂಘ-ಸಿಪಿಐ(ಎಂ) ಪಕ್ಷ ಹಾಗೂ ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರು, ಜನತೆ ಅಪಾರ ಪ್ರಮಾಣದಲ್ಲಿ ಭಾಗವಹಿಸಿದ್ದರು.

ಬೇರೆ 'ಪ್ರತಿಮೆ' ಸಿಗಲಿಲ್ಲವೇ?



"ಹೆಣ್ಣು ಹೆಣ್ಣೆಂದೇಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು"

ಇದು ಮೈಸೂರು ಸಂಸ್ಥಾನದ ಒಡೆಯರುಗಳ ಆಸ್ಥಾನದಲ್ಲಿ ಎಲೆಅಡಿಕೆಯ ಸಂಚಿಯ-ಚೀಲವನ್ನು ಹಿಡುಕೊಂಡು ಯಾವಾಗಲೂ ಎಲೆ ಅಡಿಕೆ ಒದಗಿಸುವ ಕೆಲಸ ಮಾಡುತ್ತಿದ್ದ ಸಂಚಿಯ ಹೊನ್ನಮ್ಮ ಎಂಬ ದುಡಿಯುವ ವರ್ಗದ ಮಹಿಳೆ ಎಸೆದ ಪ್ರಶ್ನೆ. ಆ ಪ್ರಶ್ನೆಯನ್ನು 21ನೆಯ ಶತಮಾನದಲ್ಲಿ ಮೂರು ಜನ ಮಹಿಳೆಯರು ಪ್ರಸಿದ್ಧ ಚಿತ್ರ ನಿರ್ದೇಶಕ, ಕಾದಂಬರಿಕಾರ ನಾಗತಿಹಳ್ಳಿ ಚಂದ್ರಶೇಖರ್‌ರವರಿಗೆ ಎಸೆದಿದ್ದಾರೆ. ಮಯೂರ ಮಾಸ ಪತ್ರಿಕೆಯ ಜೂನ್ 2009 ರ ಸಂಚಿಕೆಯಲ್ಲಿ ವಿಶ್ವದ್ಯಾಲಯಗಳನ್ನು, ಅವುಗಳಲ್ಲಿ ನಡೆಯುತ್ತಿರುವ ಸಂಶೋಧನೆಯನ್ನು ಟೀಕಿಸಲು ಮಹಿಳೆಯ ಮೆನೋಪಾಸ್(ಮುಟ್ಟು ನಿಲ್ಲುವ ಹಂತ)ಗೆ ಹೋಲಿಸಿದ್ದಾರೆ. ಆ ಮೂಲಕ ಮಹಿಳೆಯರ ಋತುಚಕ್ರ ನಿಲ್ಲುವ ಅಥವಾ ಗರ್ಭಿಣಿಯಾಗುವ ಹಂತವನ್ನು ದಾಟಿದ ಕೂಡಲೆ ಮಹಿಳೆ ನಿರುಪಯುಕ್ತಳು ಎಂದು, ಹೆಣ್ಣು ಕೇವಲ ಒಂದು ಹೆರುವ ಯಂತ್ರ ಮಾತ್ರ, ಅದರ ಜೊತೆಗೆ ಅವರ ಎಲ್ಲಾ ಉಪಯುಕ್ತತೆಯೂ ಮುಗಿಯಿತು ಎನ್ನುವಂತೆ ಚಿತ್ರಿಸಿರುವುದು ಪುರುಷಾಹಂಕಾರದ ಮನೋಭಾವದ ಸಂಕೇತ. ಇದನ್ನು ಮೂರು ಜನ ಮಹಿಳೆಯರು ಪತ್ರ ಬರೆದು ಟೀಕಿಸಿದ್ದಾರೆ. ಮಯೂರದ ಆಗಸ್ಟ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಈ ಪತ್ರಗಳಿಂದ ಆಯ್ದ ಕೆಲ ಭಾಗಗಳನ್ನು ಈ ಕೆಳಗೆ ನೀಡಲಾಗಿದೆ.

● ● ●



"ಹಿಂದಿನಿಂದಲೂ ಒಬ್ಬನನ್ನು ಹೇಡಿ ಅನ್ನೋದಕ್ಕೆ ಅವನು 'ಹೆಣ್ಣಿಗ' ಅನ್ನೋದು, ಹೆಣ್ಣನ್ನು 'ಬಾಳೆ'ಗೆ ಹೋಲಿಸೋದು. ಆಕೆಯನ್ನು ಮರಕ್ಕೆ ಸುತ್ತಿಕೊಂಡ ಬಳ್ಳಿಗೆ ಹೋಲಿಸೋದು ಮುಂತಾದವನ್ನು ಕಾಣುತ್ತೇವೆ. ನಾವು ಪ್ರಜ್ಞಾಪೂರ್ವಕವಾಗಿ ಇಂಥ ಮೆಟಫರ್‌ಗಳನ್ನು ಭಂಗಿಸಬೇಕೆಂದು ಕೊಳ್ಳುತ್ತಿರುವಾಗಲೇ ಮತ್ತೆ ಇದೇ ಅರ್ಥದ ಇನ್ನೊಂದು ರೀತಿಯ ಅಭಿವ್ಯಕ್ತಿ ಕಾಣಿಸಿಕೊಳ್ಳುತ್ತಿರುವುದು ವಿಪರ್ಯಾಸ.

ನಾಗತಿಹಳ್ಳಿಯವರು ಲೇಖನದಲ್ಲಿ ಬಳಸುವ ಮೆನೋಪಾಸ್‌ನ ಮೆಟಫರ್ ಅನಾರೋಗ್ಯಕರ. ಔಟ್‌ಡೇಟೆಡ್ ಅನ್ನುವುದಕ್ಕೆ ಹೋಲಿಕೆಯಾಗಿ ಮೆನೋಪಾಸ್ ಪದ ಬಳಸುವ ಮನಸ್ಥಿತಿಯನ್ನು ಪ್ರಶ್ನಿಸಬೇಕಾದ ಅಗತ್ಯವಿದೆ."

- ಭಾರತಿದೇವಿ. ಪಿ

●

"ಮುಟ್ಟು, ಮಗು, ಮೆನೋಪಾಸ್ ಎನ್ನುವ ಘಟ್ಟಗಳ ನಂತರ ಸ್ತ್ರೀಯಲ್ಲಿ ನಡೆಯುವ ಅಂತರಂಗದ, ಬೌದ್ಧಿಕತೆಯ ಬದಲಾವಣೆಗಳನ್ನು ಚಿಂತನೆಯಲ್ಲಿ ಕಾಣುವ ಬದಲಾವಣೆಗಳು 'ಜೀವನ ಪ್ರಗತಿ'ಯೇ ಅಲ್ಲ ಎನ್ನುವುದು ನಾಗತಿಹಳ್ಳಿಯವರ ತೀರ್ಪೇ?"

- ಕೋಡಿಬೆಟ್ಟು ರಾಜಲಕ್ಷ್ಮಿ

●

"ಪುರುಷರು ಅದರಲ್ಲಿಯೂ ಮೇಲ್ವರ್ಗದ ಪುರುಷರು ನಿಸರ್ಗದಲ್ಲಿರುವ ಎಲ್ಲ ಪ್ರಾಣಿ, ಪಕ್ಷಿಗಳು, ನಿರ್ಜೀವ ವಸ್ತುಗಳು, ಸ್ತ್ರೀಯರು ಹಾಗೂ ದಲಿತರು, ಹೀಗೆ ಈ ಜಗತ್ತಿನ ಚರಾಚರಗಳ ಕುರಿತು ಎಲ್ಲ ಬಗೆಯ ಅಧಿಕಾರ ಹಾಗೂ ತಾವೊಂದು ವ್ಯಾಖ್ಯಾನ ಮಾಡುವ ಹಕ್ಕು ಹೊಂದಿದ್ದೇವೆ ಮತ್ತು ತಮ್ಮ ವ್ಯಾಖ್ಯಾನವೇ ಅಂತಿಮ ಎಂಬ ಭಾವನೆಯಿಂದ ಇನ್ನೂ ಹೊರಬಂದಿಲ್ಲ. ಹೊರಬರುವ ಲಕ್ಷಣಗಳೂ ಕಾಣುತ್ತಿಲ್ಲ. ಮಾಸಿಕ ಋತುಚಕ್ರ, ಮೆನೋಪಾಸ್ ಇಂಥ ಸಹಜ ಪ್ರಕ್ರಿಯೆಗಳನ್ನು ಎಂದೂ ಅನುಭವಿಸದ ಪುರುಷರು ಏನನ್ನೋ ವಿವರಿಸಲು ಅವುಗಳನ್ನು ರೂಪಕವಾಗಿ ಬಳಸುವುದು ತಮಾಷೆಯೆನ್ನಿಸುತ್ತದೆ."

- ಸುಮಂಗಲಾ

ಚಂದಾದಾರರಿಗೆ ಮನವಿ

ದಯಮಾಡಿ ಪತ್ರಿಕೆಯ ಚಂದಾ ಅವಧಿ ಮುಗಿಯುವ ಮೊದಲೇ ನವೀಕರಣ ಮಾಡಿ. ತಮಗೆ ತಲುಪುವ ಪತ್ರಿಕೆಯಲ್ಲಿ ವಿಳಾಸದ ಮೇಲೆ ಪತ್ರಿಕೆ ಕಳಿಸಲಾರಂಭಿಸಿದ ದಿನಾಂಕ - ಮುಗಿಯುವ ದಿನಾಂಕ ಎರಡನ್ನೂ ನಮೂದಿಸಲಾಗಿರುತ್ತದೆ ಗಮನಿಸಿ. ಮುಂಚಿತವಾಗಿ ನವೀಕರಿಸಿ.

ಚಂದಾ ದರ ವಿವರ

ವಾರ್ಷಿಕ	:	250.00 ರೂ.
ದ್ವೈ ವಾರ್ಷಿಕ	:	500.00 ರೂ.
ಪಂಚವಾರ್ಷಿಕ	:	1250.00 ರೂ.

ಈ ವಿಚಾರವಾಗಿ ನೀವು ಸಂಪರ್ಕಿಸ ಬೇಕಾದವರು

ವೀರಣ್ಣ ಕಲ್ಮನಿ : 9379268990.
(ಗಮನಿಸಿ: ದೂರವಾಣಿ ಸಂಖ್ಯೆ ಬದಲಾಗಿದೆ)

- ಸಂ

ಬರಹಗಾರರು, ವರದಿಗಾರರ ಗಮನಕ್ಕೆ

'ಜನಶಕ್ತಿ'ಯ ಮೇಲೆ ಅಭಿಮಾನವಿಟ್ಟು ಲೇಖನ, ಅಂಕಣ, ವರದಿ, ಫೋಟೋ ಕಳಿಸುತ್ತಿರುವ ವರದಿಗಾರರು, ಬರಹಗಾರರ ಗಮನಕ್ಕೆ. ಪತ್ರಿಕೆಯು ಶನಿವಾರ ಅಂತಿಮಗೊಂಡು ಭಾನುವಾರ ಮುದ್ರಣಕ್ಕೆ ಹೋಗುವ ಕ್ರಮವನ್ನು ಬದಲಿಸಲಾಗಿದೆ. ಪತ್ರಿಕೆಯು ಗುರುವಾರ ಸಿದ್ದಗೊಂಡು ಶುಕ್ರವಾರ ಮುದ್ರಣಕ್ಕೆ ಹೋಗಲಿದೆ.

ನಿಮ್ಮ ಬರಹ, ಫೋಟೋಗಳು ಬುಧವಾರ ನಮಗೆ ತಲುಪಿದಲ್ಲಿ ಮಾತ್ರವೇ ಆ ವಾರಕ್ಕೆ ಆ ಸುದ್ದಿ, ವರದಿಗಳನ್ನು, ಲೇಖನಗಳನ್ನು ಪ್ರಕಟಿಸಲು ಸಾಧ್ಯ. ಹೀಗಾಗಿ ಬದಲಾದ ಸಮಯಕ್ಕೆ ತಕ್ಕಂತೆ ಬರಹಗಳನ್ನು ಕಳಿಹಿಸಲು ಕೋರಲಾಗಿದೆ.

- ಸಂಪಾದಕರು


ಸುದ್ದಿ ಬಿಂಬ

ಒತ್ತಡಕ್ಕೆ ಮಣಿಯದಿರಿ

ಕುವೆಂಪು ವಿಶ್ವವಿದ್ಯಾಲಯದಲ್ಲಿ ಕೆಲವು ಇಂಗ್ಲಿಷ್ ಪಠ್ಯಗಳಿಗೆ ಸಂಬಂಧಿಸಿದಂತೆ ಎದ್ದಿರುವ ವಿವಾದ ಮೇಲ್ನೋಟಕ್ಕೆ ಸಾಮಾನ್ಯದ್ದು ಎಂಬಂತೆ ಕಂಡುಬಂದರೂ ಅದರ ಹಿಂದೆ ಬಿಜೆಪಿ ಮನಸ್ಸು ಕೆಲಸ ಮಾಡಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಗಿರೀಶ್ ಕಾರ್ನಾಡ್ ಅವರ 'ತುಘಲಕ್' ನಾಟಕದ ಇಂಗ್ಲಿಷ್ ಅನುವಾದವನ್ನು, ಸಮಾಜ ವಿಜ್ಞಾನಿ ಆಶಿಶ್ ನಂದಿ, ಪತ್ರಕರ್ತ ಸಾಯಿನಾಥ್ ಅವರ ಲೇಖನಗಳನ್ನು ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿಗಳು ಓದಬೇಕಾದುದು ಅನಿವಾರ್ಯವೇ ಎಂಬಂಥ ಪ್ರಶ್ನೆಗಳನ್ನು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ಕೆಲವು ಸದಸ್ಯರು ಕೇಳಿ ಆಶ್ಚರ್ಯ ಹುಟ್ಟಿಸಿದ್ದಾರೆ. ವಿದ್ಯಾರ್ಥಿಗಳು ಗಿರೀಶ್ ಕಾರ್ನಾಡರ ಅನುವಾದಿತ ನಾಟಕ ಓದುವ ಅಗತ್ಯವೇನಿದೆ ಎಂದು ಪ್ರಶ್ನಿಸಿರುವ ಸದಸ್ಯರು ಇಂಗ್ಲಿಷ್ ಭಾಷೆಯಲ್ಲಿನ ಉತ್ತಮ ನಾಟಕವೊಂದನ್ನು ನಿಗದಿ ಮಾಡದಿರುವುದಕ್ಕೆ ಆಕ್ಷೇಪ ವ್ಯಕ್ತಮಾಡಿದ್ದಾರೆ. ಸಾಯಿನಾಥ್ ಲೇಖನದಲ್ಲಿ ಅಂಬೇಡ್ಕರ್ ಅವರನ್ನು ವೈಭವೀಕರಿಸಲಾಗಿದೆ ಎಂದು ಆಕ್ಷೇಪ ವ್ಯಕ್ತ ಮಾಡಿದ್ದರೆ, ಆಶಿಶ್ ನಂದಿ ಅವರ ಲೇಖನದಲ್ಲಿ ಅಡ್ವಾಣಿ ಮತ್ತು ಬಾಳ ಠಾಕ್ರೆ ಅವರನ್ನು ಚಿತ್ರಿಸಿರುವ ರೀತಿ ಪೂರ್ವಗ್ರಹಪೀಡಿತವಾದುದು ಎಂದು ದೂರಲಾಗಿದೆ. ಇಂಗ್ಲಿಷ್ ಭಾಷೆಯನ್ನು ಕಲಿಯುವವರು ಮೂಲ ಇಂಗ್ಲಿಷ್ ಭಾಷಾ ಕೃತಿಗಳನ್ನೇ ಓದಬೇಕೆನ್ನುವುದು ಮೂರ್ಖತನ. ಅಷ್ಟೇ ಅಲ್ಲ ಅವರ ಆಲೋಚನಾ ಕ್ರಮ ವಸಾಹತುಶಾಹಿ ಪ್ರಣೀತವಾದುದು. ಹಾಗೆ ನೋಡಿದರೆ ಇಪ್ಪತ್ತನೇ ಶತಮಾನದಲ್ಲಿ ಉತ್ತಮ ಚಿಂತನೆ ಹೊರಬಂದಿರುವುದು, ಸಾಹಿತ್ಯ ಸೃಷ್ಟಿಯಾಗಿರುವುದು ಇಂಗ್ಲಿಷೇತರ ಭಾಷೆಗಳಲ್ಲಿ, ಸಮಕಾಲೀನ ವಿಚಾರಧಾರೆ ಮತ್ತು ರಾಜಕೀಯ ಹಾಗೂ ಸಾಂಸ್ಕೃತಿಕ ತಲ್ಲಣಗಳನ್ನು ಅರ್ಥ ಮಾಡಿಕೊಳ್ಳಲು ಇಂಗ್ಲಿಷೇತರ ಭಾಷೆಗಳ ಅಧ್ಯಯನ ಈಗ ಅನಿವಾರ್ಯವಾಗಿದೆ. ಈ ದೃಷ್ಟಿಯಿಂದ ನೋಡಿದರೆ ಕುವೆಂಪು ವಿಶ್ವವಿದ್ಯಾಲಯದ ಶೈಕ್ಷಣಿಕ ಮಂಡಳಿ ಆಶಿಶ್ ನಂದಿ, ಸಾಯಿನಾಥ್, ಡೆರಿಡಾ, ಚಾಮ್‌ಸ್ಕಿ ಅವರ ಬರಹಗಳನ್ನು ಪಠ್ಯಪುಸ್ತಕಗಳಲ್ಲಿ ಸೇರಿಸುವ ಮೂಲಕ ಶ್ಲಾಘನೀಯ ಕೆಲಸ ಮಾಡಿದೆ.

ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿನ ವಿವಿಧ ತರಗತಿಗಳಿಗೆ ಅಲ್ಲಿನ ಶೈಕ್ಷಣಿಕ ಮಂಡಳಿ ಪಠ್ಯಪುಸ್ತಕ ನಿಗದಿ ಮಾಡುತ್ತದೆ. ಕುವೆಂಪು ವಿ.ವಿ.ಯಲ್ಲಿಯೂ ಹಾಗೆಯೇ ಆಗಿದೆ. ಆದ್ದರಿಂದ ಸಿಂಡಿಕೇಟ್ ಸದಸ್ಯರು ವ್ಯಕ್ತಮಾಡಿರುವ ಆಕ್ಷೇಪ ಅರ್ಥಹೀನವಾದದ್ದು. ಈ ಆಕ್ಷೇಪಗಳನ್ನು ಕುಲಪತಿಗಳು ಶೈಕ್ಷಣಿಕ ಮಂಡಳಿಯ ಪರಿಶೀಲನೆಗೆ ಕಳಿಹಿಸಿರುವುದು ಸರಿಯಾದ ಕ್ರಮ. ಶೈಕ್ಷಣಿಕ ಮಂಡಳಿ ಯಾವುದೇ ಕಾರಣಕ್ಕೆ ಒತ್ತಡಕ್ಕೆ ಒಳಗಾಗಬಾರದು. ಸಮಕಾಲೀನ ಸಾಹಿತ್ಯ, ವಿಚಾರಗಳುಳ್ಳ ಪಠ್ಯಗಳನ್ನು ಉಳಿಸಿಕೊಳ್ಳುವ ಮೂಲಕ ಶೈಕ್ಷಣಿಕ ಸ್ವಾತಂತ್ರ್ಯವನ್ನು ಕಾಪಾಡಬೇಕು. ಕೇಂದ್ರ ಮತ್ತು ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಾಗಲೆಲ್ಲಾ ಶೈಕ್ಷಣಿಕ ವಿಚಾರಗಳಲ್ಲಿ ಬಿಜೆಪಿ ಹಸ್ತಕ್ಷೇಪ ಮಾಡುತ್ತಾ ಬಂದಿರುವುದು ಇತಿಹಾಸ. ಕುವೆಂಪು ವಿವಿ ಪಠ್ಯಗಳ ವಿಚಾರದಲ್ಲಿ ಹಾಗೆ ಆಗದಿರುವಂತೆ ನೋಡಿಕೊಳ್ಳಬೇಕಾದುದು ಸಮಕಾಲೀನ ಚಿಂತಕರ, ಶಿಕ್ಷಣತಜ್ಞರ, ಅಧ್ಯಾಪಕರ ಜವಾಬ್ದಾರಿ.

'ಪ್ರಜಾವಾಣಿ'
ಸಂಪಾದಕೀಯದಿಂದ



ಸುಮಾರು ಅರ್ಧಶತಮಾನಗಳ ಕಾಲದಲ್ಲಿ ಕರ್ನಾಟಕ ಕರಾವಳಿಯ ಮೀನುಗಾರಿಕೆಯಲ್ಲಿ ಹಾಗೂ ಮೀನುಗಾರರ ಬದುಕಿನಲ್ಲಿ ಕಂಡುಬಂದ ಸ್ಥಿತ್ಯಂತರಗಳೇನು?

ಹೊರಳು ದಾರಿಯಲ್ಲಿ ಕರಾವಳಿ ಮೀನುಗಾರಿಕೆ

ವಾಸುದೇವ ಉಚ್ಚಿಲ

ದಕ್ಷಿಣ ಕನ್ನಡ ಕಡಲ ಮೀನುಗಾರಿಕೆ ಆಧುನಿಕತೆಯನ್ನು ಕೂಡಿಸಿಕೊಂಡಿದ್ದು 1960ರಿಂದ ಈಚೆಗೆ. ಅಲ್ಲಿನವರೆಗೆ ಸಾಂಪ್ರದಾಯಕ ಪದ್ಧತಿಯ ಮೀನುಗಾರಿಕೆ ರೂಡಿಯಲ್ಲಿತ್ತು. ಅರವತ್ತರ ದಶಕದಲ್ಲಿ ಯಾಂತ್ರಿಕ ದೋಣಿಗಳು ನಿಧಾನವಾಗಿ ಕಡಲು ಪ್ರವೇಶಿದ್ದು; ಇವತ್ತು ನಾವು ಬಹುಅಂಶ ಯಾಂತ್ರಿಕ ದೋಣಿಗಳ ಮೀನುಗಾರಿಕೆಯನ್ನೇ ಕಾಣುತ್ತಿದ್ದೇವೆ.

ಕಾಸರಗೋಡಿನಿಂದ ತೊಡಗಿ ಶಿರೂರುವರೆಗಿನ ಕಡಲತೀರದಲ್ಲಿ ಮೀನುಗಾರಿಕೆಯನ್ನು ಜಾತಿವೃತ್ತಿಯಾಗಿ ಮಾಡಿಕೊಂಡಿರುವ ಸಮುದಾಯಗಳು ಮೊಗವೀರ, ಖಾರ್ವಿ, ಬೋವಿ ಇತ್ಯಾದಿ. ಬ್ಯಾರಿ ಸಮುದಾಯದವರೂ ಸಾಕಷ್ಟು ಸಂಖ್ಯೆಯಲ್ಲಿ ಅವತ್ತೂ ಇವತ್ತೂ ಕರವಾಳಿಯಲ್ಲಿ ಮೀನುಗಾರಿಕೆಯ ವೃತ್ತಿಯನ್ನು ಅವಲಂಬಿಸಿದವರಿದ್ದಾರೆ. ಬೀಸುಬಲೆ, ಕಂತುಬಲೆ, ಪಡ್ಯಬಲೆ, ರಂಪಣಬಲೆ (ಇದನ್ನು ಕೋಟದ ಕಡೆ ಮಾರಿಬಲೆ ಎನ್ನುತ್ತಿದ್ದರು), ಮಾರಿಬಲೆ ಮೊದಲಾದ ವಿವಿಧ ರೀತಿಯ ಬಲೆಗಳನ್ನು ಆ ಬಲೆಗಳನ್ನು ಕಡಲಲ್ಲಿ




ಒಯ್ಯುವ ವಿವಿಧ ಬಗೆಯ ದೋಣಿಗಳನ್ನು ಈ ವೃತ್ತಿಯಲ್ಲಿ ಬಳಸಿ ಕೊಳ್ಳಲಾಗುತ್ತಿತ್ತು. ಮಳೆಗಾಲವೆಂಬುದು ಬೆಸ್ತರಿಗೆ ದುಡಿಮೆ ಇಲ್ಲದ ದಿನಗಳು-ಕಾರಣ ಆ ದಿನಗಳಲ್ಲಿ ಕಡಲು ಉಬ್ಬರವೆದ್ದು ದೋಣಿ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಹಾಡದೋಣಿಗಳ ಆ ಕಾಲದಲ್ಲಂತೂ ಕಡಲು ಹೆಚ್ಚಿಗೆ ಶಾಂತವಾಗದೆ ದೋಣಿಗಳು ಇಳಿಯುವಂತೆಯೂ ಇರಲಿಲ್ಲ.

ವೈಯಕ್ತಿಕವಾಗಿ ಮೀನು ಹಿಡಿಯಬಹುದಾದ ವಿಧಾನಗಳಲ್ಲಿ ಬೀಸುಬಲೆ, ಗಾಳ(ಬೇಪು), ಇಡುಬಲೆ ಮೊದಲಾದ ವಿಧಾನಗಳನ್ನು ಇವತ್ತೂ ಕೂಡಾ ಹ್ಯಾಸಿಗಳು, ದುಡಿಮೆಗಾರರು ಬಳಸುತ್ತಿದ್ದಾರೆ. ಎರಡೋ, ಮೂರೋ, ನಾಲ್ಕೋ ಜನರು ಪುಟ್ಟ ದೋಣಿ(ಓಡ, ಪಾತಿ)ಗಳಲ್ಲಿ ಹೋಗಿ ಕಡಲಮಧ್ಯೆ ಬೀಸುವ ಬೀಸುಬಲೆ, ಕಂತುಬಲೆಗಳು ಆ ದಿನಗಳಲ್ಲಿ ವ್ಯಾಪಕವಾಗಿ ಜಾಲ್ತಿಯಲ್ಲಿದ್ದವು. ಆ ಬಲೆಗಳಲ್ಲೇ ಬೇರೆ ಬೇರೆ ಜಾತಿಯ ಮೀನುಗಳನ್ನು ಅವುಗಳ ಗಾತ್ರ ಸ್ವರೂಪದಿಂದ ಹಿಡಿಯಬಹುದಾಗಿದ್ದ- ಆ ಮೀನುಗಳ ಹೆಸರಿರುವ ಬಲೆಗಳೂ ರೂಡಿಯಲ್ಲಿ ಅವತ್ತೂ ಇದ್ದವ, ಇವತ್ತೂ ಇವೆ-ಸಿಗಡಿ ಬಲೆ, ಮಾಂಜಿಬಲೆ ಇತ್ಯಾದಿ.

ಸಹಕಾರ

ಜೋಡಿ ದೋಣಿಗಳು ಹಾಗೂ ಹತ್ತಿಪ್ಪತ್ತು ಸದಸ್ಯರ ಸಹಾಯದಿಂದ ನಿರ್ವಹಿಸುವ ಮೀನುಗಾರಿಕೆ-ಪಟ್ಟೆಬಲೆ. ಸಾಮಾನ್ಯವಾಗಿ ಈ ಪಟ್ಟೆಬಲೆ ಜೋಡಿಯ ಸದಸ್ಯರು ತಮ್ಮತಮ್ಮಲ್ಲೇ ಬಲೆಯ ತುಂಡುಗಳನ್ನು ತಮ್ಮ ಸಂಘಕ್ಕೆ ಒದಗಿಸುತ್ತಾರೆ. ಅವಶ್ಯಕತೆ ಅರಿತು ಆ ಬಲೆಗಳನ್ನು ಒಂದಕ್ಕೊಂದು ಜೋಡಿಸಿ ಕೊಂಡು ಉದ್ದವಾಗಿಸಿ ಕೊಳ್ಳುತ್ತಾರೆ. ಸಾಮಾನ್ಯವಾಗಿ ಈ ಪಟ್ಟೆಬಲೆ ಜೋಡಿಗಳಲ್ಲಿ ದೋಣಿಗಳನ್ನು ಒದಗಿಸುವ ಯಜಮಾನ ಒಬ್ಬಾತ ಇರುತ್ತಾನೆ. ಆತನೂ ಒಳಗೊಂಡಂತೆ ಇತರರೂ ಬಲೆ ಒದಗಿಸುವ ಮೂಲಕ ಹಾಗೂ ದುಡಿಯುವ ಮೂಲಕ ಸಂಘದ ಪಾಲುದಾರರಾಗಿರುತ್ತಾರೆ. ಬಲೆ ನೀಡದೆ ಕೇವಲ ಕೂಲಿಮಾಡುವ ಬೆಸ್ತರೂ ಇದ್ದಾರೆ. ಲಭ್ಯವಾದ ಮೀನನ್ನು ದೋಣಿಯಪಾಲು, ಬಲೆಯಪಾಲು ಎಂದು ವಿಂಗಡಣೆ ಮಾಡುತ್ತಾರೆ. ಕೆಲವೊಮ್ಮೆ ಮೀನ್ನು ಮಾರಿ ಬಂದ ದುಡ್ಡನ್ನು ದೋಣಿ, ಬಲೆ, ಕೂಲಿ ಎಂಬುದಾಗಿ ಪಾಲು ಮಾಡುವುದುಂಟು; ಇಲ್ಲಿ ಮೂಲ ಬಂಡವಾಳವಾದ ದೋಣಿಪಾಲು ಹೆಚ್ಚಿರುತ್ತದೆ. ಸಾಮಾನ್ಯವಾಗಿ ಜೋಡಿದೋಣಿ ಇಟ್ಟುಕೊಂಡವರು ಬೆಸ್ತ ಸಮಾಜದಲ್ಲಿ ಸಣ್ಣ ಮಟ್ಟಿನ ಸಾಹುಕಾರರು ಎನಿಸಿಕೊಂಡಿರುತ್ತಾರೆ. ಪ್ರಧಾನವಾಗಿ ಬಂಗುಡೆ ಮೀನನ್ನು ಈ ಬಲೆಯಲ್ಲಿ ಹಿಡಿಯಲಾಗುತ್ತಿದೆ.

ರಂಪಣಬಲೆ ಎಂಬ ಬಲೆ ಮತ್ತು ಅದರಲ್ಲಿ ಮೀನುಹಿಡಿಯುವ ವಿಧಾನ ಈಗ ಬಹುಶ: ಕರಾವಳಿಯಿಂದ ಕಾಲುಕಿತ್ತಿರುವ ಒಂದು ಪ್ರಧಾನ ಮೀನುಗಾರಿಕಾ ವಿಧಾನ. 60ರಿಂದ 100 ಜನ ಸದಸ್ಯರು ಒಂದು ಸಂಘಟನೆಯಾಗಿ ಕಡಲಿನ ತೀರದ ಸಾಕಷ್ಟು ವಿಸ್ತಾರವಾದ ಭಾಗವನ್ನು ಅಳವಡಿಸಿಕೊಂಡು ಮೀನು ಹಿಡಿಯುವ ವಿಧಾನ ಇದು. ಕಡಲತಡಿಯಿಂದ ಇಂಗ್ಲಿಷ್‌ನ U ಅಕ್ಷರದ ಆಕಾರದಲ್ಲಿ ದೊಡ್ಡ ಬಲೆಯೊಂದನ್ನು ಕಡಲ ತೀರದ ವಿಸ್ತಾರವಾದ ಪ್ರದೇಶದಲ್ಲಿ ಹರಡಿ ಮೀನುಹಿಡಿಯುವ ಈ ಬಲೆಗೆ 'ಪಡವು' ಎಂಬ ಹೆಸರಿನ 100 ಮಂದಿ ಕುಳಿತುಕೊಳ್ಳಬಹುದಾದ ದೊಡ್ಡ ದೋಣಿ ಹಾಗೂ ಇತರ ಸಹಾಯಕ ದೋಣಿಗಳೂ ಇರುತ್ತಿದ್ದವು. ಈ ದೊಡ್ಡ ರಂಪಣಿ ಫಂಡಿಗೆ ಸದಸ್ಯರಲ್ಲಿ ಹೆಚ್ಚಿನವರು ತಮ್ಮ ಬಲೆತುಂಡುಗಳನ್ನು ಪಾಲು ನೀಡುತ್ತಿದ್ದರು. ಕೋಟ ಕುಂದಾಪುರ ಪ್ರದೇಶಗಳಲ್ಲಿ ಸ್ವಂತಕ್ಕೆ ಇಂಥ ದೊಡ್ಡ ಪಡವು ಬಲೆ ಹೊಂದಿದ ಯಜಮಾನರು(ಇವರಲ್ಲಿ ಬ್ರಾಹ್ಮಣರೂ ಬಂಟರೂ ಇದ್ದರು ಎಂಬುದು ಗಮನಾರ್ಹ) ತಮ್ಮ ರಂಪಣ ಫಂಡಿನಲ್ಲಿ ಮೀನುಗಾರರನ್ನು ದುಡಿಸಿಕೊಳ್ಳುತ್ತಿದ್ದರು. ಕೆಲವು ಫಂಡುಗಳ ಸದಸ್ಯರು ಪಡವು, ಬಲೆಗಳಿಗೆ ತಾವೇ ಪಾಲು ಒದಗಿಸಿದ್ದರು. ಐವತ್ತು ನೂರು ವರ್ಷಗಳಿಗೂ ಮೀರಿ ಕೆಲವು ಫಂಡುಗಳು ಕಾರ್ಯನಿರ್ವಹಿಸಿರಬೇಕು(ಈ ಬಗ್ಗೆ ಅಧ್ಯಯನ ನಡೆಯಬೇಕಿದೆ). ಬಲೆ ಒದಗಿಸದ ಸದಸ್ಯರು(ಹಂಗಾಮಿಗಳು) ದುಡಿಮೆಯ ಕೂಲಿ ಪಡೆಯುತ್ತಿದ್ದರೆ, ಬಲೆ ಒದಗಿಸಿದ ಸದಸ್ಯರು ಬಲೆಯ ಪಾಲನ್ನು ಜೊತೆಯಲ್ಲೇ ಪಡೆಯುತ್ತಿದ್ದರು.





ಮೀನುಗಾರಿಕೆಯಲ್ಲಿ ಇಷ್ಟೊಂದು ಸುವ್ಯವಸ್ಥಿತವಾಗಿ ಸಾಮೂಹಿಕ ದುಡಿಮೆಯ ವಿಧಾನ, ಆ ಬಳಿಕದ ಯಾಂತ್ರೀಕರಣದ ಯುಗಲ್ಲಿಯೂ ಬಂದಿರುವುದಿಲ್ಲ.

ಮಾಂಬಲೆ ದೋಣಿಗಳು, ರಾತ್ರಿಬಲೆ(ಒಡುಬಲೆ) ದೋಣಿಗಳು ಇತ್ಯಾದಿ ದೋಣಿ ಹಾಗೂ ಬಲೆಗಳೂ ಚಾಲ್ತಿಯಲ್ಲಿದ್ದವು. ಮಳೆಗಾಲ ಬಂತೆಂದರೆ ಕಡಲ ದೋಣಿಗಳಿಗೆ ವಿಶ್ರಾಂತಿ. ಬಳಿಕ ಕಡಲಿಗೆ ಸೇರುವೆಯಾಗುವ ನದಿಗಳಲ್ಲಿ ಮತ್ತು ನದಿಯ ಅಳಿವೆಗಳಲ್ಲಿ ನದಿ ಮೀನುಗಳ ಜೊತೆ ಇಲ್ಲೂ ಪುಟ್ಟ ದೋಣಿಗಳಲ್ಲಿ ಇಬ್ಬಿಬ್ಬರು ಹೋಗಿ ಬೀಸುಬಲೆಗಳನ್ನೋ ಇಡುಬಲೆಗಳನ್ನೋ ಬಳಸುವುದುಂಟು. ಹೊಳೆಗಳಲ್ಲಿ ಇದರ ಜೊತೆ ಗಾಳ (ಬೇಪು) ಹಾಕುವವದುಂಟು. ಕೆಲವು ನಿಯಮಿತ ಕಾಲದಲ್ಲಿ ನದಿ ಹೊಳೆಗಳ ಸೊಂಟಮಟ್ಟ ನೀರಲ್ಲಿ ಮಹಿಳೆಯರು ಇಳಿದು ಮೊಳಿ(ಮರುವಾಯಿ, ಕಪ್ಪೆಚಿಪ್ಪು), ಕಿರುಸೀಗಡಿಗಳನ್ನು ಸಂಗ್ರಹಿಸುವರು.

ಮಾರಾಟ ವ್ಯವಸ್ಥೆ

ಹಿಡಿದ ಮೀನನ್ನು ಮಾರಾಟಮಾಡುವ ವ್ಯವಸ್ಥೆ ಒಂದನ್ನು ಹಿಂದೇನೇ ರೂಪಿಸಲಾಗಿತ್ತು. ಕಂಪಣಿಬಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬರುವ ಮೀನುಗಳನ್ನು ಹರಾಜಿನಲ್ಲಿ ಪ್ರತಿ ಊರಿನಲ್ಲೂ ಕೊಳ್ಳುವ ಪುಟ್ಟ ಸಾಹುಕಾರರಿದ್ದರು. ಕಡಿಮೆ ಪ್ರಮಾಣದ ಮೀನುಗಳನ್ನು ಚಿಕ್ಕ ಚಿಕ್ಕ ರಾಶಿಗಳಲ್ಲಿ ಬೆಸ್ತ ಮಹಿಳೆಯರೇ ಹರಾಜಿನಲ್ಲಿ ಕೊಂಡುಕೊಳ್ಳುತ್ತಿದ್ದರು. ತಾವೇ ಅವನ್ನು ತಲೆಗಳಲ್ಲಿ ಹೊತ್ತು ಸಮೀಪದ ಪೇಟೆಯಲ್ಲಿ ಸೂಕ್ತ ಜಾಗದಲ್ಲಿ ಇರಿಸಿ ಮಾರುತ್ತಿದ್ದರು, ಇಲ್ಲವೇ ಮನೆ ಮನೆಗೆ ಒಯ್ದು ಮಾರುತ್ತಿದ್ದರು.

ಕಡಲ ತಡಿಯಿಂದ ದೂರದ ಊರುಗಳ ಗ್ರಾಹಕರು ಹಸಿಮೀನಿನಿಂದ ವಂಚಿತ ರಾಗಿದ್ದರೂ, ಒಣಮೀನಿನಿಂದ ವಂಚಿತ ರಾಗುತ್ತಿರಲಿಲ್ಲ. ಬೆಸ್ತ ಮಹಿಳೆಯರು ಒಣಮೀನು ತುಂಬಿದ ಬುಟ್ಟಿಯೊಂದಿಗೆ ಮೂಡಾಯಿ(ಮೂಡು ದಿಕ್ಕಿನ) ಊರುಗಳಿಗೆ ಹೋಗಿ ಅಲ್ಲಿನ ರೈತಕುಟುಂಬಗಳಿಗೆ ಮೀನುಕೊಟ್ಟು ಬತ್ತ, ತೆಂಗಿನಕಾಯಿ, ತರಕಾರಿ ಸಂಗ್ರಹಿಸುತ್ತಿದ್ದರು. ಹೀಗೆ ಹೋದವರು ಒಂದೋ ಎರಡೋ ದಿನ ರೈತರ ಮನೆಯಲ್ಲಿ ಉಳಿದು ವಾಪಸಾಗುತ್ತಿದ್ದರು. ಗಳಿಸಿದ ಬತ್ತವನ್ನು ಆಗ ತಾರದೇ ವರ್ಷಕ್ಕೊಮ್ಮೆ ಎತ್ತಿನ ಗಾಡಿಯಲ್ಲೋ,

ಪುಟ 6 ಕ್ಕೆ

ಹೊರಳು ದಾರಿಯಲ್ಲಿ ಕರಾವಳಿ ಮೀನುಗಾರಿಕೆ

ಪುಟ 5 ರಿಂದ

ಬಸ್ಸಲ್ಲೋ ಚೀಲಗಳಲ್ಲಿ ತುಂಬಿಕೊಂಡು ತರುವರು. ಕರಾವಳಿಯಿಂದ ಸಾಕಷ್ಟು ಮೂಡಣಕ್ಕಿರುವ ಪುತ್ತೂರು, ಉಪ್ಪಿನಂಗಡಿ, ಬೆಳ್ತಂಗಡಿ, ಮೂಡಬಿದ್ರಿ, ಕಾರ್ಕಳ, ಪೆರ್ಡೂರು ಈ ಊರುಗಳಿಗೂ ಬೆಸ್ತ ಮಹಿಳೆಯರು ತಲೆಹೊರೆಯೊಂದಿಗೆ ನಡೆದೇ ಸಾಗಿದ್ದುಂಟು. ಹಾಗೇ ಮೂಡಾಯಿಯಿಂದ ತಂದ ಬತ್ತದಿಂದ ಮಳೆಗಾಲದ ಆಹಾರದ ಅಕ್ಕಿಯನ್ನು ಮಹಿಳೆಯರು ಸಂಗ್ರಹಿಸುತ್ತಿದ್ದರು.

ಯಾಂತ್ರೀಕರಣದ ಪ್ರವೇಶ

ಅರವತ್ತರ ದಶಕದಲ್ಲಿ ಆರಂಭವಾದ ಯಾಂತ್ರೀಕರಣದ ಬಳಿಕ ಮೀನುಹಿಡಿಯುವ ದೋಣಿ, ಬಲೆ, ಮಾರಾಟ ವ್ಯವಸ್ಥೆ ಎಲ್ಲದರಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ. ಕಡಲತೀರದಲ್ಲಿ ಹಿಡಿಯುವ ಮೀನಿನ ಪ್ರಮಾಣವೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಹೋಗುತ್ತಿದೆ. ಕೆಲವು ಜಾತಿ ಮೀನುಗಳೂ ವಿದೇಶಕ್ಕೂ ಮಾರಾಟವಾಗುದರಿಂದ, ಸಾಕಷ್ಟು ವಿದೇಶೀ ವಿನಿಮಯ ದೊರೆಯುತ್ತಿದೆ. ಜಾತಿ ಬೆಸ್ತರ ಹಾಗೂ ಮೀನುಗಾರಿಕೆಯಲ್ಲಿ ತೊಡಗಿರುವ ಇತರರ ಆರ್ಥಿಕ ಸಾಮಾಜಿಕ ಪರಿಸ್ಥಿತಿ ಗಮನಾರ್ಹವಾಗಿ ಬದಲಾವಣೆಯಾಗಿದೆ. 50 ವರ್ಷಗಳ ಹಿಂದೆ ಶೇ. 50 ಬೆಸ್ತರು ಮುಳಿಹುಲ್ಲು ಹೊದಿಸಿದ ಮನೆಯಲ್ಲಿ ವಾಸವಾಗಿದ್ದರೆ, ಈಗ ಕರಾವಳಿಯುದ್ದಕ್ಕೂ ಒಂದೇ ಒಂದು ಹುಲ್ಲಿನ ಮನೆ ಸಿಗಲಾರದು.

ಅರವತ್ತರ ಆರಂಭದಲ್ಲಿ ರಾಜ್ಯದ ಮೀನುಗಾರಿಕಾ ಇಲಾಖೆ ಯುವ ಬೆಸ್ತರಿಗೆ ಯಾಂತ್ರೀಕೃತ ದೋಣಿಯಲ್ಲಿ ಮೀನುಗಾರಿಕೆ ನಡೆಸಲು ತರಬೇತಿ ಕೊಟ್ಟಿತು. ಮೀನುಗಾರಿಕಾ ವೃತ್ತಿಯಲ್ಲಿ ದುಡಿಮೆಗಾರರಾಗಿ ಜೀವಿಸುತ್ತಿರುವ ಪರಿಶಿಷ್ಟ ಜಾತಿಯ ಯುವಕರೂ ಈ ತರಬೇತಿ ಪಡೆದುಕೊಂಡು ಒಂದು ಕಿರು ಯಾಂತ್ರಿಕ ದೋಣಿ ಹಾಗೂ ಬಲೆ ಹೊಂದಲು ನಾಲ್ಕೈದು ಮಂದಿಯ ತರಬೇತಾದ ಗುಂಪಿಗೆ ಸಹಕಾರಿ ಸಾಲ ಒದಗಿಸುವ ವ್ಯವಸ್ಥೆಯನ್ನು ಇಲಾಖೆ ಮಾಡಿತು. ಇದರಿಂದ ಕರಾವಳಿಯುದ್ದಕ್ಕೂ ಪ್ರತಿ ಊರಿನಲ್ಲಿ ಒಂದೆರಡು ಯಾಂತ್ರಿಕದೋಣಿಗಳು- ಈ ದೋಣಿಗಳಿಗೆ ತಕ್ಕುದಾದ ಟ್ರಾಲಾಬಲೆ ಹಾಗೂ ಇತರ ಬಲೆಗಳೊಂದಿಗೆ ಮೀನು ಹಿಡಿಯಲು ಆರಂಭಿಸಿತು. ಅದೇ ವೇಳೆಗೆ ಮಲ್ಪೆಯ ಅಂದಿನ ಯುವ ಉದ್ಯಮಿ ಮಧ್ವರಾಜ್ ಎಂಬವರು ವಿದೇಶದಲ್ಲಿ ಮೀನುಗಾರಿಕೆಯ ಬಗ್ಗೆ ತರಬೇತಿ ಹೊಂದಿಬಂದು, ದೊಡ್ಡ ಸಂಖ್ಯೆಯ ಯಾಂತ್ರಿಕದೋಣಿಗಳನ್ನು ಖರೀದಿಸಿ ಉಡುಪಿ ಭಾಗದ ಯುವಬೆಸ್ತರನ್ನು ದುಡಿಸಿ ಮೀನುಗಾರಿಕೆ ಮಾಡತೊಡಗಿದರು. ಮೀನಿಗೆ ಸಂಬಂಧಿಸಿದ ಆಧುನಿಕ ರೀತಿಯ ಪೀಲಿಂಗ್ ಉದ್ಯಮ, ಫಿಶ್ ಮಿಲ್ ಪ್ಲಾಂಟ್‌ಗಳನ್ನು ಮೊದಲಲ್ಲಿ ಪ್ರಾರಂಭಿಸಿದರು ಅವರೇ. ಏನೇ ಇರಲಿ, ದಕ್ಷಿಣ ಕನ್ನಡ ಮೀನುಗಾರಿಕೆ ಆಧುನಿಕತೆಗೆ ಹೊರಳಿತು.

ಇಲಾಖೆಯ ಪಾತ್ರ

ಮೀನುಗಾರಿಕೆ ದಕ್ಷಿಣ ಕನ್ನಡ ಕರಾವಳಿಯಲ್ಲಿ ಅಭಿವೃದ್ಧಿ ಹೊಂದುವಲ್ಲಿ ಮೀನುಗಾರಿಕಾ ಇಲಾಖೆಯ ಪಾತ್ರವೂ ಇದೆ. ಮೀನುಗಾರರ ಸಹಕಾರಿ ಸಂಘಗಳು, ಸಹಕಾರಿ ಸಂಘಗಳ ಜಿಲ್ಲಾ ಒಕ್ಕೂಟ, ಮೀನುಗಾರಿಕಾ ಅಭಿವೃದ್ಧಿ ನಿಗಮ, ಕರಾವಳಿ ತೀರದವರೆಗೂ ವಿಸ್ತರಿಸಿದ ಮೀನುಗಾರಿಕಾ ಇಲಾಖೆಯ ರಸ್ತೆಗಳು, ಸರಕಾರೀ ಫಿಶ್ ಪ್ಲಾಂಟು , ಮೀನುಗಾರರಿಗೆ ವಿವಿಧ ತರಬೇತಿ - ಇವೆಲ್ಲದರ ಹಿಂದೆ ಮೀನುಗಾರಿಕಾ ಇಲಾಖೆಯ ಪಾತ್ರವಿದೆ. ಊರು ಊರುಗಳಲ್ಲಿರುವ ಮೀನುಗಾರರ ಸಹಕಾರ ಸಂಘಗಳು ಸದಸ್ಯರಿಗೆ ವೈಯಕ್ತಿಕವಾಗಿ ಹಾಗೂ ಗುಂಪಾಗಿ ದೋಣಿ, ಬಲೆ, ಸಲಕರಣೆಗಳಿಗೆ ಸಾಲ ಕೊಡುವ ವ್ಯವಸ್ಥೆ ಮಾಡಿದವು. ಇವೆಲ್ಲದರ ಪರಿಣಾಮ ಸಣ್ಣ ಸಣ್ಣ ಗುಂಪುಗಳಲ್ಲಿ ಯಾಂತ್ರಿಕ ದೋಣಿ ಹಾಗೂ ಬಲೆಗಳನ್ನು ಖರೀದಿಸಿ ತಾವೇ ಸಣ್ಣ ಸಣ್ಣ ಧಣಿಗಳಾಗುವ ಪ್ರವೃತ್ತಿ ಹೆಚ್ಚಿತು. ದೊಡ್ಡ ರಂಪಣ ಫಂಡಿನ ಸದಸ್ಯನಾಗಿದ್ದರೂ, ದುಡಿವ ಬೆಸ್ತನಿಗೆ ಅತನದೇ ಆದ ಅಸ್ತಿತ್ವವಿರಲಿಲ್ಲ. ಐದೋ ಹತ್ತೂ ಜನ ಪಾಲುದಾರರಾಗಿ ಯಾಂತ್ರಿಕದೋಣಿ ಕೊಂಡಿದ್ದರೂ, ನೋಟಕ್ಕೆ ನಾಡದೋಣಿಗಿಂತಲೂ ದೊಡ್ಡದಾಗಿ ಕಾಣುವ ಬೋಟು(ಯಾಂತ್ರಿಕ ದೋಣಿಗಳನ್ನು ರೂಢಿಯಲ್ಲಿ ಹೀಗೆ ಕರೆಯುತ್ತಾರೆ)ಗಳ ದಣಿಗಳು ಅವರಾದರು ; ಹೀಗಾಗಿ ಅವರಿಗೆ ಸಮಾಜದಲ್ಲಿ ಒಂದು ಪ್ರತಿಷ್ಠೆ ಒದಗಿತ್ತು. ಸಾಂಪ್ರದಾಯಿಕ ನಾಡದೋಣಿಗಳು ಹೆಚ್ಚಾಗಿ ತೀರ ಕಡಲಲ್ಲೇ ಬಲೆ ಹರಡಿ ಮೀನು ಹಿಡಿಯುತ್ತಿದ್ದವು. ಬೋಟುಗಳಿಗಾದರೂ ಹೆಚ್ಚಿನ ದೂರಕ್ಕೆ(ಆಳ ಕಡಲಿಗೆ) ಹೋಗುವ ಸಾಮರ್ಥ್ಯವಿದ್ದರೂ, ತೀರದ ಕರಾವಳಿಯಲ್ಲಿ ಅವರೂ ಮೀನು ಹಿಡಿಯುತ್ತಿದ್ದರಿಂದ 70ರ ದಶಕದ ಅವಧಿಯಲ್ಲಿ ಸಾಂಪ್ರದಾಯಿಕ ಮೀನುಗಾರಿಕೆಗೆ ಸಿಗುವ ಮೀನಿನ ಪ್ರಮಾಣ ಕಡಿಮೆಯಾಯಿತು. ಆಧುನಿಕ ಮೀನುಗಾರಿಕೆಗೆ ಸಿಗುತ್ತಿದ್ದ ಸಾಲ ಸೌಲಭ್ಯದಿಂದಾಗಿ ಬೋಟುಗಳ ಸಂಖ್ಯೆಯೂ ಹೆಚ್ಚುತ್ತಾ ಹೋಯಿತು. ರಂಪಣ ಫಂಡುಗಳಲ್ಲಿ ಸದಸ್ಯರಾಗಿದ್ದವರು ಬೇರೆ ಬೇರೆ ಸಣ್ಣ ಗುಂಪುಗಳಲ್ಲಿ ಬೋಟುಗಳನ್ನು ಹೊಂದಿ ಫಂಡಿನ ಸದಸ್ಯತ್ವ ಬಿಡತೊಡಗಿದರು; ಹೊಸ ಸದಸ್ಯತ್ವ ಇಲ್ಲವಾಯಿತು. 90ರ ದಶಕ ಆರಂಭವಾಗುವ ಹೊತ್ತಿಗೆ ದಕ್ಷಣ ಕನ್ನಡ ಕರಾವಳಿಯ ಹೆಚ್ಚು ಕಡಿಮೆ ಎಲ್ಲ ರಂಪಣಫಂಡುಗಳೂ ನಿಂತುಹೋದವು; ಇಲ್ಲದೇ ಆ ರಂಪಣಫಂಡುಗಳ ಹೆಸರಿನಲ್ಲಿ ಹತ್ತಾರು ಬೋಟುಗಳು ಕಡಲು ಬಾಚತೊಡಗಿದವು. ಆ ಬಳಿಕದ ಬೆಳವಣಿಗೆಯಲ್ಲಿ ರಂಪಣಫಂಡುಗಳ ಹೆಸರು ಕೂಡ ಬೋಟುಗಳ ಮೇಲಿಂದ ಅಳಿಸಿಹೋಗಿರಬೇಕು.

ಏರುಪೇರುಗಳು

ಈ ಅವಧಿಯ ಮೀನುಗಾರಿಕೆಯ ದುಡಿಮೆಯ ಸ್ವರೂಪ ಕೆಲವಿಧದ ಏರುಪೇರಿಗೆ ಈಡಾಯಿತು. ಬೋಟುಗಳು ಹೆಚ್ಚುತ್ತಿದ್ದಂತೆ ಕರಾವಳಿ ತೀರದ ಖಾಸಗಿ ಮಟ್ಟದಲ್ಲಿ ಐಸ್ ಪ್ಲಾಂಟುಗಳು, ಪೀಲಿಂಗ್ ಉದ್ದಿಮೆಗಳು ಫಿಶ್‌ಮಿಲ್ ಪ್ಲಾಂಟುಗಳೂ, ಮೀನೆಣ್ಣೆ ಉದ್ಯಮಗಳು ಹೆಚ್ಚಿದುವು. ಮೀನುಗಾರಿಕೆಯ ಹಿನ್ನೆಲೆಯಲ್ಲಿ ಬಂದಿಲ್ಲದ ಉದ್ಯಮಪತಿಗಳು ಕೂಡಾ ಈ ಉದ್ಯಮಗಳಲ್ಲಿ ತೊಡಗಿದರು. ಒಬ್ಬನೇ ಯಜಮಾನ ನಡೆಸುತ್ತಿದ್ದ ಕೋಟ ಬಡಗಣದ ರಂಪಣ ಫಂಡುಗಳ ಸದಸ್ಯರೂ ಬೋಟು ಬಲೆಕೊಳ್ಳಲು ಸುಲಭ ಸಾಲ ಸಿಕ್ಕುವುದೆಂಬ ಕಾರಣಕ್ಕೆ ಸ್ವಂತ ಬೋಟುಗಳ ಪಾಲುದಾರರಾದರು. ದುಡಿಮೆಗಾರರನ್ನು ಅವಲಂಬಿಸಿದ ರಂಪಣ ಯಜಮಾನಿಕೆಗಳು ಇದರಿಂದಾಗಿ ಅಂತ್ಯ ಕಂಡವು. ಕೆಲವು ಯಜಮಾನರು ತಮ್ಮ ಬಂಡವಾಳವನ್ನು ಮೀನುಗಾರಿಕಾ ಉದ್ಯಮಗಳಲ್ಲಿ ತೊಡಗಿಸಿರುವುದೂ ಉಂಟು; ಕೆಲವರು ಮೀನುಗಾರಿಕಾ ವಲಯದಿಂದ ಹೊರಗೇ ಹೊರಟುಹೋದರು.

ಮೀನುಗಾರಿಕೆಗೆ ಸಹಕಾರಿ ಸಂಘಗಳೊಡನೆ ಬ್ಯಾಂಕುಗಳು ಕೂಡಾ ಸಾಲನೀಡಲು ಆರಂಭಿಸಿದವು. 80ರ ದಶಕದಲ್ಲಿ ಕಡಲಿಗೆ ಪ್ರವೇಶಿಸಿದ ಪರ್ಸೀನ್ ಬಲೆಗಳನ್ನೊಳಗೊಂಡ ಪರ್ಸೀನ್ ಬೋಟುಗಳು ಗಾತ್ರದಲ್ಲಿ ತುಂಬಾ ದೊಡ್ಡವಾಗಿದ್ದು, 18-20 ಮಂದಿ ದುಡಿಮೆಗಾರರನ್ನು ಬಳಸತೊಡಗಿತು. ಕಿರುಬೋಟುಗಳ ಎರಡು ಮೂರುಪಟ್ಟು ಬಂಡವಾಳ ಈ ಬೋಟು ಹಾಗೂ ಬಲೆಗೆ ಬೇಕು. ಹಿಂದೆ ಸಾಂಪ್ರದಾಹಿಕ ಮೀನುಗಾರಿಕೆ ಮಾಡುತ್ತಿದ್ದ



ಬೆಸ್ತಜಾತಿಯ ಜನ ಸಹಕಾರಿ ಹಾಗೂ ಬ್ಯಾಂಕ್ ಸಾಲದಲ್ಲಿ ಕಿರಿಯ ಇಲ್ಲವೇ ಹಿರಿಯ ಬೋಟುಗಳನ್ನು ಕೊಂಡು ಮೀನುಗಾರಿಕೆ ನಡೆಸಿದ್ದೇನೋ ನಿಜ. ಆದರೆ ರಂಪಣಫಂಡುಗಳಲ್ಲಿ ಪಾಲುದಾರ ದುಡಿಮೆಗಾರನೊಬ್ಬ, ಒಬ್ಬ ಯಜಮಾನನಿಗೋ ಅಥವಾ ಸಂಸ್ಥೆಗೋ ಅಧೀನನಾಗಿ ಇರಿಸಿಕೊಂಡಿದ್ದ ಶಿಸ್ತನ್ನು ಅವರು ತಾವೇ ಯಜಮಾನನಾದಾಗ ಉಳಿಸಿಕೊಳ್ಳಲಿಲ್ಲ. ಅವರಿಗೆ ದುಡಿಮೆಗಾರನಾಗಿದ್ದು ಅನುಭವವಿತ್ತೇ ವಿನಃ ಯಜಮಾನನಾಗಿ ಅಲ್ಲ. ಮೊದಮೊದಲ ವರ್ಷಗಳಲ್ಲಿ ಯಶಸ್ವಿಯಾಗಿ ಕಂಡ ಯಾಂತ್ರಿಕ ದೋಣಿ ಮೀನುಗಾರಿಕೆ ಕೆಲವೇ ವರ್ಷಗಳಲ್ಲಿ ನಷ್ಟದಾಯಕವಾಯಿತು. ಸಾಕಷ್ಟು ಮೀನನ್ನು ಈ ಬೋಟುಗಳು ಹಿಡಿದರೂ, ಬ್ಯಾಂಕ್ ಸಾಲ ಮರುಪಾವತಿಯಲ್ಲಿ ಹಿಂದುಳಿದವು. ಇದರಿಂದಾಗಿ ಬ್ಯಾಂಕ್ ಸಾಲ ಮರುಪಾವತಿಸಲಾಗದೆ, ಜಾತಿಬೆಸ್ತರು ಬೋಟು ಬಲೆಗಳ ಶೇರುಗಳನ್ನು ಇತರರಿಗೆ ಅದರಲ್ಲೂ ಮೀನುಗಾರರಲ್ಲದವರಿಗೆ ಮಾರತೊಡಗಿದರು. ಈ ಬೆಳವಣಿಗೆ ಇವತ್ತಿನವರೆಗೆ ಮುಂದುವರಿದಿದೆ. ಟ್ರಾಲ್ ಬೋಟು ಇರಲಿ, ಪರ್ಸೀನ್ ಬೋಟು ಇರಲಿ ಅಥವಾ ಇತರೇ ಯಾಂತ್ರೀಕೃತ ಬೋಟೇ ಇರಲಿ -ಇವತ್ತು ಹೆಚ್ಚಿನ ದೋಣಿಗಳಲ್ಲಿ ದುಡಿಮೆ ಮಾಡುವವರೇ ಧಣಿಗಳಾಗಿಲ್ಲ. ಜಾತಿಬೆಸ್ತರೂ ಇತರೆಯವರೂ ಬೋಟುಗಳ ಶೇರುದಾರರಾಗಿರತ್ತಾರೆ. ಬೋಟುಗಳ ಶೇರುದಾರರು

ಹೆಚ್ಚಿನವರು ಕಡಲಿಗೆ ದೋಣಿಗಳು ಹೋಗುತ್ತಿಲ್ಲ; ಕೆಲವರು ಮೀನುಗಾರಿಕಾ ದಕ್ಕೆಗಳಲ್ಲಿ ಬೋಟು ವಾಪಸಾಗುವ ಹೊತ್ತಿಗೆ ಹಾಜರಿದ್ದು ಮೀನಿನ ಹಾಗೂ ಹಣಕಾಸಿನ ಲೆಕ್ಕ ಇಟ್ಟುಕೊಳ್ಳುತ್ತಾರೆ. ಅಷ್ಟಕ್ಕೂ ಭಾಗಿಯಾಗಲಾರದ ಧಣಿಗಳು ಮೀನುಗಾರಿಕೆಯ ವಾರ್ಷಿಕ ಲಾಭಾಂಶವನ್ನು ತಾವು ಒಯ್ಯುತ್ತಿದ್ದಾರೆ. ಮಂಗಳೂರು ದಕ್ಕೆಯಲ್ಲಿ ಠಾಣೆಹೂಡುವ ಬೋಟುಗಳಲ್ಲಿ ಕುಂದಾಪುರ ಪ್ರದೇಶದ ಮೊಗವೀರ ಖಾರ್ವಿ ದುಡಿಮೆಗಾರರನ್ನು ಅಲ್ಲದೆ ಭಟ್ಕಳ, ಕಾರವಾರಗಳ ಖಾರ್ವಿ ಹರಿಕಂತ್ರ ಬೆಸ್ತಜಾತಿ ದುಡಿಮೆಗಾರರನ್ನು ನಾವು ಹೆಚ್ಚಿಗೆ ಕಾಣಬಹುದು; ಸ್ಥಳೀಯ ಜಾತಿಬೆಸ್ತರು ದುಡಿಮೆಗಾರರಾಗಿರುವುದು ಕಡಿಮೆ; ಪಾಲುದಾರ ಧಣಿಗಳಾಗಿರುವುದೇ ಹೆಚ್ಚು.

ಬಂಡವಾಳಶಾಹಿ ಪೂರ್ವದ ದಕ್ಷಿಣ ಕನ್ನಡ ಕರಾವಳಿ ಮೀನುಗಾರಿಕೆಯಲ್ಲಿ ಕೋಟಸೀಮೆಯ ರಂಪಣ ಫಂಡಿನಲ್ಲಿ ಮಾತ್ರ ಊಳಿಗಮಾನ ವ್ಯವಸ್ಥೆಯನ್ನು ಕಾಣಬಹುದುದಾಗಿತ್ತು. ಅದ[illegible] ಹೊರತುಪಡಿಸಿದಂತೆ ರಂಪಣಿಫಂಡ[illegible] ಒಳಗೊಂಡಂತೆ ಎಲ್ಲ ಮೀನುಗಾರಿಕೆಯಲ್ಲೂ ಆರ್ಥಿ[illegible] ಪಾಲುಗಾರಿಕೆಯ ಒಂದು ಸಹಕಾ[illegible] ತತ್ವದ ಜೀವನ ವಿಧಾನವನ್ನು ನಾ[illegible] ಕಾಣಬಹುದಾಗಿತ್ತು. ಆದ[illegible] ಮೀನುಗಾರಿಕೆಯಿಂದ ಅತೀ ಹೆಚ್ಚಿ[illegible] ಉತ್ಪನ್ನಗಳು ಸೃಷ್ಟಿಯಾಗುತ್ತಿರಲಿಲ್ಲ. ಈ[illegible] ಸಮುದಾಯವು ಶೋಷಣೆ[illegible] ಈಡಾಗುತ್ತಿದ್ದರೆ, ಊರಿನ ಸಣ್ಣಮು[illegible] ಧಣಿಗಳಿಂದ. ಅವರ ಮತ್ಸ್[illegible] ಉತ್ಪನ್ನಗಳಿಂದ ಸೃಷ್ಟಿಯಾಗುವ ಹಣ[illegible] ವರ್ಷವಿಡೀ ಕುಟುಂಬದ ನಿರ್ವಹಣೆ[illegible] ಸಾಕಾಗದಿರುವಂತಹ ಪರಿಸ್ಥಿತಿಯಲ್ಲಿ, ಮಳೆಗಾಲದ[illegible] ಊರಿನ ರೈತ ಧಣಿಗಳಿಂದ ಅಕ್ಕಿ ಸಾಲ, ಹಣ[illegible] ಸಾಲ ಪಡೆಯುತ್ತಿದ್ದುದುಂಟು. ಈ ಸಾಲಕ್ಕೆ ಪ್ರತಿಯಾ[illegible] ಮೀನಿನ ಸುಗ್ಗಿಯಲ್ಲಿ ಹಸಿ ಮೀನು, ಒಣಮೀನ[illegible] ಇಲ್ಲವೇ ಹಣವನ್ನು ವಾಪಸು ಮಾಡುತ್ತಿದ್ದುದುಂ[illegible] ಆದರೆ ಮಳೆಗಾಲದಲ್ಲಿ ಬಡತನದಾರುಣವಾಗಿ[illegible] ಕುಟುಂಬಗಳಿದ್ದವು.

ಬದಲಾವಣೆ

ಬದಲಾದ ಮೀನುಗಾರಿಕಾ ವಿಧಾನದಲ್ಲಿ ಹಿಡಿ[illegible] ಮೀನುಗಳನ್ನು ಅದೇ ಊರಿನಲ್ಲಿ ದಡಕ್ಕೆ ತರುವಂತಿ[illegible] ಮೀನುಗಾರಿಕಾ ಧಣಿಗಳಿದ್ದೆಡೆ ಮಾತ್ರ ಮೀನಿ[illegible] ವಿಲೇವಾರಿ. ಮಂಗಳೂರು, ಪಣಂಬೂರು[illegible] ಹೆಜಮಾಡಿಕೋಡಿ, ಮಲ್ಪೆ, ಹಂಗಾರಕಟ್ಟೆ[illegible] ಗಂಗೊಳ್ಳಿ, ಕೊಡೇರಿ, ಶಿರೂರು ಅಳಿವೆಗ[illegible] ಬಂದರುಗಳಲ್ಲವೋ ಬೋಟುಗಳ ಮೀನು ಹರಾಜ[illegible] ನಡೆಯುತ್ತಿದೆ. ಅಂತಾರಾಜ್ಯ ವ್ಯಾಪ್ತಿಯ ಮೀ[illegible] ವ್ಯಾಪಾರಿಗಳು ಈ ದಕ್ಕೆಗಳಲ್ಲಿ ಸಗಟು ಬೆಲೆಯ[illegible] ಖರೀದಿಸುತ್ತಾರೆ. ಮಹಿಳೆಯರಿಗೆ, ಸೈಕಲ್[illegible] ಟೆಂಪೋಗಳ ಬಿಡಿ ವ್ಯಾಪಾರಿಗಳಿಗೆ ರಾಶಿಮೀನುಗ[illegible] ಹರಾಜು ಕೂಡಾ ನಡೆಯುತ್ತದೆ. ದಕ್ಕೆಯಿಂದ ನಗರ[illegible] ಮಾರುಕಟ್ಟೆಗಳಿಗೋ ದೂರದ ಪೇಟೆಗ[illegible] ಮೀನುಮಾರುಕಟ್ಟೆಗಳಿಗೋ ಈಗ ಸಾರಿ[illegible] ಸೌಕರ್ಯಗಳಿವೆ; ಮೀನು ಸಾಗಾಟ ವಾಹನ[illegible]

ಬಿಜೆಪಿ ಕವಲು ದಾರಿಯಲ್ಲಿದೆ. ಜಸ್ವಂತ್ ಸಿಂಗ್ ಬಯಸುವಂತೆ ಅದು ಆರೆಸ್ಸೆಸ್ ನೊಂದಿಗೆ ಸಂಬಂಧ ಕಡಿದುಕೊಂಡು ಒಂದು ಸಾಮಾನ್ಯ ಬಲಪಂಥೀಯ ಪಕ್ಷವಾಗಬೇಕೇ? ಅಥವಾ ಅರುಣ್ ಶೌರಿ ಬಯಸುವಂತೆ ಆರೆಸ್ಸೆಸ್‌ನ ಬೆಚ್ಚಗಿನ ಮುಷ್ಟಿಯೊಳಗೆ ಮರಳಬೇಕೇ? ಮೊದಲನೆಯದು ಸಾಧ್ಯವಿಲ್ಲ, ಎರಡನೆಯದು ಹೆಚ್ಚು ಸುಲಭದ ಕೆಲಸವಾದರೂ ಅದಕ್ಕೆ ಮುಂದೆ ದೊಡ್ಡ ಬೆಲೆಯನ್ನು ತೆರಬೇಕಾಗುತ್ತದೆ.

ಬಿಜೆಪಿಯೊಳಗೆ ಭುಗಿಲೆದ್ದ ಕಚ್ಚಾಟ !!


ಬಿಜೆಪಿಯನ್ನು ಆವರಿಸಿರುವ ಬಿಕ್ಕಟ್ಟು ಮತ್ತು ಆ ಪಕ್ಷದ ಅತ್ಯುನ್ನತ ಸ್ಥಾನಗಳಲ್ಲಿ ನಡೆದಿರುವ ಕಚ್ಚಾಟಗಳು ಅದರ ಬೆಂಬಲಿಗರಲ್ಲಿ ದಿಗ್ಭ್ರಾಂತಿ ಉಂಟು ಮಾಡಿದ್ದರೆ, ಅದರ ವಿರೋಧಿಗಳಿಗೆ ಆನಂದ ತರುತ್ತಿವೆ. ಆ ಪಕ್ಷವನ್ನು ಬಾಧಿಸಿರುವ ಬಿಕ್ಕಟ್ಟಿನ ಸ್ವರೂಪ ಮತ್ತು ಕಾರಣವಾದರೂ ಏನು? ಮುಖಂಡತ್ವದ ಪ್ರಶ್ನೆಗಳ ಮೇಲೆ ಆ ಪಕ್ಷದೊಳಗೆ ಒಂದು ತೀವ್ರ ಸೆಣಸಾಟ ಕಾಣಬರುತ್ತಿದೆ ಎಂಬುದು ಸಾಮಾನ್ಯವಾಗಿ ಕೇಳಬರುವ ಅಭಿಪ್ರಾಯ. ಮುಖಂಡರು ವೈಯಕ್ತಿಕವಾಗಿ ಮತ್ತು ಅವರ ಬೆಂಬಲಿಗರು ಮುಖಂಡತ್ವದ ಸ್ಥಾನಗಳಿಗಾಗಿ ಪೈಪೋಟಿ ನಡೆಸಿದ್ದಾರೆ, ಅವರ ಭಿನ್ನಾಭಿಪ್ರಾಯಗಳು ಮುಖಂಡತ್ವಕ್ಕಾಗಿ ನಡೆದಿರುವ ಇಂತಹ ಸ್ಪರ್ಧೆಗಳಿಂದ ಹೊಮ್ಮುತ್ತಿವೆ ಎನ್ನಲಾಗುತ್ತದೆ. ಇರಬಹುದು. ಲೋಕಸಭಾ ಚುನಾವಣೆಗಳ ನಂತರ ಸಂಸತ್ತಿನ ಎರಡು ಸದನಗಳಲ್ಲಿ ಪಕ್ಷದ ಮುಖಂಡರು ಯಾರಾಗಬೇಕು ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಲ್ಲಿ ಬಹಳಷ್ಟು ಮುಚ್ಚುಮರೆಯೇನೂ ಇರಲಿಲ್ಲ. ಪಕ್ಷದ ಮುಂದಿನ ಅಧ್ಯಕ್ಷರು ಯಾರಾಗಬೇಕು ಎಂಬ ಬಗ್ಗೆಯೂ ಪರಸ್ಪರ ಎದುರುಬದುರಾಗಿ ನಿಂತಿರುವ ಶಕ್ತಿಗಳು ಇವೆ ಎಂಬುದೂ ಎಲ್ಲರಿಗೂ ತಿಳಿದಿರುವ ಸಂಗತಿ.

ಆದರೆ ಇದು ಬಿಕ್ಕಟ್ಟಿನ ಕಾರಣವನ್ನು ವಿವರಿಸುವುದಿಲ್ಲ, ಸಮಸ್ಯೆಯ ಲಕ್ಷಣಗಳ ಮೇಲಷ್ಟೇ ಗಮನ ಕೇಂದ್ರೀಕರಿಸುತ್ತದೆ. ಬಿಜೆಪಿ ಎಂಬುದು ಆರೆಸ್ಸೆಸ್ ಕುರಿಕಾಯುವ ಒಂದು ಪಕ್ಷ. ಅದು ಸದಾ ಇಂತಹ ಮುಖಂಡತ್ವದ ಪ್ರಶ್ನೆಗಳನ್ನು ಆರೆಸ್ಸೆಸ್‌ನ ಸಹಾಯದಿಂದ ಇತ್ಯರ್ಥ ಮಾಡಿದೆ. ಇಂತಹ ಪ್ರಮುಖ ವಿಷಯಗಳಲ್ಲಿ ಅದರ ಮಾತೇ ಅಂತಿಮ. ಈಗ ಕೇಳಬೇಕಾಗಿರುವ ಪ್ರಶ್ನೆ ಈ ನಿರ್ದಿಷ್ಟ ಸಮಯದಲ್ಲಿ ಕಚ್ಚಾಟಗಳು ಮತ್ತು ಭಿನ್ನಾಭಿಪ್ರಾಯಗಳು ಹೊರಬಂದು ಪಕ್ಷದ ಮತ್ತು ಅದರ ಸಂಘಟನೆಯ ಸಂಬದ್ಧತೆಗೆ ಬೆದರಿಕೆಯೊಡ್ಡುತ್ತಿವೆಯೇಕೆ?

ಬಿಜೆಪಿಯೊಳಗಿನ ಬಿಕ್ಕಟ್ಟು ಲೋಕಸಭಾ ಚುನಾವಣೆಗಳಲ್ಲಿ ಅದು ಅನುಭವಿಸಿದ ಸಮಗ್ರ ಸೋಲಿನ ಹಿನ್ನೆಲೆಯಲ್ಲಿ ಬಂದಿದೆ. ಅದು ಚುನಾವಣೆಗಳಲ್ಲಿ ಸೋಲುವ ಮತ್ತು ಒಂದು ಸರಕಾರ ರಚಿಸಲಾಗದ ಒಂದು ಪ್ರಶ್ನೆಯಷ್ಟೇ ಅಲ್ಲ. ಆ ಪಕ್ಷ ದೇಶಾದ್ಯಂತ ಬೆಂಬಲ ಕಳಕೊಂಡಿದೆ. 28 ರಾಜ್ಯಗಳಲಿ 26ರಲ್ಲಿ 2004ರ ಚುನಾವಣೆಗಳಿಗೆ ಹೋಲಿಸಿದರೆ ಅದರ ಶೇಕಡಾವಾರು ಮತ ಪ್ರಮಾಣ ಇಳಿದಿದೆ.

ಗೊಂದಲ, ಅಸ್ತವ್ಯಸ್ತತೆ

ಚುನಾವಣೆಗಳ ಸಮಯದಲ್ಲಿ ತಾನು ಮೂಲ ಹಿಂದುತ್ವ ವೇದಿಕೆಗೆ ಬದ್ಧವಾಗಿರುವುದಾಗಿ ಬಿಜೆಪಿ ಒತ್ತಿ ಹೇಳಿತು. ಹಿಂದುತ್ವ ತತ್ವವನ್ನು ತಾನು ಪೇಲವಗೊಳಿಸುವುದಿಲ್ಲ ಎಂದು ಅದು ಆರೆಸ್ಸೆಸ್‌ಗೆ ಭರವಸೆ ಕೊಡುವ ಪ್ರಯತ್ನ ನಡೆಸಿತು. ಇದರಿಂದಾಗಿ ಅದು ಎನ್‌ಡಿಎ ಯ ಒಂದು ಸಾಮಾನ್ಯ ಕಾರ್ಯಕ್ರಮವನ್ನು ಪ್ರಕಟಿಸುವುದನ್ನೂ ಕೈಬಿಟ್ಟಿತು. ಇಂತಹ ಒಂದು ವೇದಿಕೆಯನ್ನು ಮತದಾರರು ತಿರಸ್ಕರಿಸಿದ್ದೇ ಈ ಬಿಕ್ಕಟ್ಟನ್ನು ಮುಂದೊತ್ತಿತು. ಇದು ಕೆಲ ಸಮಯದಿಂದಲೂ ಕುದಿಯುತ್ತಿತ್ತು. ಬಿಜೆಪಿ ಚುನಾವಣೆಗಳಲ್ಲಿ ಯಶಸ್ಸು ಗಳಿಸಿದ್ದರೆ ಅಡ್ವಾಣಿ ಪ್ರಧಾನ ಮಂತ್ರಿಗಳಾಗುತ್ತಿದ್ದರು. ಪಕ್ಷದೊಳಗಿನ



ಚಿಂತನ ಬೈಠಕ್‌ನಿಂದ....
ಅವರ ಸಿದ್ಧಾಂತ ಭದ್ರವಾಗಿದೆ....

ಕೃಪೆ: ದಿ ಹಿಂದೂ

ಸೀಳುಗಳು ಮುಚ್ಚಿ ಹೋಗುತ್ತಿದ್ದವು, ಹಿಂದುತ್ವ ಪಾಕ ಫಲಕಾರಿಯಾಗಬಹುದೇ ಎಂಬಂತಹ ಪ್ರಶ್ನೆಗಳನ್ನೇ ಕೇಳುತ್ತಿರಲಿಲ್ಲ. ಆದರೆ ಹಾಗಾಲಿಲ್ಲವಲ್ಲ.

ಜಸ್ವಂತ ಸಿಂಗ್‌ರವರನ್ನು ಜಿನ್ನಾ ಮತ್ತು ದೇಶ ವಿಭಜನೆಯ ಮೇಲೆ ಒಂದು ಪುಸ್ತಕ ಬರೆದುದಕ್ಕಾಗಿ ಪಕ್ಷದಿಂದ ಉಚ್ಚಾಟಿಸಿದ್ದು ಬಿಜೆಪಿಯೊಳಗಿನ ಗೊಂದಲ, ಅಸ್ತವ್ಯಸ್ತತೆಗೆ ಉದಾಹರಣೆ. ಕಾಂಗ್ರೆಸ್ ಮುಖಂಡತ್ವ ಭಾರತದ ವಿಭಜನೆಯ ಅಪರಾಧಿ ಎಂದು ಸಂಘ ಕೂಟ ಸದಾ ಹೇಳಿಕೊಂಡು ಬಂದಿದೆ. ವಾಸ್ತವವಾಗಿ 1947ರಿಂದಲೂ ಇದು ಆರೆಸ್ಸೆಸ್ ಪ್ರಚಾರದ ಮುಖ್ಯ ಎಳೆ. 'ಮಾತೃಭೂಮಿಯ ದೇಹಚ್ಛೇದ'ಕ್ಕೆ ಕಾಂಗ್ರೆಸ್ ಮುಖಂಡತ್ವವೇ ಕಾರಣ, ಅವರು ದೇಶಕ್ಕೆ ವಿಶ್ವಾಸಘಾತ ಮಾಡಿದರು ಎಂದು ಅವರು ಆಪಾದಿಸುತ್ತಾ ಬಂದಿದ್ದಾರೆ. ಮುಸ್ಲಿಮರಿಗೆ ಒಂದು ಪ್ರತ್ಯೇಕ ಪ್ರಭುತ್ವ ಬೇಕೆಂಬ ಬೇಡಿಕೆಯನ್ನು ಬಲಪಡಿಸುವಲ್ಲಿ ಹಿಂದೂ ಕೋಮುವಾದಿಗಳ ಪಾತ್ರವನ್ನು ಸುಲಭವಾಗಿ ಉಪೇಕ್ಷಿಸಲಾಗುತ್ತದೆ. ದೇಶ ವಿಭಜನೆ ಒಂದೆಡೆ ಬ್ರಿಟಿಶ್ ಸಾಮ್ರಾಜ್ಯಶಾಹಿ ಮತ್ತು ಇನ್ನೊಂದೆಡೆ ಎರಡು ಪ್ರಧಾನ ಬೂರ್ಜ್ವಾ ಪಕ್ಷಗಳಾದ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್‌ನ ಮುಖಂಡರ ನಡುವಿನ ರಾಜಿಯ ಫಲಿತಾಂಶ ಎಂಬ ಕಮ್ಯುನಿಸ್ಟ್ ಪಕ್ಷದ ನಿಲುವಿನೊಂದಿಗೆ ಇದನ್ನು ಹೋಲಿಸಿ ನೋಡಬಹುದು. ಈ ರಾಜಿಯ ಫಲಿತಾಂಶವಾಗಿಯೇ ದೇಶದ ವಿಭಜನೆಯಾಗಿ ಭಾರತ ಮತ್ತು ಪಾಕಿಸ್ತಾನ ಅವರವರ ಬೂರ್ಜ್ವಾ-ಬಂಡವಾಳಶಾಹಿ ವರ್ಗಗಳ ಮುಖಂಡತ್ವದಲ್ಲಿ ಸ್ವತಂತ್ರ ಪ್ರಭುತ್ವಗಳಾಗಿ ಅಸ್ತಿತ್ವಕ್ಕೆ ಬಂದವು.

ಕಾಂಗ್ರೆಸ್ ಮುಖಂಡತ್ವ, ನಿರ್ದಿಷ್ಟವಾಗಿ ನೆಹರೂರವರನ್ನು ಶಾಂತಿಗೆಡಿಸಿದ ಖಳನಾಯಕರು ಎಂದು ಹೀಯಾಳಿಸುವುದು ಹಿಂದುತ್ವ ಮಿಥ್ಯಾಪುರಾಣಕ್ಕೆ ಸರಿ ಹೊಂದುತ್ತದೆ. ವಿಭಜನೆಗೆ ದಾರಿ ಮಾಡಿಕೊಟ್ಟ ಘಟನೆಗಳನ್ನು ಕುರಿತಂತೆ ಜಿನ್ನಾ ಅಥವಾ ಆ ವಿಷಯದಲ್ಲಿ ಸರ್ದಾರ್ ಪಟೇಲರ ವಸ್ತುನಿಷ್ಠ ವಿಮರ್ಶೆ ಸಂಘ ಕೂಟದ ಮಟ್ಟಿಗೆ ಒಂದು ಶಾಪಗ್ರಸ್ತ ಸಂಗತಿ.

ವೈರುಧ್ಯದೊಡನೆ ಸೆಣಸಾಟ

ಜಸ್ವಂತ್ ಸಿಂಗ್‌ರವರ ಪುಸ್ತಕದ ಮೇಲೆ ಗುಜರಾತ್ ಸರಕಾರ ನಿಷೇಧ ಹೇರಿರುವುದು ಬಿಜೆಪಿಯನ್ನು ಅಪಹಾಸ್ಯಕ್ಕೀಡು ಮಾಡಿದೆ. ಹಿಂದುತ್ವ ಶಕ್ತಿಗಳು ಇತಿಹಾಸದ, ಸೃಜನ ಕಲೆಗಳ ಎಲ್ಲಾ ಕೃತಿಗಳ ಬಗ್ಗೆ ಹೊಂದಿರುವ ಅಸಹಿಷ್ಣು ಮನೋಭಾವದ ಹಿನ್ನೆಲೆಯಲ್ಲಿ ಇದು ಬರುತ್ತಿದೆ.

ಬಿಜೆಪಿಯನ್ನು ಪೀಡಿಸುತ್ತಿರುವ ಬಿಕ್ಕಟ್ಟಿನ ಕಾರಣವೇನು ಎಂಬ ಪ್ರಶ್ನೆಗೆ ಮತ್ತೆ ಬರೋಣ. ಆ ಪಕ್ಷದೊಳಗೆ ಈಗ ಹರಡುತ್ತಿರುವ ತಿಕ್ಕಾಟದ ಕೇಂದ್ರದಲ್ಲಿರುವುದು ಪಕ್ಷದ ಸ್ವರೂಪ ಮತ್ತು ಪಾತ್ರ ಏನಿರಬೇಕು ಎಂಬ ಪ್ರಶ್ನೆಯೇ. ಬಿಜೆಪಿ ಲಂಗರು ಹಾಕಿ ನಿಂತಿರುವುದು ಹಿಂದುತ್ವದ ಮೇಲೆ ಹಾಗೂ ಅದು 'ಸಾಂಸ್ಕೃತಿಕ ರಾಷ್ಟ್ರೀಯವಾದ'ವನ್ನು ಸ್ವೀಕರಿಸುತ್ತದೆ ಎಂಬುದು ಸ್ಥಾಪಿತ ಅಭಿಪ್ರಾಯ. ಅದು ಆರೆಸ್ಸೆಸ್‌ನ ರಾಜಕೀಯ ಸಾಧನ ಎಂಬ ಸಂಗತಿಯನ್ನು ಇದು ಬಿಂಬಿಸುತ್ತದೆ. ತಾನೊಂದು ಸಾಂಸ್ಕೃತಿಕ ಸಂಘಟನೆ, ತನ್ನ ಕಾರ್ಯಕರ್ತರಿಗೆ ರಾಜಕೀಯ ಪಕ್ಷದಲ್ಲಿ ಅಂದರೆ ಬಿಜೆಪಿಯಲ್ಲಿ ಕೆಲಸ ಮಾಡಲು ಅವಕಾಶ ಕೊಡಲಾಗುತ್ತದೆ ಎಂಬ ಕಟ್ಟು ಕಥೆಯನ್ನು ಆರೆಸ್ಸೆಸ್ ಈಗಲೂ ಹೇಳುತ್ತಿದೆ.

ಬಿಜೆಪಿ ಕಳೆದ ಕೆಲವು ವರ್ಷಗಳಿಂದ ತಾನು ಎದುರಿಸುತ್ತಿದ್ದ ವೈರುಧ್ಯದೊಂದಿಗೆ ಸೆಣಸುತ್ತಿದೆ. 1998 ಮತ್ತು 1999ರ ಚುನಾವಣೆಗಳಲ್ಲಿ ಅದರ ಯಶಸ್ಸು ತನ್ನ ನೆಲೆಯನ್ನು ವಿಶಾಲಗೊಳಿಸಿದರೆ, ತನ್ನ ಸಂಕುಚಿತ ತತ್ವವನ್ನು ಒಪ್ಪದ ಪಕ್ಷಗಳನ್ನು ಜತೆಗೂಡಿಸಿಕೊಂಡರೆ ಮಾತ್ರವೇ ಅದು ಮುನ್ನಡೆ ಸಾಧಿಸಬಲ್ಲುದು ಎಂಬ ಸಂಗತಿಯನ್ನು ಎತ್ತಿ ತೋರಿತು. 2004ರ ಚುನಾವಣೆಗಳಲ್ಲಿ ಅದರ ಸೋಲು ಅದು ತನ್ನ ಮಾತುಗಳನ್ನು ವಿಶಾಲಗೊಳಿಸಿದರೆ, ಸಂಕುಚಿತ ಹಿಂದುತ್ವ ಚೌಕಟ್ಟನ್ನು ಮೀರಿ ನಿಂತರೆ ಮಾತ್ರವೇ ಅಧಿಕಾರಕ್ಕೆ ಬರಬಲ್ಲದು ಎಂಬುದನ್ನು ದೃಢಪಡಿಸಿತು. ತನ್ನದು ಮೂಲ ಹಿಂದುತ್ವ ವೇದಿಕೆ ಎಂದು ಪುನರುಚ್ಚರಿಸುತ್ತಲೇ ಎನ್‌ಡಿಎಯೊಳಗೆ ಮಿತ್ರರನ್ನು ಸೇರಿಸಿಕೊಳ್ಳುತ್ತಾ ಈ ವಿಶಾಲತೆಯ ಮುಖವಾಡವನ್ನು ಧರಿಸಲು ಬಿಜೆಪಿ ಪ್ರಯತ್ನಿಸಿತು.

ಆದರೆ ಹಿಂದುತ್ವಕ್ಕೆ ಬದ್ಧತೆ ಮತ್ತು ಕೋಮುವಾದಿ ರಾಜಕೀಯದ ಅನುಸರಣೆ ಅದಕ್ಕೆ ತನ್ನ ವೇದಿಕೆಯನ್ನು ವಿಶಾಲಗೊಳಿಸಲು, ತನ್ನ ಮೈತ್ರಿಕೂಟವನ್ನು ವಿಸ್ತರಿಸಲು ಅವಕಾಶವನ್ನೇ ಕೊಡಲಾರದು. ಹಿಂದುತ್ವ ಬಿಟ್ಟರೆ ಬಿಜೆಪಿಗೆ ತನ್ನದೆಂಬುದು ಏನೂ ಉಳಿಯುವುದಿಲ್ಲ. ಏಕೆಂದರೆ ಅದರ ಹಣಕಾಸು ಮತ್ತು ವಿದೇಶಾಂಗ ನೀತಿಗಳು ಕಾಂಗ್ರೆಸಿಗಿಂತ ಭಿನ್ನವೇನೂ ಆಗಿಲ್ಲ.

2004ರಲ್ಲಿ ಸೋಲು ಈ ವೈರುಧ್ಯವನ್ನು ತೀಕ್ಷ್ಣ ಸ್ವರೂಪದಲ್ಲಿ ಮುಂಚೂಣಿಗೆ ತಂದಿತು. ಪಕ್ಷದೊಳಗಿನ ಕಲಕಾಟಗಳು ಈ ವೈರುಧ್ಯವನ್ನು ಎದುರಿಸುವ ಪ್ರಯತ್ನಗಳ ಫಲಿತಾಂಶ. ಜಿನ್ನಾ ಪ್ರಕರಣದ ನಂತರ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಅಡ್ವಾಣಿ ರಾಜೀನಾಮೆ, ಹೆಚ್ಚಿದ ಭಿನ್ನಮತ, ಉಮಾ ಭಾರತಿ, ಕಲ್ಯಾಣ ಸಿಂಗ್ ಮುಂತಾದವರ ಉಚ್ಚಾಟನೆ, ಬಿಟ್ಟು ಹೋದುದು ಇವೆಲ್ಲಾ ಹೆಚ್ಚುತ್ತಿದ್ದ ಅಸ್ತವ್ಯಸ್ತತೆಯ ಲಕ್ಷಣಗಳಾಗಿದ್ದವು.

ಅವಶೇಷಗಳ ನಡುವೆ

ಎಲ್.ಕೆ.ಅಡ್ವಾಣಿ ಎನ್‌ಡಿಎ ಯನ್ನು ವಿಶಾಲಗೊಳಿಸಲು ಮತ್ತು ಪಕ್ಷದ ಮುಂದಿನ ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಹೆಚ್ಚೆಚ್ಚು ಜನಗಳಿಗೆ ಮೆಚ್ಚುಗೆಯಾಗಬಲ್ಲ ನಿಲುವುಗಳನ್ನು ತಳೆಯಲು ಪ್ರಯತ್ನಗಳನ್ನು ನಡೆಸಿದರೂ ಮತ್ತೆ-ಮತ್ತೆ ಆರೆಸ್ಸೆಸ್-ಬಿಜೆಪಿ ಕೂಟದ ನೇರ ಕೋಮುವಾದಿ ಅಜೆಂಡಾವನ್ನೇ ಅನುಸರಿಸಿದರು. ಮಾಲೇಗಾಂವ್ ಸ್ಫೋಟದ ಪ್ರಕರಣದ ಸಂದರ್ಭದಲ್ಲಿ ಮೊದಲಿಗೆ ಸಂಘದ ಅಂಗಸಂಸ್ಥೆಗಳ ಯಾವುದೇ ವ್ಯಕ್ತಿ ಅದರಲ್ಲಿ ತೊಡಗಿದ್ದರೆ ಅವರನ್ನು ಶಿಕ್ಷಿಸಬೇಕು ಎಂದು ಹೇಳಿಕೆ ನೀಡಿದ ಅಡ್ವಾಣಿ ನಂತರ ನಿಲುವು ಬದಲಿಸಿ ಇದು ಹಿಂದೂ ಧಾರ್ಮಿಕ ವ್ಯಕ್ತಿಗಳನ್ನು ಸಿಲುಕಿಸುವ ಪ್ರಯತ್ನ ಎಂದು ಕರ್ಕಶವಾಗಿ ಖಂಡಿಸಲಾರಂಭಿಸಿದರು. ವರುಣ ಗಾಂಧಿಯ ವಿಷಕಾರುವ ಭಾಷಣಗಳ ಸಂದರ್ಭದಲ್ಲಿಯೂ ಇಂತಹುದೇ ಚಂಚಲತೆ ಕಾಣ ಬಂತು.

2009ರ ಚುನಾವಣೆಗಳಲ್ಲಿ ಸತತವಾಗಿ ಎರಡನೇ ಸೋಲು ಪರಿಸ್ಥಿತಿಯನ್ನು ಉಲ್ಬಣಗೊಳಿಸಿತು. ಬಿಜೆಪಿ ಕವಲು ದಾರಿಯಲ್ಲಿದೆ. ಅದು ಆರೆಸ್ಸೆಸ್‌ನೊಂದಿಗೆ ಸಂಬಂಧ ಕಡಿದುಕೊಂಡು ಜಸ್ವಂತ್ ಸಿಂಗ್ ಬಯಸುವಂತೆ ಒಂದು ಸಾಮಾನ್ಯ ಬಲಪಂಥೀಯ ಪಕ್ಷವಾಗಲು ಸಾಧ್ಯವಿಲ್ಲ. ಅರುಣ್ ಶೌರಿ ಬಯಸುವಂತೆ ಆರೆಸ್ಸೆಸ್‌ನ ಬೆಚ್ಚಗಿನ ಮುಷ್ಟಿಯೊಳಗೆ

ಪುಟ 15ಕ್ಕೆ

ಭಾರತದ ಜಾತಿ ವ್ಯವಸ್ಥೆ - ಅಸ್ಪೃಶ್ಯತೆಗಳ ಮೂಲವೇನು? ಅವು ಹುಟ್ಟಿಕೊಂಡದ್ದು ಹೇಗೆ, ಯಾವಾಗ, ಯಾಕೆ? ಒಂದು ಮಾರ್ಕ್ಸ್‌ವಾದಿ ವಿಶ್ಲೇಷಣೆ



ಜಾತಿ ವ್ಯವಸ್ಥೆಯ ಮೂಲಬೇರುಗಳೂ ಅವುಗಳ ನಿರ್ಮೂಲನವೂ

ಜಿ.ಎನ್.ನಾಗರಾಜ್

ಜಾತಿ ಪದ್ಧತಿ, ಜಾತಿ ವ್ಯವಸ್ಥೆ ಎಂಬ ಮಾತುಗಳು ಬರುವಾಗೆಲ್ಲಾ ಅದೊಂದು ಸಾಮಾಜಿಕ ಅನಿಷ್ಟ, ಭಾರತಕ್ಕೆ ವಿಶಿಷ್ಟವಾಗಿರುವ ಸಾಮಾಜಿಕ ಪದ್ಧತಿ ಎಂದು ಅದನ್ನು ವರ್ಣಿಸಲಾಗುತ್ತದೆ. ಹಾಗೆಯೇ ಮಾರ್ಕ್ಸ್‌ವಾದಿಗಳು ಕೇವಲ ವರ್ಗ ವಿಭಜನೆ ಹಾಗೂ ವರ್ಗ ಸಂಘರ್ಷದ ಬಗ್ಗೆ ಮಾತನಾಡುತ್ತಾ ಜಾತಿ ಎಂಬ ವಾಸ್ತವವನ್ನು ಪರಿಗಣಿಸುವುದೇ ಇಲ್ಲ. ಆದುದರಿಂದ ಜಾತಿ ವ್ಯವಸ್ಥೆ ಆಧಾರಿತವಾದ ಭಾರತಕ್ಕೆ ಕಮ್ಯುನಿಸಂ ಅಥವಾ ಮಾರ್ಕ್ಸ್‌ವಾದ ಸೂಕ್ತವಲ್ಲ ಎಂಬ ವಾದಗಳನ್ನು ಸಮಾಜವಾದಿಗಳು ಹಾಗೂ ಇತರ ಕೆಲವು ಬುದ್ಧಿ ಜೀವಿಗಳು, ಸಮಾಜ ವಿಜ್ಞಾನಿಗಳು ಹೂಡುತ್ತಾ ಬಂದಿದ್ದಾರೆ.

ಕಮ್ಯುನಿಸ್ಟ್ ಚಳುವಳಿ ಮತ್ತು ಜಾತಿ ವ್ಯವಸ್ಥೆ

ಆದರೆ ಅದೇ ಸಂದರ್ಭದಲ್ಲಿ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಬೆಳೆಯುತ್ತಾ ಬಂದಿದೆ, ಭಾರತದಲ್ಲಿ ಒಂದು ಗಣನೀಯ ರಾಜಕೀಯ ಶಕ್ತಿಯನ್ನು ಗಳಿಸಿದೆ. ಮತ್ತು ಅದಕ್ಕೂ ಮಿಗಿಲಾದ ಪಾತ್ರವನ್ನು ನಿರ್ವಹಿಸುತ್ತಾ ದೇಶದ ಚರಿತ್ರೆಯ ಅನೇಕ ತಿರುವುಗಳಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದೆ. ಪ.ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಹಾಗೂ ದೇಶದ ಕೆಲವು ಜಿಲ್ಲೆಗಳಲ್ಲಿ ನಿರಂತರ ಜನ ಬೆಂಬಲವನ್ನು ಪಡೆದಿದೆ. ಆಯಾ ಪ್ರದೇಶಗಳ ಸಾಮಾಜಿಕ ಆರ್ಥಿಕ ವಾಸ್ತವವನ್ನು-ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಒಡ್ಡಿದ ಸವಾಲನ್ನು ಎದುರಿಸದೆ ಈ ಜನ ಬೆಂಬಲ ಸಾಧ್ಯವೇ? ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಇನ್ನೂ ಹೆಚ್ಚು ವ್ಯಾಪಕವಾಗಿ ಹಾಗೂ ಆಳವಾಗಿ ಬೆಳೆಯಬೇಕೆಂಬುದೂ ಕೂಡ ಸತ್ಯ. ಅದಕ್ಕಾಗಿ ಜಾತಿ ವಿಭಜಿತ ಸಮಾಜದ, ಅಸ್ಪೃಶ್ಯತೆಯ ಶಾಪ ಕಾಡುತ್ತಿರುವ ಮಾನವ ಸಮುದಾಯದ ಸವಾಲನ್ನು ನೇರವಾಗಿ ಮುಖಾಮುಖಿಯಾಗಿ ಎದುರಿಸಬೇಕೆನ್ನುವುದೂ ನಿಜ. ಅದೇ ವೇಳೆಗೆ ಜಾತಿ ಭೇದ ಹಾಗೂ ಅಸ್ಪೃಶ್ಯತೆಯ ವಿರುದ್ಧ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಹೋರಾಟದಲ್ಲಿ ಇಲ್ಲಿಯವರೆಗೆ ಗಳಿಸಿದ ಯಶಸ್ಸನ್ನು ಬೇರೆಯಾವ ರಾಜಕೀಯ ಶಕ್ತಿಯೂ ಸಾಮಾಜಿಕ, ರಾಜಕೀಯ ಸಿದ್ಧಾಂತಗಳೂ ಗಳಿಸಲೂ ಸಾಧ್ಯವಾಗಿಲ್ಲ ಎಂಬುದೂ ವಾಸ್ತವ ಸತ್ಯ. ಕೋಟಿ ಕೋಟಿ ಜನರಲ್ಲಿ ಅಸ್ಪೃಶ್ಯತೆಯ ಭಯಂಕರತೆಯನ್ನು ನಿರ್ಮೂಲನ ಮಾಡಿದ, ಜಾತಿ ಭೇದಗಳನ್ನು ಪರಿಗಣಿಸದೆ 'ಎಲ್ಲ ಮಾನವರು ಒಂದೇ' ಎಂಬ ಭಾವನೆಯನ್ನು ಭಾರತದ ಹಳ್ಳಿಗಳ ವಾಸ್ತವ ನೆಲದಲ್ಲಿ ಬೇರೂರುವಂತೆ ಮಾಡುತ್ತಿರುವ ಹೆಮ್ಮೆ ನಮ್ಮದಾಗಿದೆ. ನಮ್ಮ ಚಳುವಳಿಯ ವಿರುದ್ಧ ಈ ವಿಷಯದಲ್ಲಿ ಟೀಕೆ ಮಾಡುತ್ತಿದ್ದ ಹಲವು ಸಿದ್ಧಾಂತಿಗಳು, ರಾಜಕೀಯ ಶಕ್ತಿಗಳು ತಮ್ಮ ಸಿದ್ಧಾಂತವನ್ನೇ ಬಿಟ್ಟು ಪಲಾಯನ ಮಾಡಿದ್ದಾರೆ. ಜಾತಿ ವಿನಾಶವನ್ನು ಮರೆತು ಜಾತಿ ಪೋಷಣೆಯನ್ನು ಕೈಗೊಂಡಿದ್ದಾರೆ ಎಂಬುದು ಇಂದು ಭಾರತದಲ್ಲಿ ಎಲ್ಲೆಡೆ ಕಾಣುವ, ನಮ್ಮೆಲ್ಲರನ್ನೂ ಕಾಡುವ ದೃಶ್ಯ.



ಈ ಹಿನ್ನಲೆಯಲ್ಲಿ ಮಾರ್ಕ್ಸ್‌ವಾದದ ಈ ಯಶಸ್ಸಿಗೆ ಹಾಗೂ ಕಮ್ಯುನಿಸ್ಟ್ ಚಳುವಳಿ ಸಮಾಜದ ಜಾತಿ ಬದ್ಧತೆಯನ್ನು ಸೀಳುತ್ತಾ ಬೆಳೆಯುತ್ತಿರುವುದಕ್ಕೆ ಭಾರತದ ಜಾತಿ ವ್ಯವಸ್ಥೆಯ ಮೂಲ ಬೇರುಗಳನ್ನು ಶೋಧಿಸುವಲ್ಲಿ ಅದನ್ನು ತುಂಡುರಿಸುವ ಪ್ರಯತ್ನದಲ್ಲಿ ಯಶಸ್ಸನ್ನು ಕಂಡದ್ದೇ ಆಗಿದೆ. ಹಾಗಾದರೆ ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆಯ ಮೂಲ ಬೇರುಗಳು ಎಲ್ಲಿವೆ ಹಾಗೂ ಅವುಗಳನ್ನು ಬುಡಸಹಿತ ಕಿತ್ತೆಸೆಯುವುದು ಹೇಗೆ ಎಂಬ ಪ್ರಶ್ನೆ ದೀರ್ಘವಾದ ಉತ್ತರವನ್ನು, ವಾದ-ವಿವಾದಗಳನ್ನು ಬಯಸುತ್ತದೆ. ಅಂತಹ ಪ್ರಯತ್ನಕ್ಕೆ ಇಲ್ಲಿ ಅವಕಾಶ ವಿಲ್ಲವೆಂಬುದರಿಂದ ಕೇವಲ



ಸಾರಾಂಶ ರೂಪವಾದ ಉತ್ತರವನ್ನು ಇಲ್ಲಿ ನೀಡಬಯಸುತ್ತೇನೆ. ಹೆಚ್ಚಿನ ಚರ್ಚೆಗೆ ಮುಂದೆ ಇನ್ನೂ ಹಲವು ಅವಕಾಶಗಳಿವೆ.

ಜಾತಿ ವ್ಯವಸ್ಥೆಯ ಬಗ್ಗೆ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿಯ ಆದ್ಯ ನೇತರರಾದ ಇ.ಎಂ.ಎಸ್.ನಂಬೂದರಿಪಾದ್, ಬಿ.ಟಿ.ರಣದಿವೆಯವರು, ಮಾರ್ಕ್ಸ್‌ವಾದಿ ಇತಿಹಾಸಕಾರರು, ಸಮಾಜಶಾಸ್ತ್ರ ಜ್ಞರಾದ ಡಿ.ಡಿ.ಕೋಸಾಂಬಿ, ಇರ್ಫಾನ್ ಹಬೀಬ್, ಆರ್.ಎಸ್.ಶರ್ಮ, ರೋಮಿಲಾ ಥಾಪರ್, ಎ.ಆರ್. ದೇಸಾಯಿಯವರು ತಮ್ಮ ಹಲವು ಲೇಖನಗಳಲ್ಲಿ ವಿಚಾರ ಮಂಡಿಸಿದ್ದಾರೆ. ಇತ್ತೀಚೆಗೆ ಸೀತಾರಾಂ ಯೆಚೂರಿಯವರು ಬರೆದ ಒಂದು ಪುಟ್ಟ ಪುಸ್ತಿಕೆಯೂ ಪ್ರಕಟವಾಗಿದೆ. ಇವುಗಳನ್ನು ಆಸಕ್ತರು ಅಭ್ಯಾಸ ಮಾಡಬಹುದು. ಈ ವಿಶ್ಲೇಷಣೆಗಳ ಸಾರವನ್ನು ಇಲ್ಲಿ ನಿಮ್ಮ ಮುಂದಿಡಲಾಗಿದೆ.

ಜಾತಿ ವ್ಯವಸ್ಥೆಯ ವರ್ಗರೂಪ

ವಿಶ್ವಾದ್ಯಂತ ಹಲವು ಸಾವಿರ ವರ್ಷಗಳ ಹಿಂದೆ ಗಿರಿಜನ ಬುಡಕಟ್ಟುಗಳ ಸಮಾನತೆಯ ಜನಜೀವನವನ್ನು ಒಡೆದು ಶೋಷಿತ ಸಮಾಜ ಅಥವಾ ವರ್ಗ ವಿಭಜಿತವಾದ ಸಮಾಜಗಳು ಉದ್ಭವಿಸಿದಂತೆ ಭಾರತದಲ್ಲಿಯೂ ಪ್ರಮುಖ ಪ್ರದೇಶಗಳಲ್ಲಿ ಮುಖ್ಯವಾಗಿ ಕೃಷಿ, ಪಶುಸಂಗೋಪನೆಯಲ್ಲಿ ತೊಡಗಿದ್ದ ನದೀ ಬಯಲುಗಳಲ್ಲಿ ಸಮಾಜವು ಶೋಷಕ-ಶೋಷಿತ ವರ್ಗಗಳಾಗಿ ವಿಭಜನೆಗೊಂಡಿತು. ವರ್ಗ ವಿಭಜನೆ ಯುರೋಪಿನಲ್ಲಿ ಗುಲಾಮುಪದ್ಧತಿಯ ರೂಪ ಪಡೆಯಿತು. ಇಡೀ ಸಮುದಾಯದ ಆಸ್ತಿಯಾಗಿದ್ದ ಪ್ರಾಕೃತಿಕ ಸಂಪನ್ಮೂಲಗಳನ್ನು ಕೆಲವೇ ಜನ ಒಡೆಯರು ಆಕ್ರಮಿಸಿಕೊಂಡು ಉಳಿದೆಲ್ಲಾ ಜನ ಸಮುದಾಯವನ್ನು ತಮ್ಮ ಅಡಿಯಾಳಾಗಿ, ದುಡಿಯುವ ಗುಲಾಮರನ್ನಾಗಿ ಮಾಡಿಕೊಂಡು ತಮ್ಮ ಕ್ರೂರ ಶೋಷಣೆಗೆ ಒಳಪಡಿಸಿದರು. ಇದೇ ಗುಲಾಮರು-ಗುಲಾಮರ ಒಡೆಯರಾಗಿ ವಿಭಜಿತವಾದ ಈಜಿಪ್ಟ್ ಮತ್ತು ರೋಮನ್ ಸಾಮ್ರಾಜ್ಯದಲ್ಲಿ ರೂಪುಗೊಂಡ ಮೊದಲ ವರ್ಗ ಸಮಾಜ.

ಭಾರತದ ನದೀ ಬಯಲುಗಳಲ್ಲಿಯೂ ಕೂಡ ಪ್ರಾಕೃತಿಕ ಸಂಪನ್ಮೂಲಗಳನ್ನೆಲ್ಲಾ ತನ್ನದಾಗಿ ಮಾಡಿಕೊಂಡ ಕೆಲವರು ಉಳಿದವರನ್ನೆಲ್ಲಾ ಶೋಷಿಸುವ ವರ್ಣಾಶ್ರಮ ಧರ್ಮವಾಗಿ ವರ್ಗ ಸಮಾಜ ಆರಂಭವಾಯಿತು. ಇದರಲ್ಲಿ ಮೂರು 'ದ್ವಿಜ' ವರ್ಣಗಳು ಬ್ರಾಹ್ಮಣ-ಕ್ಷತ್ರಿಯ-ವೈಶ್ಯರು ಶೂದ್ರವರ್ಣವನ್ನು ಶೋಷಿಸುವ ವ್ಯವಸ್ಥೆಯಾಯಿತು. ಮೂರು ದ್ವಿಜ ವರ್ಣಗಳು ಭಾರತದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಂಸ್ಥೆಗಳನ್ನು ಸೃಷ್ಟಿಸಿ ಅವುಗಳ ಮೇಲೆ ತಮ್ಮ ಯಜಮಾನ್ಯವನ್ನು ಸ್ಥಾಪಿಸಿದರು. ಇದು ಋಗ್ವೇದ ಇತರ ವೇದ, ಉಪನಿಷತ್ತುಗಳಲ್ಲಿ ಚಿತ್ರಿತವಾದ ಸಮಾಜ ವ್ಯವಸ್ಥೆ, ರಾಮಾಯಣ ಮಹಾಭಾರತಗಳಲ್ಲಿ ಇತರ ಪುರಾಣ ಸಾಹಿತ್ಯಗಳಲ್ಲಿ ಇರುವಂತೆ ನದಿ ಬಯಲುಗಳಿಂದ ವಿಸ್ತಾರವಾದ ಭಾರತಕ್ಕೆ ಈ ವರ್ಣಾಶ್ರಮವೆಂಬ ವರ್ಗ ವ್ಯವಸ್ಥೆ ಹಬ್ಬಿ ಹೆಚ್ಚು ಹೆಚ್ಚು ಗಿರಿಜನ ಪಂಗಡಗಳನ್ನು ಒಳಗೊಳ್ಳುತ್ತಾ ಹೋದಂತೆ ವರ್ಣಾಶ್ರಮದ ಮೂಲಸಿದ್ಧಾಂತದ ರಚನೆಯಡಿಯಲ್ಲಿಯೇ ವಿಸ್ತರಿಸುತ್ತಾ ಜಾತಿ-ಉಪಜಾತಿಗಳ ವ್ಯವಸ್ಥೆಯಾಗಿ ರೂಪುಗೊಂಡಿತು. ಈ ಪ್ರಕ್ರಿಯೆಯಲ್ಲಿಯೇ ಚಾತುರ್ವರ್ಣ್ಯದ ಹೊರಗೆ ಪಂಚಮ ವರ್ಣ ಅಸ್ಪೃಶ್ಯ ಜಾತಿ ಉಪಜಾತಿಗಳ ಸೇರ್ಪಡೆಯಾಯಿತು. ಬಯಲು ಪ್ರದೇಶದಲ್ಲಿ ಜಾತಿ ವ್ಯವಸ್ಥೆ ಆಧಾರಿತ ಸಮಾಜ- ಅದರ ಕೃಷಿ, ಪಶುಪಾಲನೆ ವ್ಯವಸ್ಥಿತವಾಗಿ ಕೇವಲ ಮೇಲು ಜಾತಿಗಳ ಕೈ ಸೇರಿದ ಮೇಲೆ ಆ ಸಮಯದಲ್ಲಿ ಕಾಡು, ಬೆಟ್ಟಗಳಲ್ಲಿ ಸಂಚರಿಸುತ್ತಾ ಗಿರಿಜನ ಬುಡಕಟ್ಟುಗಳಾಗಿದ್ದ ಪಂಗಡಗಳು, ನಾಗರೀಕತೆಯ ಅಂಚಿನಲ್ಲಿದ್ದ ಪಂಗಡಗಳು ಬಯಲು ಪ್ರದೇಶದ ಈ ನಾಗರೀಕ ಸಮಾಜಗಳಿಗೆ ಸೇರ್ಪಡೆಯಾದಾಗ ಅವರನ್ನು ಪ್ರಾಕೃತಿಕ ಸಂಪನ್ಮೂಲಗಳಿಂದ

ಲ್ಲಾ ರೀತಿಯಿಂದಲೂ ವಂಚಿಸಲೆಂದೇ ಸ್ಪೃಶ್ಯತೆಯನ್ನು ಆರೋಪಿಸಲಾಯಿತು. ಅತ್ಯಂತ ರ್ರರ ದಬ್ಬಾಳಿಕೆ, ಶೋಷಣೆಗೆ ಒಳಗು ಲಾಯಿತು.

ಯುರೋಪಿನಲ್ಲಿ ಈಜಿಪ್ಟ್‌ನಲ್ಲಿ ನೇರವಾದ, ಹಿರಂಗವಾದ, ಕ್ರೂರವಾದ ಮಾರ್ಗಗಳಿಂದ ಲಾಮ ಸಮಾಜ ಸೃಷ್ಟಿಯಾದರೆ ಭಾರತದಲ್ಲಿ ರ್ಮಿಕ ಗ್ರಂಥಗಳ, ಸ್ಮೃತಿ, ಪುರಾಣಗಳ ಮೂಲಕ ವ್ಯವಸ್ಥೆ ದೇವರದೇ ನಿರ್ಮಾಣ ಎನ್ನುವ ಬಿಕೆಯನ್ನು ಮೂಡಿಸುವುದರ ಮೂಲಕ ಜಾತಿ ವಸ್ಥೆ ನಿರ್ಮಾಣವಾಯಿತು. ಉಪನಿಷತ್ತುಗಳಲ್ಲಿ ರಂಭವಾದ ಕರ್ಮಸಿದ್ಧಾಂತ, ಜನ್ಮಸಿದ್ಧಾಂತಗಳು ಮುಂದೆ ಭಗವದ್ಗೀತೆ, ಗೌತಮ ಧರ್ಮ ಶಾಸ್ತ್ರ, ಯಾಜ್ಞ ಲ್ಕ್ಯನ ಸ್ಮೃತಿ, ಮನುಸ್ಮೃತಿಗಳ ಮೂಲಕ ಬಿಗಿಯಾದ, ಡಿಲಿಸಲಾಗದ ವ್ಯವಸ್ಥೆಯಾಗಿ ರೂಪುಗೊಂಡಿತು. ಮುಂದೆ ಶಂಕರಾಚಾರ್ಯರು ಬ್ರಹ್ಮಸೂತ್ರಕ್ಕೆ ಬರೆದ ಷ್ಯ ಮುಂತಾದವುಗಳ ಮೂಲಕ ಜಾತಿ ವ್ಯವಸ್ಥೆಯು ಜೈನ, ಬೌದ್ಧ ಧರ್ಮಗಳು ಹಾಕಿದ ಸವಾಲನ್ನು ಸಲಾಯಿತು.

ಮನುಸ್ಮೃತಿ ಮತ್ತು ಜಾತಿ ವ್ಯವಸ್ಥೆ

ಈ ಎಲ್ಲಾ ಧಾರ್ಮಿಕ ಗ್ರಂಥಗಳ ಬಿಗಿ ಹಿಡಿತದ ಉದಾಹರಣೆಯಾಗಿ ಹೆಚ್ಚು ಪ್ರಚಲಿತವಾಗಿರುವ ನು ಸ್ಮೃತಿಯನ್ನು ನೋಡಬಹುದು. ಜಾತಿ ವ್ಯವಸ್ಥೆ ಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಯಾಮಗಳನ್ನೊಳಗೊಂಡ ಸಮಗ್ರ ಸಮಾಜ ರಚನೆ ಬುದು ಮನುಸ್ಮೃತಿಯ ವಿವಿಧ ಶ್ಲೋಕಗಳಿಂದ ತಪಡುತ್ತದೆ.

ಶೇಷ್ಯಾತ್ಪ್ರಕೃತಿ
ಷ್ಠ್ಯಾತ್ ನಿಯಮಸ್ಯ ಚಧಾರಣಾತ್
ಸ್ಕಾರಸ್ಯ ವಿಶೇಷಾಶ್ಚ
ರ್ಣಾನಾಂಬ್ರಾಹ್ಮಣಃಪ್ರಭುಃ

ತಿಯಲ್ಲಿ ಶ್ರೇಷ್ಠ ಸಂಸ್ಕಾರ, ನಿಯಮಗಳ ರರೂಪ ಬ್ರಾಹ್ಮಣನೇ ವರ್ಣ ವ್ಯವಸ್ಥೆಯ ಪ್ರಭು ದು ಬ್ರಾಹ್ಮಣನಿಗೆ ಇಡೀ ಜಾತಿ ವ್ಯವಸ್ಥೆಯ ಕ ಪ್ರಭುತ್ವವನ್ನು ನೀಡುವ ಮನುಸ್ಮೃತಿ ಇತರ ತಿಗಳ ಕರ್ತವ್ಯವನ್ನು ವಿಧಿಸುತ್ತದೆ.

ದಾಭ್ಯಾಸೋ ಬ್ರಾಹ್ಮಣಸ್ಯ ಕ್ಷತ್ರಿಯಸ್ಯಚ ರಕ್ಷಣಂ
ನಕರ್ಮೈವ ವೈಶಸ್ಯ ವಿಶಿಷ್ಟಾನಿಸ್ವಕರ್ಮಸು
ಸ್ತ್ರ ಭೃತಂಕ್ಷತ್ರಸ್ಯ ವಣಿಕ್ ಪಶುಕೃಷಿರ್ವಿಶಃ

ಎನ್ನುತ್ತಾ ಬ್ರಾಹ್ಮಣನಿಗೆ ಮಾತ್ರ ವೇದಾಭ್ಯಾಸ, ಯನಿಗೆ ಶಸ್ತ್ರಾಸ್ತ್ರ, ರಕ್ಷಣೆ, ವೈಶ್ಯರಿಗೆ ಕೃಷಿ, ಪಾಲನೆಯನ್ನು ಅವರ ಸ್ವಕರ್ಮ ಎಂದು ಸುತ್ತದೆ.

ಶಂಕರ ಭಾಷ್ಯದಲ್ಲಿ ಉಲ್ಲೇಖಿಸಿದ ಗೌತಮ ರ್ಮ ಸೂತ್ರ ಮಾನವೀಯತೆಯನ್ನು ಆಳಕ್ಕೆ ಮುತ್ತಾ ಘೋಷಿಸುತ್ತದೆ - ಶೂದ್ರನು ಸ್ಮಶಾನಕ್ಕೆ ನ, ಆದುದರಿಂದ ಅವನ ಹತ್ತಿರ ಯಾರೂ ಯನ ಮಾಡಬಾರದು, ಅವನು ವೇದವಾಕ್ಯವನ್ನು ದರೆ ಅವನ ಕಿವಿಯಲ್ಲಿ ಅರಗನ್ನು, ಸೀಸವನ್ನು ಬೇಕು. ಇಂತಹವನು ಅಕಸ್ಮಾತ್ ವೇದವನ್ನು ರಣೆ ಮಾಡಿದರೆ

ದೋಚ್ಚಾರಣೋಜಿಹ್ವಾಚ್ಛೇದೋ ಧಾರಣೋ ದೇಹಚ್ಛೇದೋ - ಎಂದರೆ ವನ್ನು ಉಚ್ಚರಿಸಿದರೆ ನಾಲಗೆಯನ್ನು ಕತ್ತರಿಸು,



ವೇದವನ್ನು ಧರಿಸಿಯೇ ಬಿಟ್ಟರೆ, ಕಲಿತೇ ಬಿಟ್ಟರೆ ಶರೀರವನ್ನು ಚಿಂದಿಮಾಡು, ಇದು ಕ್ರೌರ್ಯದ ತುತ್ತತುದಿ, ನೀಚತೆಯ ಹಿಮಾಲಯ. ಶೂದ್ರನಿಗೆ **ದಾಸ್ಯಂ ಶೂದ್ರಂ ದ್ವಿಜನ್ಮನಾಂ** ಎಂದು ಹಾಗೂ ಎಲ್ಲಾ ದ್ವಿಜರಿಗೆ ಸೇವೆ ಸಲ್ಲಿಸುವುದೇ ಶೂದ್ರನ ಕರ್ತವ್ಯ ಎಂದು ಅಪ್ಪಣೆ ಮಾಡುತ್ತದೆ. ಕೃಷಿ ಪಶು ಸಂಗೋಪನೆಯಲ್ಲಿಯೂ ಅವನು ತೊಡಗುವಂತಿಲ್ಲ. ಭೂಮಿಯ ಮಾಲಿಕತ್ವವನ್ನು ಅವನಿಗೆ ನೀಡಬಾರದು ಎಂದು ವಿಧಿಸುತ್ತದೆ. ಸಂಪತ್ತಿನ ಹಂಚಿಕೆಯ ಪ್ರಶ್ನೆಯಲ್ಲಿ ವಿವಿಧ ಜಾತಿಗಳಿಗೆ ಮನುಸ್ಮೃತಿ ಹತ್ತು ಪಾಲಿನಲ್ಲಿ ನಾಲ್ಕು ಬ್ರಾಹ್ಮಣನಿಗೆ, ಮೂರು ಕ್ಷತ್ರಿಯನಿಗೆ, ಎರಡು ವೈಶ್ಯನಿಗೆ, ಒಂದು ಶೂದ್ರ ಪುತ್ರನಿಗೆ ಎಂದು ವಿಧಿಸುತ್ತದೆ. ಅಷ್ಟಕ್ಕೇ ನಿಲ್ಲದೆ ಮುಂದುವರೆದು -

ಬ್ರಾಹ್ಮಣಾ ಕ್ಷತ್ರಿಯ ವಿಶಾಂ ಶೂದ್ರಾ ಪುತ್ರೋನರಿಕ್ಷಭಾಗ್
ಯದೇವಾಸ್ಯ ಪಿತಾದದ್ಯಾತ್ ತ ದೇವಾಸ್ಯ ಧನಂಭವೇತ್

ಮೂರು ದ್ವಿಜ ವರ್ಣದವರು ಶೂದ್ರನಿಗೆ ಪಾಲು ಕೊಡದೆ ಸ್ವಲ್ಪ ಧನ ನೀಡಿ ಸಂತುಷ್ಟಗೊಳಿಸಬೇಕು ಎನ್ನುತ್ತದೆ. ಹೀಗೆ ಯಾವ ಕಾರಣಕ್ಕೂ ಶೂದ್ರ ಜಾತಿಗಳು ಭೂಮಿಯ ಒಡೆಯರಾಗಿ ಸ್ವಾವಲಂಬಿಗಳಾಗಬಾರದೆಂದು ವಿಧಿಸುತ್ತದೆ. ಅಲ್ಲದೆ ಇನ್ನೂ ಕ್ರೂರವಾಗಿ

ನಶೂದ್ರಾಯ ಮತಿ ದದ್ಯಾನ್ನೋಚ್ಛಿಷ್ಟಂ ನ ಹವಿಷ್ಕೃತಂ ನ
ಚಾಸ್ಯೋಪದಿಶೇದ್ಧರ್ಮಂ ನಚಾಸ್ಯ ವ್ರತಮಾದೀಶೇತ್

ಶೂದ್ರನಿಗೆ ಮತಿಯನ್ನು ನೀಡಬೇಡಿ, ಉಳಿದ ಅನ್ನವನ್ನು, ಹವಿಸ್ಸನ್ನು ಕೊಡಬೇಡಿ, ವ್ರತ, ಧರ್ಮಗಳನ್ನು ಉಪದೇಶಿಸಬೇಡಿ ಎಂದು ಮನು ನಿರ್ದೇಶಿಸುತ್ತಾನೆ. ಅಷ್ಟೇ ಅಲ್ಲ ಸಾಲ, ಸಾಲದ ಬಡ್ಡಿ, ಅದನ್ನು ಹಿಂದಿರಿಗಿಸುವ ಬಗ್ಗೆಯೂ ವಿವಿಧ ವರ್ಣದವರಿಗೆ ವಿವಿಧ ವ್ಯವಸ್ಥೆ. ಸಾಲದ ಬಡ್ಡಿ ಬ್ರಾಹ್ಮಣರಿಗೆ ತಿಂಗಳಿಗೆ ಶೇ. ಎರಡರಷ್ಟು, ಕ್ಷತ್ರಿಯರಿಗೆ ಮೂರು, ವೈಶ್ಯರಿಗೆ ನಾಲ್ಕು, ಶೂದ್ರರಿಗೆ ಐದು, ಅಂದರೆ ವರ್ಷಕ್ಕೆ ಶೇ. 60 ರಷ್ಟು.

ಬ್ರಾಹ್ಮಣರಿಗೆ ಕ್ಷತ್ರಿಯರು, ಇತರರು ಪಾಪ ಪರಿಹಾರಾರ್ಥವಾಗಿ ಹಾಗೂ ಪುಣ್ಯ ಸಂಪಾದನೆ ಮಾಡುವ ದೃಷ್ಟಿಯಿಂದ ಮಾಡುವ ಯಥೇಚ್ಛ ಭೂದಾನ, ಗೋದಾನ, ಸುವರ್ಣ ದಾನಗಳಲ್ಲದೆ ಅವರಿಗೆ ಯಾವುದೇ ಕರ, ಕಂದಾಯಗಳನ್ನು ವಿಧಿಸಬಾರದು. ಅವರು ಸಂಪಾದನೆ ಮಾಡಿದಷ್ಟು ಅವರಿಗೇ ಬಿಟ್ಟುಕೊಡಬೇಕು. ರಾಜ್ಯಯಂತ್ರಕ್ಕೆ ಬೇಕಾಗುವ ವೆಚ್ಚಕ್ಕೆ ವೈಶ್ಯರಿಂದ, ಶೂದ್ರರಿಂದ ಅವರ ಸಂಪಾದನೆಯ 1/6, 1/8, 1/12ನೇ ಒಂದು ಭಾಗದಷ್ಟು ತೆರಿಗೆಯನ್ನು ಸಂಗ್ರಹಿಸಬೇಕು.

ಜೊತೆಗೆ ವಿದ್ವಾಂಸರ, ಬ್ರಾಹ್ಮಣರ ಕಣ್ಣಿಗೆ ಪುರಾತನವಾದ ನಿಧಿ ಬಿದ್ದರೆ ಆ ನಿಧಿ ಪೂರಾ ಅವನಿಗೆ. ರಾಜನಿಗೆ ಭೂಮಿಯೊಳಗೆ ನಿಧಿ ಸಿಕ್ಕಿದರೆ ಅರ್ಧವನ್ನು ಬ್ರಾಹ್ಮರಿಗೆ ಹಂಚಬೇಕು. ತಾನು ಅರ್ಧವನ್ನು ಮಾತ್ರ ಉಳಿಸಿಕೊಳ್ಳಬೇಕು. ಬ್ರಾಹ್ಮಣರಿಗೆ ತಮ್ಮ ಬ್ರಾಹ್ಮಣ್ಯದಿಂದ ಸಂಪಾದನೆ ಸಾಕಾಗದಿದ್ದರೆ ಕ್ಷತ್ರಿಯ ವೃತ್ತಿಯನ್ನಾಗಲಿ, ವೈಶ್ಯ ವೃತ್ತಿಯಾದ ವ್ಯಾಪಾರ, ಕೃಷಿ, ಪಶುಪಾಲನೆಗಳನ್ನಾಗಲೀ ಕೈಗೊಳ್ಳಬಹುದು. ಆದರೆ ಕ್ಷತ್ರಿಯರು ವೇದೋಪದೇಶವನ್ನು ಕೈಗೊಳ್ಳಬಾರದು. ವೈಶ್ಯರು ಬ್ರಾಹ್ಮಣ, ಕ್ಷತ್ರಿಯರ ಉದ್ಯೋಗಕ್ಕೆ ಕೈಹಾಕಬಾರದು. ಶೂದ್ರರು ಈ ಮೇಲಿನ ಮೂರು ವರ್ಣದವರ ಕೆಲಸ ಕೈಗೊಳ್ಳಬಾರದು. ದಾಸರಾಗಿಯೇ ಉಳಿಯಬೇಕು. ಕೃಷಿ, ಪಶುಸಂಗೋಪನೆಯನ್ನು ಮಾಡಬೇಕಾದವನು ವೈಶ್ಯ ಮತ್ತು ಅವರಿಗೂ ಬ್ರಾಹ್ಮಣ, ಕ್ಷತ್ರಿಯರಿಗೂ ಸೇವೆ ಮಾಡಿ ಸಂಪತ್ತಿನ ನಿಜವಾದ ಉತ್ಪಾದನೆ ಮಾಡಬೇಕಾದವನು ಶೂದ್ರ. ಆದ್ದರಿಂದ ಮನುಸ್ಮೃತಿ ಹೇಳುತ್ತದೆ -

ವೈಶ್ಯ ಶೂದ್ರೌ ಪ್ರಯತ್ನೇನ ಸ್ವಾನಿಕರ್ಮಾನಕಿ ಕಾರಯೇತ್
ತೌಹಿ ಚ್ಯುತೌ ಸ್ವಕರ್ಮಭ್ಯಃ ಕ್ಷೋಭಯೇತಾಮಿದಂ ಜಗತ್

ವೈಶ್ಯ ಶೂದ್ರರು ತಮ್ಮ ಕೆಲಸಗಳನ್ನು ಬಿಡದೆ ಮಾಡುವಂತೆ ಪ್ರಯತ್ನಿಸಬೇಕು. ಅವರು ಕರ್ಮಚ್ಯುತರಾದರೆ ಜಗತ್ತೇ ಕ್ಷೋಭೆಗೆ ಒಳಗಾಗುತ್ತದೆ.

ಹೀಗೆ ಶೂದ್ರ ದಾಸನಾಗಿಯೇ ಉಳಿಯಬೇಕಾದರೆ ಅವನು ತನ್ನ ಸ್ಥಾನವನ್ನು ಸ್ವಲ್ಪವೂ ಅತಿಕ್ರಮಿಸದಂತೆ ತೀವ್ರ ದಂಡನೆಗೆ ಒಳಪಡಿಸಬೇಕು. ಅವನು ತನ್ನ ಕರ್ತವ್ಯ ಮಾಡದಿದ್ದರೆ, ಸಾಲ ವಾಪಸ್ ಮಾಡದಿದ್ದರೆ, ಮೇಲುಜಾತಿಯವರನ್ನು ನಿಂದಿಸಿದರೆ, ಅವರ ಹೆಣ್ಣುಗಳತ್ತ ದೃಷ್ಟಿ ಹಾಯಿಸಿದರೆ ಅತ್ಯಂತ

ಪುಟ 10ಕ್ಕೆ

ಅಸ್ಪೃಶ್ಯತೆ : ಮನುಸ್ಮೃತಿ

ಶೂದ್ರರ ಪರಿಸ್ಥಿತಿ ಮೇಲೆ ವಿವರಿಸಿದ ಈ ಪರಿಯಾದರೆ ಇನ್ನು ನಾಲ್ಕು ವರ್ಣಗಳಿಗೂ ದೂರವಾದ ಅಂತ್ಯಜರ ಪರಿಸ್ಥಿತಿ ಇನ್ನೂ ಭೀಕರ ಎನ್ನುವುದರಲ್ಲಿ ಆಶ್ಚರ್ಯವುಂಟೇ! ಮನುಸ್ಮೃತಿಯ ಪ್ರಕಾರ ನಿಷಾದರಿಗೆ ಮೀನು, ಆಯೋಗರಿಗೆ ಕೆತ್ತನೆ, ಮೇದ, ಅಂಧ್ರ, ಚಂಚು, ಮದ್ಗು ಇವರಿಗೆ ಕಾಡುಪ್ರಾಣಿಗಳ ಬೇಟೆ ವೃತ್ತಿಯ ಕ್ಷತ್ರ, ಉಗ್ರ, ಪುಕ್ಕಸ ಇವರಿಗೆ ಬಿಲದಲ್ಲಿರುವ ಉಡ ಮೊದಲಾದ ಪ್ರಾಣಿಗಳನ್ನು ತಿಂದು ಬದುಕಬೇಕು ಜೊತೆಗೆ

ಚಂಡಾಲ ಶ್ವಪಚಾನಾಂತು ಬಹಿಗ್ರಾಃ ಮಾತ್ಪತ್ರಿ ಶ್ರಯಃ ಅಪಪಾತ್ರಾಶ್ಚಕರ್ತವ್ಯಾ ಧನಮೇ ಷಾಂಶ್ವಗರ್ದಭಮ್
ವಾಸಾಂಸಿ ಮೃತ ಚೇಲಾನಿ ಭಿನ್ನ ಭಾಂಡೇಷು ಭೋಜನಮ್

ಚಾಂಡಾಲ, ಶ್ವಪಚರುಗಳು ಊರಹೊರಗೆ ಮಾತ್ರ ಆಶ್ರಯ ಪಡೆಯಬೇಕು. ಅವರ ಸಂಪತ್ತೆಲ್ಲಾ ನಾಯಿ ಕತ್ತೆಗಳು ಮಾತ್ರ. ಬಟ್ಟೆ ಹೆಣಗಳಿಗೆ ಹಾಕಿದ ಬಟ್ಟೆ.

ಇನ್ನು ಅವರಿಗೆ ಆಹಾರ ನೀಡಬೇಕಾದರೆ ಕೂಲಿಗಳ ಮೂಲಕ ಒಡೆದು ಬೇಡವಾದ ಮಡಕೆಯಲ್ಲಿ ನೀಡಬೇಕು.



ರಾತ್ರೌ ನವಿಚರೇಯುಸ್ತೇ ಗ್ರಾಮೇಷು ನಗರೇಷು ಚ ದಿವಾ ಚರೇಯುಃ ಕಾರ್ಯಾರ್ಥಂ ಚಿಹ್ನಿತಾ ರಾಜಶಾಸನೈ ಅಬಾಂಧವಂ ಶವಂ ಚೈವ ನಿಹನರೆಯುರಿತಿ ಸ್ಥಿತಿ!

ಹಳ್ಳಿ ಪಟ್ಟಣಗಳಲ್ಲಿ ರಾತ್ರಿ ಕಾಲದಲ್ಲಿ ಸಂಚರಿಸಲೇಬಾರದು (ಅಂದರೆ ಅಲ್ಲಿ ಉಳಿದುಕೊಳ್ಳುವುದಕ್ಕೆ ಅವಕಾಶವಿಲ್ಲ) ಹಗಲು ಹೊತ್ತಿನಲ್ಲಿ ಯಾರ ಮೈ ಮೇಲೆ ಗುರುತು ಮಾಡುವ ಮೂಲಕ ರಾಜನು ಅನುಮತಿ ನೀಡಿದ್ದಾನೋ ಅವರು ಮಾತ್ರ ನಿರ್ಗತಿಕರ ಶವ ಸಂಸ್ಕಾರ ಮಾಡುವುದಕ್ಕಾಗಿ ಒಳಬರಬಹುದು. ಗಲ್ಲಿಗೆ ಹಾಕುವುದು ವಧಿತರ ಚಾಪೆ ಬಟ್ಟೆ ಬರೆ ಉಪಯೋಗಿಸುವುದರಿಂದ ಇವರ ಜೀವನ.

ಇದು ಅಸ್ಪೃಶ್ಯರಿಗೆ ವಿಧಿಸಿದ ಜೀವನ, ಇಂತಹ ಪ್ರಾಣಿಗಳಿಂತಲೂ ಕೀಳಾದ ಜೀವನವನ್ನು ವಿಧಿಸುವ ಮೂಲಕ ಅತ್ಯಂತ ಕೀಳು ಆದರೆ ನಗರ ಪಟ್ಟಣ, ಹಳ್ಳಿಗಳಲ್ಲಿನ ಜೀವನಕ್ಕೆ ಅತಿ ಅವಶ್ಯವಾದ ಕೆಲಸಗಳಿಗೆ ಅವರನ್ನು ಸೀಮಿತಗೊಳಿಸುವ ಮೂಲಕ ಈ ಕೆಲಸಗಳನ್ನು ಮಾಡಲು ಅಂತ್ಯಜ ಜನ ಕಾಯುತ್ತಾ ಕುಳಿತುಕೊಳ್ಳುವಂತೆ ಹಾಗೂ ಅಗ್ಗದಲ್ಲಿ ಕೇವಲ ಬಿಸಾಕುವ ಆಹಾರಕ್ಕಾಗಿಯೇ ಈ ಕೆಲಸಗಳನ್ನು ಮಾಡಲು ಸಿದ್ಧರಾಗುವಂತೆ ವ್ಯವಸ್ಥೆ ಮಾಡಿದೆ. ○

ಗಿಳಿಯೋದಿ ಫಲವೇನು ?

ಪ್ರೊ: ಎಂ.ಕೃಷ್ಣೇಗೌಡ,
'ಅರುಹು-ಕುರುಹು' ಪತ್ರಿಕೆಯಲ್ಲಿ

ಅದೊಂದು ಶಾಲೆಯ ಮಕ್ಕಳ ಓಟದ ಸ್ಪರ್ಧೆ. ಹತ್ತೋ ಹನ್ನೆರಡೋ ಮಕ್ಕಳು ಓಡುವುದಕ್ಕಾಗಿ ಸಿದ್ಧವಾಗಿ ನಿಂತಿದ್ದಾರೆ. ಈ ದೃಶ್ಯವನ್ನು ನೀವು ಊಹಿಸಿಕೊಳ್ಳಬಲ್ಲಿರಿ. ಆ ಮಕ್ಕಳ ಅಪ್ಪ ಅಮ್ಮಂದಿರು ಓಡುವ ಕಟ್ಟೆಗಳ ಅಕ್ಕಪಕ್ಕಗಳಲ್ಲಿ ನಿಂತುಕೊಂಡು ಚಪ್ಪಾಳೆ ತಟ್ಟುತ್ತಾ ಕೂಗುತ್ತಾ 'ತಮ್ಮ' ಮಕ್ಕಳನ್ನು(ತಮ್ಮ ಮಕ್ಕಳನ್ನು ಮಾತ್ರ!) ಉತ್ತೇಜಿಸುತ್ತಿದ್ದಾರೆ. ಸರಿ, ಓಡಿ ಎಂಬ ಸಂಕೇತ ಕೊಡುವ ಸೀಟಿಯ ಸದ್ದು ಬಂದ ಕೂಡಲೇ ಆ ಮಕ್ಕಳು ಓಡತೊಡಗಿದರು. ನೂರು ಮೀಟರ್ ಓಡಬೇಕಾಗಿದ್ದ ಮಕ್ಕಳು ಇಪ್ಪತ್ತೋ ಮೂವತ್ತೋ ಮೀಟರ್ ಕ್ರಮಿಸಿರಬಹುದು. ಆ ಮಕ್ಕಳ ಪೈಕಿ ಒಂದು ಮಗು ಕಾಲು ತೊಡರಿ ಕೆಳಗೆ ಬಿದ್ದು ಬಿಟ್ಟಿತು! ಅಕ್ಕಪಕ್ಕ ನಿಂತಿದ್ದ ತಂದೆ ತಾಯಿ ಪೋಷಕರಿಗೆ (ಆ ಬಿದ್ದ ಮಗುವಿನ ಪೋಷಕರನ್ನು ಬಿಟ್ಟು ಉಳಿದವರಿಗೆ ಮಾತ್ರ) ಖುಷಿ! -ಒಬ್ಬ ಸ್ಪರ್ಧಿ ಕಡಿಮೆಯಾದ ಅಂತ. ಅವರೆಲ್ಲರೂ ಚಪ್ಪಾಳೆ ತಟ್ಟಿ 'ತಮ್ಮ' ಮಕ್ಕಳನ್ನು 'ರನ್ !! ರನ್!!' ಎಂದು ಉತ್ತೇಜಿಸತೊಡಗಿದರು. ಆದರೆ..!

ತಮ್ಮೊಂದಿಗೆ ಓಡುತ್ತಿದ್ದ ಒಂದು ಮಗು ಕೆಳಗೆ ಬಿದ್ದಿದ್ದನ್ನು ನೋಡಿದ ಉಳಿದ ಮಕ್ಕಳು 'ಥಟ್ಟನೆ' ತಾವು ಓಡುವುದನ್ನು ನಿಲ್ಲಿಸಿ ಬಿದ್ದ ಮಗುವಿನ ಬಳಿಗೆ ವಾಪಸ್ಸು ಬಂದವು. ಆ ಮಗುವಿನ ಮೈಯ ಧೂಳು, ಕೆನ್ನೆಯ ಮೇಲಿನ ಕಣ್ಣೀರು ಒರೆಸಿದವು. ಅವನಿಗೆ ಸಮಾಧಾನ ಹೇಳಿದವು. ಬಿದ್ದ ಮಗು, "ಕಾಲು ನೋವು, ಓಡೋಕ್ಕಾಗೋದಿಲ್ಲ" ಅಂತು. ಉಳಿದ ಮಕ್ಕಳು ಪರವಾಗಿಲ್ಲ ಬಿಡು ಪ್ರೈಜು ಅವರ ಹತ್ತಿರಾನೇ ಇಟ್ಟುಕೊಳ್ಳಲಿ ನಾವು ಓಡೋದಿಲ್ಲ' ಅಂದವು. ಬಿದ್ದ ಮಗುವಿನ ಕೈ ಹಿಡಿದುಕೊಂಡು ಉಳಿದೆಲ್ಲಾ ಮಕ್ಕಳೂ ನಿಧಾನವಾಗಿ ನಡೆಯುತ್ತಾ ಕೊನೆಯ ಪಟ್ಟೆ'ಯನ್ನು ದಾಟಿದವು..

ಈ ಕತೆಯನ್ನು ನೀವು ನಂಬುತ್ತೀರಾ? ನಂಬುತ್ತೀರಿ.ಕತೆಯ ಕೊನೆಯ ವಾಕ್ಯವನ್ನು ಹೇಳಿದರೆ!-ಆ ಮಕ್ಕಳೆಲ್ಲರೂ ಸಾಮಾನ್ಯ ಮಕ್ಕಳಲ್ಲ, ಬುದ್ಧಿಮಾಂದ್ಯ ಮಕ್ಕಳು! ಅಲ್ಲಿ 'ಬುದ್ಧಿವಂತ' ಮಕ್ಕಳಿದ್ದರೆ? ನೀವು ಊಹಿಸಬಲ್ಲಿರಿ ಅವು ಇನ್ನೊಂದು ಮಗುವಿಗೆ ತೊಡರುಗಾಲು ಕೊಟ್ಟು ಬೀಳಿಸಿ ಓಡಿಬಿಡುವಷ್ಟು 'ಶಾಣ್ಯಾ' ಇರುತ್ತವೆ!

- ಕೃಪೆ : 'ಟೀಚರ್' ಪತ್ರಿಕೆ

ಇದು ನಿಮಗೆ ಗೊತ್ತೆ?

ನಾನೋ ಕಾರೂ, ತೊಗರಿ ಬೇಳೆಯು

ಭಾರತದ ಮಾರುಕಟ್ಟೆಗೆ ಟಾಟಾ ಕಂಪನಿಯ ವಿಶ್ವದ ಅತ್ಯಂತ ಕಡಿಮೆ ಬೆಲೆಯ ನಾನೋ ಬಂದಿದೆ. ಅದೇ ಮಾರುಕಟ್ಟೆಯಲ್ಲಿ ತೊಗರಿಬೇಳೆಯ ಬೆಲೆ ಅತ್ಯಂತ ಗರಿಷ್ಠ ಮಟ್ಟವನ್ನು ತಲ ಮೂರಂಕಿಯ 'ಘನತೆ' ಗಳಿಸುತ್ತಿದೆ.

ಬರ ಮತ್ತು ಮಹಾಪೂರ

2008-09ರಲ್ಲಿ ಸರಕಾರದ ಅಂಕಿ-ಅಂಶಗಳ ಪ್ರಕಾರ ದೊಡ್ಡ ಕಂಪನಿಗಳಿಗೆ ನೇರ ತೆರಿಗೆ ರಿಯಾಯ್ತಿಗಳಿಂದಲೇ ಬೊಕ್ಕಸಕ್ಕೆ ರೂ.68,914 ಕೋಟಿ ಆದಾಯ ಕಡಿಮೆಯಾಯಿತು. ಈ ವರ್ಷ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಕೊಡಮಾಡಿದ ಹಣದ(ರೂ.39,100ಕೋಟಿ) ಸುಮಾರು ಎರಡು ಪಟ್ಟು!

2008ರಲ್ಲಿ ರಲ್ಲಿ ಸಾಲಪೀಡಿತ ರೈತರ ಸಾಲ ಮನ್ನಾಕ್ಕೆಂದು ರೂ.70,000 ಕೋಟಿ ಕೊಡಲಾಗುತ್ತದೆ ಎಂದಾಗ ಕೆಲವು ದೊಡ್ಡ ಪತ್ರಿಕೆಗಳು ಹೌಹಾರಿದವು.ಆದರೆ ಅದರ ಹಿಂದಿನ ಎರಡು ಬಜೆಟ್‌ಗಳಲ್ಲಿ ಕೆಲವೇ ದೊಡ್ಡ ವ್ಯಾಪಾರಸ್ಥರಿಗೆ ರೂ.1,30,000 ಕೋಟಿ ನೇರ ತೆರಿಗೆ ರಿಯಾಯ್ತಿಗಳನ್ನು ಕೊಡಲಾಗಿತ್ತು ಎಂಬುದು ಆ ಪತ್ರಿಕೆಗಳ ಗಮನಕ್ಕೇ ಬರಲಿಲ್ಲ!

ಇನ್ನು ಅವರು ಪಡೆದ ಅಬಕಾರಿ ಸುಂಕ, ಸೀಮಾಸುಂಕ ರಿಯಾಯ್ತಿಗಳನ್ನು ಲೆಕ್ಕ ಹಾಕಿದರೆ ಕಳೆದ ಎರಡು ವರ್ಷಗಳಲ್ಲಿ ಅವರು ಲಕ್ಷಾಂತರ ಸಾಲಪೀಡಿತ ರೈತರಿಗೆ ಕೊಟ್ಟುದಕ್ಕಿಂತ ಏಳ ಹೆಚ್ಚು ರಿಯಾಯ್ತಿ ಪಡೆದಿರುವುದನ್ನು ಕಾಣಬ ಅಂದರೆ ಕಳೆದ ಎರಡು ವರ್ಷಗಳಲ್ಲೇ ಇವರು 700ಕೋಟಿ ರೂ.ಗಳಂತೆ ಸರಕಾರದಿಂದ ರಿ ಪಡೆದಿದ್ದಾರೆ, ಇನ್ನು 1991ರಿಂದ, ಅವರ ಪ ಉದಾರೀಕರಣ ಆರಂಭವಾದಂದಿನಿಂದ ಎಷ್ಟು ರಿಯಾಯ್ತಿಗಳನ್ನು ಗಿಟ್ಟಿಸಿರಬಹುದು ಎಂ ನೀವೇ ಊಹಿಸಿ ಎನ್ನುತ್ತಾರೆ ಪ್ರಖ್ಯಾತ ಪ ಪಿ. ಸಾಯಿನಾಥ್. ಇದನ್ನು ಅವರು ನ್ಯಾಯ ರಿಯಾಯ್ತಿಗಳ ಮಹಾಪೂರ ಎಂದಿದ್ದಾರೆ.

ಜಾತಿ ವ್ಯವಸ್ಥೆಯ ಮೂಲಬೇರುಗಳೂ...

ಪುಟ 9 ರಿಂದ

ಕಠೋರ ಶಿಕ್ಷೆಗಳು, ಕೈ ಕಾಲು, ನಾಲಗೆ ಕತ್ತರಿಸುವುದು, ಕಣ್ಣು ಕೀಳಿಸುವುದು ಇತ್ಯಾದಿಗಳು. ಇದೇ ಕೆಲಸಗಳನ್ನು ಮೇಲುವರ್ಣದವರು ಮಾಡಿದರೆ ಅವರಿಗೆ ಮೃದುಶಿಕ್ಷೆ. ಬ್ರಾಹ್ಮಣರಿಗಂತೂ ಯಾವ ಅಪರಾಧಕ್ಕೂ ಮರಣದಂಡನೆಯಿಲ್ಲ. ಏಕೆಂದರೆ **ಬ್ರಹ್ಮಹತ್ಯಾ ಮಹಾಪಾಪಂ.** ಒಂದು ಸಣ್ಣ ಉದಾಹರಣೆ ನೋಡಿ - **ಅವಕೃಷ್ಟನು ಉತ್ಕೃಷ್ಟನ ಜೊತೆ ಸಮಾಸನದಲ್ಲಿ ಕುಳಿತರೆ** ಅವನ ಸೊಂಟಕ್ಕೆ ಕಬ್ಬಿಣದ ಬರೆ ಹಾಕಬೇಕು ಅಥವಾ ಕುಂಡಿ ಕೆತ್ತಬೇಕು, ಆದರೆ ಸಾಯಗೊಡಬಾರದು.

ಒಟ್ಟಿನಲ್ಲಿ ಶೂದ್ರರು ಭೂವಂಚಿತರಾಗಿ, ಹಣಕಾಸು, ಇತರ ಸಂಪತ್ತುಗಳಿಂದ ವಂಚಿತರಾಗಿ, ಮತಿಯೂ ಗತಿಯೂಇಲ್ಲದೆ ಇದ್ದರೆ ಮಾತ್ರ **ದಾಸ್ಯಂ ಶೂದ್ರಂ ದ್ವಿಜನ್ಮಾನಾಂ** ಎಂಬುದು ಸಾಧಿತವಾಗುತ್ತದೆ ಎಂದು ಮನು ಸಶಕ್ತವಾಗಿ ಜಾತಿ ವ್ಯವಸ್ಥೆಯನ್ನೊಂದು ಸಮಗ್ರವಾಗಿ ರೂಪಿಸುತ್ತಾನೆ.



ಮಂಡ್ಯ ಸಮೀಪದ ಗ್ರಾಮವೊಂದರಲ್ಲಿ ಕ್ಷುಲ್ಲಕ ಕಾರಣಗಳಿಗಾಗಿ ಸವರ್ಣೀಯರಿಂದ ಹಲ್ಲೆಗೊಳಗಾದ ದಲಿತರು

ಇದು ಅಥರ್ವಣ ವೇಧ, ಯಜುರ್ವೇದಗಳ ಕಾಲದಿಂದ ಮಧ್ಯಕಾಲೀನ ಯುಗದ ಆರಂಭದವರೆಗಿನ ನಮ್ಮ ಸಮಾಜದ ಚಿತ್ರ. ಇಂತಹ ಅಮಾನವೀಯ ವ್ಯವಸ್ಥೆಯ ವಿರುದ್ಧ ಭಾರತದ ವಿವಿಧ ಭಾಗಗಳಲ್ಲಿ ವಿವಿಧ ರೂಪಗಳಲ್ಲಿ ಚಳುವಳಿಗಳು ಧಾರ್ಮಿಕ ಸಂತರ ನೇತೃತ್ವದಲ್ಲಿ ಬೆಳೆದು ಬಂದವು. ತಮಿಳುನಾಡಿನ ಶೈವ, ವೈಷ್ಣವ ಚಳುವಳಿಗಳು, ಕ್ರಿಸ್ತಶಕ 6-7 ನೇ ಶತಮಾನಗಳಲ್ಲಿ ಆರಂಭವಾಗಿ ಕನ್ನಡ ನಾಡಿನ 12ನೇ ಶತಮಾನದ ಶಿವಶರಣರ ಚಳುವಳಿ, 14ನೇ ಶತಮಾನದ ಹರಿದಾಸ ಪಂಥ, ಮಹಾರಾಷ್ಟ್ರ, ಗುಜರಾತ್, ರಾಜಸ್ತಾನ, ಉತ್ತರ ಪ್ರದೇಶ, ಒರಿಸ್ಸಾ, ಬಂಗಾಲ, ಅಸ್ಸಾಂ, ಜಮ್ಮು ಕಾಶ್ಮೀರಗಳ ಭಕ್ತಿಪಂಥಗಳು, ಪಂಜಾಬಿನ ಸಿಖ್ ಧಾರ್ಮಿಕ ಹೋರಾಟಗಳು ಜಾತಿ ಪದ್ಧತಿಯ ವಿರುದ್ಧ ಧ್ವನಿಯೆತ್ತಿದವು. ಹಲವು ವ್ಯಾಪಕವಾದ ಕೆಲವು ಆಳವಾದ ಪರಿಣಾಮ ಬೀರಿದವು. ಸಮಾಜದ ಬದಲಾವಣೆಗೆ ಪ್ರಯತ್ನ ನಡೆಸಿದವು. ಆದರೆ ಈ ಯಾವ ಚಳುವಳಿಗಳೂ ಜಾತಿ ಪದ್ಧತಿಯ ಬೇರುಗಳನ್ನು ಆಮೂಲಾಗ್ರವಾಗಿ ಕಿತ್ತೆಸೆಯುವುದರಲ್ಲಿ ಯಶಸ್ಸು ಪಡೆಯಲಿಲ್ಲ. ಈ ಧಾರ್ಮಿಕ ಚಳುವಳಿಗಳಲ್ಲಿ ಯಾವು ಎಷ್ಟು ಸಫಲವಾಗಲಿಲ್ಲ ಎಂದು, ಏಕೆ ಸಫಲವಾಯಿತು ಎನ್ನುವುದು ಬೇರೆಯೇ ವಿಷಯ.


ಆದರೆ ಭಾರತ ಆಧುನಿಕ ಜಗತ್ತಿಗೆ ಪ್ರವೇಶಿಸಿದ ನಂತರ ಕೆಲವು ರಭಸದ ಬೆಳವಣಿಗೆಗಳು ಆರಂಭವಾದವು. ಭಾರತದ ಆಧುನೀಕರಣ ಸಮಾಜದ ಒಳಗಡೆಯಿಂದ ಹೊರಹೊಮ್ಮದೆ ವಸಾಹತುಶಾಹಿ ಪ್ರಭಾವದಲ್ಲಿ ಅವ ಆರಂಭಗೊಂಡುದರ ಫಲವಾಗಿ ಅನೇಕ ಕೊರ ಅಪೂರ್ಣತೆಗಳು ಕಾಣಿಸಿಕೊಂಡವು.

ಕೈಗಾರಿಕಾ ವಿಧ ಉತ್ಪಾದನೆಯ ವ್ಯವಸ್ಥೆ ಆಧಾರಿತ ಉತ್ಪಾದನಾ ವ್ಯ ಮೇಲೆ ಹಲವು ರಿ ಒತ್ತಡಗಳನ್ನು ಹೇರಿತು. ಜಾತಿ ಅಲ್ಲಲ್ಲಿ ಬಿರುಕು ತೂತಾಗಿದ್ದರೂ ಇನ್ನೂ ಭಾ ಆರ್ಥಿಕ - ಸಾಮಾಜಿಕ ಮೇಲೆ ತನ್ನ ಹಿಡಿತ ಉಳಿಸಿಕೊಂಡಿದೆ.

ಜಾತಿ ವ್ಯವಸ್ಥೆಯ ಸ್ವರೂಪ, ಸ್ಥಿತಿ ಏನು? ಭ ಇಂದು ನಡೆಯುತ್ತಿ ಜಾಗತೀಕರಣ, ಉದಾರೀ ಖಾಸಗೀಕರಣದ ದಾಳಿಯಿಂ ವ್ಯವಸ್ಥೆಯ ಮೇಲಾ ಪರಿಣಾಮವೇನು? ಈ ಹಿನ್ನೆ ಭಾರತದಲ್ಲಿ ಪ್ರಬಲವಾಗು ಕೋಮುವಾದಿ ರಾಜಕಾರಣ ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳು ಹೇ ವ್ಯವಸ್ಥೆಯನ್ನು ಪ್ರಭಾವಿಸಿವೆ? ಜಾತಿ ಕೋಮುವಾದದ ನಡುವಿನ ಸಂಬಂಧವೇನು ವ್ಯವಸ್ಥೆ ಇಂದು ಪಡೆದಿರುವ ಸ್ವರೂಪ, ಈ ವಿವಿಧ ಪ್ರಕ್ರಿಯೆಗಳಿಂದುಂಟಾದ ಪರಿಣ ಹಿನ್ನೆಲೆಯಲ್ಲಿ ಜಾತಿ ವಿನಾಶ ಹೇಗೆ ವಿಷಯಗಳ ಕುರಿತು ಹೆಚ್ಚು ಹೆಚ್ಚು ಅಧ್ಯಯ ನಡೆಯಬೇಕಿದೆ.

○

(ಐಕ್ಯರಂಗ ಏಪ್ರಿಲ್-ಮೇ ಸಂಚಿಕೆಗಳಲ್ಲಿ ಪ್ರಕಟವಾದ



ಜಾಗತಿಕ ಬಂಡವಾಳಶಾಹಿಯ ಬಿಕ್ಕಟ್ಟಿನಿಂದ ಆಚೆಗೆ ಬರುತ್ತಿದ್ದೇವೆಂಬ ಭಾವನೆಯು ದೇಶದಲ್ಲಿ ಮೂಡಿಬರುತ್ತಿದೆ. ಬಿಕ್ಕಟ್ಟಿನ ಕುರಿತು ಇತ್ತೀಚಿಗೆ ನಪತ್ರಿಕೆಗಳಲ್ಲಿ ಮುಖಪುಟದ ವರದಿಗಳೂ ಬರುತ್ತಿಲ್ಲ. ಟಿವಿಗಳಲ್ಲಿ ಬರುವುದೂ ಕೂಡ ಪರೂಪವಾಗಿದೆ. ಕೆಲವು ತಿಂಗಳ ಹಿಂದೆ ಪಾತಾಳ ಲುಪಿದ್ದ ಮಾರುಕಟ್ಟೆ ಸೂಚ್ಯಂಕ ಸೆನ್ಸೆಕ್ಸ್ 9,000 ಂದ 15,000ಕ್ಕೆ ಏರಿದ್ದು ಭಾರತೀಯ ಂತರಿಗೆ ಎಲ್ಲವೂ ಚೆನ್ನಾಗಿ ಬದಲಾದಂತೆ ಬರುತ್ತಿದ್ದು, ಈ ಸಂತೋಷಕರ ಸುದ್ದಿಯನ್ನು ಲ್ಲಡೆ ಬಿತ್ತರಿಸುತ್ತಿದ್ದಾರೆ. ನಿಜ ಹೇಳಬೇಕೆಂದರೆ, ಂತಹ ಮನಸ್ಥಿತಿಯಲ್ಲಿರುವುದು ಭಾರತೀಯ ಶ್ರೀಮಂತರು ಮಾತ್ರ ಅಲ್ಲ. ಬಿಕ್ಕಟ್ಟಿನಿಂದ ತ್ತರಗೊಂಡಿರುವ ಮುಂದುವರೆದ ರಾಷ್ಟ್ರಗಳ ಶ್ರೀಮಂತರ ನಡುವೆಯೂ ಕೂಡ ಇಂತಹ ಚ್ಚರಿಕೆಯ ಆಶಾವಾದ ಮೂಡುತ್ತಿದೆ. ಅವರು ಶಾವಾದ ಹೊಂದಿದ್ದರೂ ಬಹಳ ಚ್ಚರಿಕೆಯಿಂದಿದ್ದಾರಷ್ಟೆ.

ಳ ಮುಟ್ಟಿದ್ದೇವಾ?

<u>ಆದೇಶ ಬಿಕ್ಕಟ್ಟನ್ನು ಮೆಟ್ಟಿ ನಿಂತಿತು. ಈ ದೇಶದ ಜಿ.ಡಿ.ಪಿ. ಹೆಚ್ಚಿತ್ತು. ಬಿಕ್ಕಟ್ಟೆಲ್ಲಾ ಮುಗಿದೇ ಹೋಯಿತು... ಎಂದು ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗತೊಡಗಿವೆ. ಅದು ನಿಜವೇ ಓದಿ.</u>

'ನಾರ್ಮಲ್' ಆಗಿದೆ ಎಂದು ಹೇಳುವುದಕ್ಕಿಂತ ಭಿನ್ನವಾಗಿದೆ. ಹೀಗೆ, ಬ್ರಿಟನ್ನಿನಲ್ಲಿ ನಿರುದ್ಯೋಗ ಏರುತ್ತಿದೆಯಾದರೂ, ಒಟ್ಟಾರೆ ಕಾಲಾವಧಿಯಲ್ಲಿ ಏರುತ್ತಿದ್ದ ನಿರುದ್ಯೋಗವು ಕಡಿಮೆಯಾಗುತ್ತಿರುವುದರಿಂದ ಬ್ರಿಟನ್ನಿನ ಪ್ರಧಾನಮಂತ್ರಿ ಗೋರ್ಡಾನ್ ಬ್ರೌನ್ ನಿರಾಳ ಹೊಂದಿದ್ದಾರೆ. ಜೂನ್ ತಿಂಗಳವರೆಗೂ ಅಮೇರಿಕಾದಲ್ಲಿಯೂ ಕೂಡ ಇದನ್ನೇ ಹೇಳಲಾಗುತ್ತಿತ್ತು; ಆದರೆ ಜೂನ್ ತಿಂಗಳ ನಿರುದ್ಯೋಗವು ಮೇ ತಿಂಗಳಿಗಿಂತಲೂ ಹೆಚ್ಚಳಗೊಂಡು ಇಂತಹ ಭರವಸೆಗಳನ್ನು ಪುಡಿ ಪುಡಿ ಕೊರತೆ ಹೊಂದಿದ್ದರೂ, ಆದರ ಹೆಚ್ಚಿನ ಮೊತ್ತವು ನಷ್ಟದಿಂದಿದ್ದ ಬ್ಯಾಂಕುಗಳ ಖಜಾನೆ ತಲುಪಿದೆಯೇ ಹೊರತು, ಆರ್ಥಿಕತೆಯಲ್ಲಿ ಬೇಡಿಕೆಯನ್ನು ಹೆಚ್ಚಿಸಲು ವ್ಯಯವಾಗಿಲ್ಲ. ಸರಕುಗಳು ಮತ್ತು ಸೇವೆಗಳ ಮೇಲೆ ವ್ಯಯಿಸಿರುವ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯ ಭಾಗ, ಅಂದರೆ ಆರ್ಥಿಕತೆಯಲ್ಲಿ ಬೇಡಿಕೆಯ ಮಟ್ಟವನ್ನು ಹೆಚ್ಚಿಸಲು ಭರಿಸಿರುವ ವೆಚ್ಚವು ಅತಿ ಕಡಿಮೆ ಮೊತ್ತದ್ದು. ಅದೆಷ್ಟು ಕಡಿಮೆಯೆಂದರೆ, ಅಲ್ಲಿನ ರಾಜ್ಯ ಸರ್ಕಾರಗಳು ತಮ್ಮ ಬಜೆಟ್ಟಿನ ಆದಾಯ-ವೆಚ್ಚ ಸರಿದೂಗಿಸುವ ನಿಬಂಧನೆಗೊಳಪಟ್ಟಿರುವುದರಿಂದ

ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಅಂತ್ಯಗೊಂಡಿದೆಯೇ?

ಪ್ರಭಾತ್ ಪಟ್ನಾಯಕ್

ಅನು : ಜಯ

ಕೆಲವು ಆರ್ಥಿಕ ಸೂಚ್ಯಂಕಗಳಿಂದ ವಿಶೇಷವಾಗಿ ನೈಜ ಆರ್ಥಿಕತೆಯ ಮೇಲೆ ಪರಿಣಾಮ ಬೀರಿ ಸೂಕ್ಷ್ಮವಾಗಿ ತಟ್ಟುವ ಷೇರು ಮಾರುಕಟ್ಟೆಯ ನಡವಳಿಕೆಗಳಿಂದ ಇಂತಹ ಆಶಾವಾದ ಮೂಡಿಬರುತ್ತಿದೆ. ನೈಜ ಆರ್ಥಿಕತೆಯ ಕುರಿತು ಹೇಳುವುದಾದರೆ, ಆಶಾವಾದಿ ಧೋರಣೆಯೆಂದರೆ ನಾವು ಬಿಕ್ಕಟ್ಟಿನ ತಳ ತಲುಪಿಯಾಗಿದ್ದು, ಇನ್ನು ಮುಂದೆ ಇದಕ್ಕಿಂತಲೂ ಕೆಟ್ಟ ಸ್ಥಿತಿಯೇನೂ ಇರುವುದಿಲ್ಲ ಎಂಬುದು. ಇದು ಹೇಗಿದೆಯಪ್ಪ ಅಂದರೆ ಎಲ್ಲವೂ ಮಾಡಿತು. ಆದ್ದರಿಂದ ನಾವು ಬಿಕ್ಕಟ್ಟಿನ ಕೊನೆ ಹಂತದಲ್ಲಿದ್ದೇವೆಂದು ಪ್ರಸಕ್ತ ಅಂಕಿಅಂಶಗಳ ಆಧಾರದ ಮೇಲೆ ಹೇಳಲು ಸಾಧ್ಯವಿಲ್ಲ.

ಮೂರು ಋಣಾತ್ಮಕ ಅಂಶಗಳು

ಬೇರೆಡೆಯೂ ಇಂತಹದೇ ಪ್ರಕ್ರಿಯೆಗಳು ನಡೆದಿದ್ದರೂ ಮುಖ್ಯವಾಗಿ ಅಮೇರಿಕಾದೊಂದಿಗೆ ಸಂಬಂಧ ಹೊಂದಿರುವ ಮೂರು ಅಂಶಗಳು ಬಿಕ್ಕಟ್ಟು ಅಂತ್ಯಗೊಳ್ಳುವುದಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತಿವೆ (ಏಕೆಂದರೆ ವಿಶ್ವ ಆರ್ಥಿಕತೆಗೆ ಬಹಳ ಮುಖ್ಯವೆನಿಸುವುದು ಅಮೇರಿಕಾದ ಆರ್ಥಿಕ ಚಟುವಟಿಕೆಯ ಮಟ್ಟ). ಮೊದಲನೆಯದು ಕೂಲಿಯ ಇಳಿಕೆಯ ದರ, ಅಂದರೆ ಉದ್ಯೋಗವಂತ ಕೆಲಸಗಾರರಲ್ಲಿ ಪ್ರತಿ ಕೆಲಸಗಾರರ ನೈಜ ಆದಾಯ ಗಳಿಕೆಯಲ್ಲಿ ಇಳಿತ. ಸರಾಸರಿ ಮಾರುಕಟ್ಟೆ ಬೇಡಿಕೆಯಲ್ಲಿ ಕಂಡುಬಂದ ಆರಂಭಿಕ ಕುಸಿತದಿಂದ ಶುರುವಾದ ಬಿಕ್ಕಟ್ಟು, ಈಗ ಉದ್ಯೋಗಗಳ ಇಳಿಕೆಯಿಂದಾಗಿ ಬಿಕ್ಕಟ್ಟು ಉಲ್ಬಣಗೊಳ್ಳುತ್ತಿದೆ; ಆದರಿದು ಉದ್ಯೋಗವಂತ ಕಾರ್ಮಿಕರ ತಲಾದಾಯದ ಇಳಿಕೆಯಿಂದ ಇನ್ನಷ್ಟು ತೀವ್ರಗೊಳ್ಳುತ್ತಿದೆ. ಹೀಗಾಗಿ, ಬೇಡಿಕೆಯಲ್ಲಿ ಆರಂಭಿಕ ಕುಸಿತ, ಉದ್ಯೋಗವಂತ ಕಾರ್ಮಿಕರ ತಲಾದಾಯ ಇಳಿಕೆ ಮತ್ತು ಉದ್ಯೋಗಗಳ ಇಳಿಕೆ - ಈ ಕಾರಣಗಳಿಂದುಂಟಾಗುವ ಬೇಡಿಕೆಯ ಕುಸಿತದಿಂದಾಗಿ ಆರ್ಥಿಕ ಚಟುವಟಿಕೆ ಮತ್ತು ಉದ್ಯೋಗಗಳ ಇಳಿಕೆಯು ಎಗ್ಗಿಲ್ಲದೆ ಮತ್ತೂ ಮುಂದುವರೆಯುತ್ತವೆ.

ಎರಡನೆಯ ಅಂಶವೆಂದರೆ, ಅಮೇರಿಕಾದ ರಾಜ್ಯ ಸರ್ಕಾರಗಳ ವೆಚ್ಚಗಳು ಇಳಿಮುಖಗೊಂಡಿರುವುದು. ಅಮೇರಿಕಾದ ಫೆಡರಲ್ ಅಥವಾ ಕೇಂದ್ರ ಸರ್ಕಾರವು ವಿತ್ತೀಯ ಕೊರತೆಯ (ಅಂದರೆ ಆದಾಯಕ್ಕಿಂತ ಹೆಚ್ಚು ವೆಚ್ಚ ಮಾಡಲು ಹೆಚ್ಚು ಸಾಲ ತಂದು ಸರ್ಕಾರ ನಡೆಸುವುದಕ್ಕೆ) ಅವಕಾಶ ಹೊಂದಿದ್ದರೂ, ರಾಜ್ಯ ಸರ್ಕಾರಗಳಿಗೆ ಅಂತಹ ಅಧಿಕಾರವಿಲ್ಲ. ಸಾಮಾನ್ಯವಾಗಿ ಆರ್ಥಿಕ ಹಿಂಜರಿತ ಸಂದರ್ಭದಲ್ಲಿ ಉಂಟಾಗುವಂತೆ ರಾಜ್ಯ ಸರ್ಕಾರಗಳ ಆದಾಯ ಇಳಿಮುಖಗೊಂಡರೆ, ಅವುಗಳ ವೆಚ್ಚದಲ್ಲಿಯೂ ಇಳಿತ ಕಂಡುಬರುತ್ತದೆ. ಅಮೇರಿಕಾದಲ್ಲಿ ಕೇಂದ್ರ ಸರ್ಕಾರವು ಬೃಹತ್ ವಿತ್ತೀಯ ಅವು ಇಳಿಸಿರುವ ವೆಚ್ಚಕ್ಕಿಂತ ಇದು ಜಾಸ್ತಿಯೇನೂ ಇಲ್ಲ; ಈ ಇಳಿಕೆಯು ಹೀಗೆ ಮುಂದುವರಿದು ನಿರೀಕ್ಷೆ ಮೀರಿದಲ್ಲಿ, ಕೇಂದ್ರ ಸರ್ಕಾರದ ವಿತ್ತೀಯ ಪ್ಯಾಕೇಜ್ ಕೂಡ ರಾಜ್ಯ ಸರ್ಕಾರಗಳ ವೆಚ್ಚದ ಇಳಿಕೆಯ ಪ್ರವಾಹದಲ್ಲಿ ಕೊಚ್ಚಿಹೋಗುವ ಸಾಧ್ಯತೆಯಿದೆ.

ಮೂರನೆಯ ಅಂಶವೆಂದರೆ, ಕೇಂದ್ರ ಸರ್ಕಾರ ಘೋಷಿಸಿರುವ ಬಿಕ್ಕಟ್ಟು ಪರಿಹಾರ ಪ್ಯಾಕೇಜ್ ಕಾಲಕ್ರಮೇಣ ಏನಕ್ಕೂ ಸಾಲುವುದಿಲ್ಲ. ನಮಗೆ



ತಿಳಿದಿರುವಂತೆ ಬೇಡಿಕೆಯನ್ನು ಉತ್ತೇಜಿಸುವಲ್ಲಿ ಯಾವುದೇ ರೀತಿಯ ಸರ್ಕಾರದ ನೇರ ಮಧ್ಯಪ್ರವೇಶವನ್ನು ಹಣಕಾಸು ಬಂಡವಾಳವು ವಿರೋಧಿಸುತ್ತದೆ; ಸರ್ಕಾರವು ತನ್ನ ಆದಾಯ-ವೆಚ್ಚವನ್ನು ಸರಿದೂಗಿಸುವ 'ಸುಭದ್ರ ಆರ್ಥಿಕ'ವನ್ನು ಅದು ಬಯಸುತ್ತದೆ, ಅಥವಾ ಹೆಚ್ಚೆಂದರೆ, ಪೂರ್ವನಿಗದಿತವಾದ, ಜಿಡಿಪಿಯಲ್ಲಿ ಒಂದು ಸಣ್ಣ ವಿತ್ತೀಯ ಕೊರತೆಯ ಭಾಗವನ್ನು ಅದು ಬಯಸುತ್ತದೆ. ಹೀಗಾಗಿ ಒಬಾಮ ಆಡಳಿತವು ನಡೆಸುತ್ತಿರುವ ಪ್ರಸಕ್ತ ವಿತ್ತೀಯ ಕೊರತೆಯ ಮಟ್ಟವನ್ನು ಕೂಡ ಹಣಕಾಸು ಬಂಡವಾಳಕ್ಕೆ ಅರಗಿಸಿಕೊಳ್ಳಲಾಗುತ್ತಿಲ್ಲ ಮತ್ತು ಈಗಾಗಲೇ ದೊಡ್ಡ ಸಂಖ್ಯೆಯ ಸಾಂಪ್ರದಾಯಿಕ ಆರ್ಥಿಕ ತಜ್ಞರು ಈ ಕುರಿತು

ಪುಟ 15ಕ್ಕೆ

ಹಿಂದೂ ಸಂಸ್ಕೃತಿಯೂ - ಜಾಗತಿಕ ಬಿಕ್ಕಟ್ಟೂ

ದ ಹಣಕಾಸು ವರ್ಷದಲ್ಲಿ ಅಮೇರಿಕಾದಲ್ಲಿ ಸ್ಫೋಟಿಸಿದ ಜಾಗತಿಕ ಆರ್ಥಿಕ ಬಿಕ್ಕಟ್ಟು ಇಡೀ ಜಗತ್ತಿನ ಆರ್ಥಿಕತೆಯ ಮೇಲೆ ಪರಿಣಾಮಗಳನ್ನು ಎಷ್ಟೆಷ್ಟೋ ದೇಶಗಳನ್ನು ದಿವಾಳಿಯಾಗುವಂತೆ ಮಾಡಿದ್ದು, ಈಗಲೂ ಜಾಗತಿಕ ಬಿಕ್ಕಟ್ಟಿನ ಕರಾಳ ಛಾಯೆ ಮುಂದುವರಿದೇ ಇರುವುದು ಜನಶಕ್ತಿ ಓದುಗರಿಗೆ ಗೊತ್ತಿರುವ ಸಮಾಚಾರವೇ.

ಯುರೋಪಿನ ದೇಶಗಳನ್ನು ಹಾಗೂ ಜಗತ್ತಿನ ಎಷ್ಟೋ ದೇಶಗಳಲ್ಲಿ ಜಾಗತಿಕ ಬಿಕ್ಕಟ್ಟು ಉಂಟು ಮಾಡಿದಷ್ಟು ಭೀಕರ ವಿನಾಶಗಳನ್ನು ಭಾರತದಲ್ಲಿ ಸೃಷ್ಟಿಸಲಿಲ್ಲ ಎಂಬುದೂ ಸತ್ಯವೇ. ಇದನ್ನು ಎಲ್ಲರೂ ಒಪ್ಪುತ್ತಾರೆ. ಅದಕ್ಕೆ ಕಾರಣವೇನು?

'ಹಿಂದೂ ಸಂಸ್ಕೃತಿಯೇ' ಬಿಕ್ಕಟ್ಟು ತೀವ್ರ ಪರಿಣಾಮ ಬೀರದಿರಲು ಕಾರಣ ಅನ್ನುತ್ತದೆ ಆರೆಸ್ಸೆಸ್‌ನ ಕರಪತ್ರ. ಪಾಶ್ಚಾತ್ಯ ಸಂಸ್ಕೃತಿಯ ಭೋಗವಾದಕ್ಕೆ ಬದಲಾಗಿ 'ಕುಟುಂಬ ಜೀವನ, ಸರಳ ನಿರಾಡಂಬರ ಬದುಕು' ಭಾರತದಲ್ಲಿ ಆರ್ಥಿಕ ಬಿಕ್ಕಟ್ಟು ಭಾರಿ ಅನಾಹುತ ಉಂಟು ಮಾಡದಿರಲು ಕಾರಣ ಎನ್ನುತ್ತದೆ ಆರೆಸ್ಸೆಸ್‌ನ 'ರಕ್ಷಾ ಬಂಧನ' ಸಂದೇಶ ಸಾರುವ ಕರಪತ್ರ.

ಹೆಚ್ಚಿನವರೆಲ್ಲಾ ತಮ್ಮ ತಮ್ಮ ಮೂಗಿನ ನೇರಕ್ಕೆ ಮಾತನಾಡುವವರೇ. ದೇಶೀಯ ಸಾರ್ವಜನಿಕ ಬ್ಯಾಂಕುಗಳನ್ನು ವಿದೇಶಿ ಬಹುರಾಷ್ಟ್ರೀಯ ಬ್ಯಾಂಕುಗಳ ವಶಕ್ಕೆ ಒಪ್ಪಿಸಿ ಬಿಡಲು ತುದಿಗಾಲಲ್ಲಿ ನಿಂತಿದ್ದ ಯುಪಿಎ ಸರ್ಕಾರ ಏನು ಹೇಳಿತು? ಇಂದಿರಾಗಾಂಧಿಯವರ ಬ್ಯಾಂಕ್ ರಾಷ್ಟ್ರೀಕರಣವೇ ಭಾರತ ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕದಿರಲು ಕಾರಣ ಅಂದಿತು.

ಆರೆಸ್ಸೆಸ್-ಕಾಂಗ್ರೆಸ್ ಇವರಿಬ್ಬರಿಗೂ ವಿಶ್ವಬ್ಯಾಂಕ್, ಐಎಂಎಫ್ ಪ್ರೇರಿತ ಜಾಗತೀಕರಣ, ಉದಾರೀಕರಣ ನೀತಿಗಳ ಬಗೆಗೆ ತಕರಾರುಗಳಿರಲೇ ಇರಲಿಲ್ಲ. ಈಗಲೂ ಇಲ್ಲ. ಯುಪಿಎ-ಎನ್‌ಡಿಎ ಸರ್ಕಾರಗಳೆರಡನ್ನು ನಡೆಸಿದವರು ಇದೇ ನೀತಿಯನ್ನೇ ಜಾರಿಗೆ ತರಲು ಹವಣಿಸಿದವರು.

ಈ ನೀತಿಗಳಿಗೆ ತೀವ್ರ ಪ್ರತಿರೋಧ ಒಡ್ಡಿ, ಉದಾರೀಕರಣ ನೀತಿಗಳಿಗೆ ನಿಯಂತ್ರಣ ಹೇರಿದ್ದು ಎಡಪಕ್ಷಗಳ ಹೋರಾಟ. ಇದನ್ನು ಎಷ್ಟೋ ಜನ ಆರ್ಥಿಕ ತಜ್ಞರು ಗುರುತಿಸಲೇ ಬೇಕಾಗಿ ಬಂದಾಗಲೂ ಮೇಲು ದನಿಯಲ್ಲಿ ಮಾತ್ರ ಹೇಳಿದರು. ಕಮ್ಯೂನಿಸ್ಟರ ಹೋರಾಟದಿಂದಾಗಿ ದೇಶಕ್ಕೆ ದೊಡ್ಡ ಹಾನಿ ತಪ್ಪಿತು ಎಂದು ಹೇಳಲು ಆರೆಸ್ಸೆಸ್‌ಗೂ, ಕಾಂಗ್ರೆಸ್‌ಗೂ ಕಷ್ಟವೇ ಅಲ್ಲವೇ? ಪಾಪ.

ಮೇಘಾಲಯ ರಾಜ್ಯದಲ್ಲಿ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರೇ ಬಹುಸಂಖ್ಯಾತರು. ಭಾರತವನ್ನು 'ಹಿಂದೂ ರಾಷ್ಟ್ರ' ಮಾಡಬೇಕಾದರೆ ಈ ಸ್ಥಿತಿಯನ್ನು ಬದಲಿಸಬೇಕಲ್ಲವೇ? ಅದಕ್ಕೆ ಏನು ಮಾಡಲಾಗುತ್ತಿದೆ. ಓದಿ...

ಮೇಘಾಲಯದ ಮಕ್ಕಳಿಗೆ ಕರ್ನಾಟಕದಲ್ಲಿ RSS ತಾಲೀಮು

ಅಪ್ಪು

ಆಗಷ್ಟೇ ಪ್ರಪಂಚವನ್ನು ಕಾಣಲು ಹಾತೊರೆಯುತ್ತಿರುವ ಕಂದಮ್ಮಗಳಿಗೆ ಮತಾಂಧತೆಯ ವಿಷ ಉಣಿಸಲು ಆರ್‌ಎಸ್‌ಎಸ್ ದೀರ್ಘಕಾಲೀನ ಕಾರ್ಯತಂತ್ರವೊಂದನ್ನು ರೂಪಿಸಿರುವುದು ಕೇಳುಗರ ಎದೆ ಝಲ್ಲೆನಿಸುತ್ತದೆ. ಇದು ಧರ್ಮಾಂಧರ ಮತ್ತೊಂದು ಕ್ರೌರ್ಯವೂ ಹೌದು. ಈಶಾನ್ಯ ಭಾರತದ ರಾಜ್ಯಗಳಿಂದ ಮಕ್ಕಳನ್ನು ತಂದು ಆರ್‌ಎಸ್‌ಎಸ್ ಸಿದ್ಧಾಂತವನ್ನು ಬೋಧಿಸುವ ಈ ತಂತ್ರ ರಾಜ್ಯದಲ್ಲಿ ರಾಜಾರೋಷವಾಗಿ ಸಾಗುತ್ತಿದೆ. 2001ರಿಂದ ಮೇಘಾಲಯದಿಂದ ಸುಮಾರು 1600 ಮಕ್ಕಳನ್ನು ಹೀಗೆ ಕರೆತರಲಾಗಿದ್ದು, ದಕ್ಷಿಣ ಕನ್ನಡದ ಶಾಲೆಗಳಲ್ಲಿ ಸೇರಿಸಲಾಗಿದೆ. ಇತ್ತೀಚಿಗೆ ಕಳೆದ ಜೂನ್ 7ರಂದು 160 ಮಕ್ಕಳನ್ನು ಮೇಘಾಲಯದಿಂದ 50 ಗಂಟೆಯಷ್ಟು ದೀರ್ಘಕಾಲದ ಪ್ರಯಾಣದ ಮೂಲಕ ರೈಲಿನಲ್ಲಿ ಕರೆತರಲಾಗಿದೆ. ಆರ್‌ಎಸ್‌ಎಸ್ ಸಂಘಟಕರಾದ ತುಕಾರಾಮ್ ಶೆಟ್ಟಿ ಈ ಯೋಜನೆಯ ಮುಖ್ಯ ರೂವಾರಿಯಾಗಿದ್ದಾರೆ. ಮಕ್ಕಳನ್ನು ಬೆಂಗಳೂರಿನಲ್ಲಿ ಓದಿಸುವುದಾಗಿ ಅಲ್ಲಿನ ಪೋಷಕರಿಗೆ ತಲೆ ನೀವಿ ಆರ್‌ಎಸ್‌ಎಸ್ ನಿರ್ದೇಶನದಲ್ಲಿ ನಡೆಯುತ್ತಿರುವ ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಪುತ್ತೂರು, ಕಲ್ಲಡ್ಕ, ಕಾಪು, ಕೊಲ್ಲೂರು, ಉಪ್ಪೂರು, ದೇರಲಕಟ್ಟೆ, ಮಂಡ್ಯ ಜಿಲ್ಲೆಯ ಆದಿ ಚುಂಚನಗಿರಿ ಮಠ ಮತ್ತು ಸುತ್ತೂರಿನಲ್ಲಿರುವ ಜೆಎಸ್‌ಎಸ್ ಮಠಗಳಲ್ಲಿ ಸೇರಿಸಲಾಗಿದೆ.

'ವರ್ಗ ತಾರತಮ್ಯ'

ಈ ಮಕ್ಕಳ ಪಾಲನೆ ಮತ್ತು ಶಿಕ್ಷಣ ನೀಡುವಲ್ಲಿಯೂ ಬೇಧಭಾವ ತೋರಿಸುತ್ತಿರುವುದನ್ನು ಕಾಣುತ್ತೇವೆ. ಬಡ ಕುಟುಂಬದಿಂದ ಕರೆತಂದಿರುವ ಮಕ್ಕಳಾದರೆ ಅವರನ್ನೂ ಯಾವುದೋ ದೂರದ ಶಾಲೆಯಲ್ಲಿ ಸೇರಿಸುತ್ತಾರೆ. ಅಲ್ಲಿ ಸಮರ್ಪಕವಾದ ಆಹಾರ, ಶಿಕ್ಷಣ ಏನೂ ಇರುವುದಿಲ್ಲ. ತೆಂಕಬೆಟ್ಟು ಶಾಲೆಯಲ್ಲಿ ಕಲಿಕಾ ಕೊಠಡಿ, ಹಾಸ್ಟೆಲ್ ಎಲ್ಲವೂ ಒಂದೇ ಕೊಠಡಿಯಲ್ಲಿ ನಡೆಯುತ್ತಿದೆ. ಬರಿ ನೆಲದ ಮೇಲೆ ಕೂರುವ ಮಕ್ಕಳು ರಾತ್ರಿ ಮಲಗುವ ಮುನ್ನ ಪುಸ್ತಕಗಳನ್ನು ಗೋಡೆ ಪಕ್ಕಕ್ಕೆ ಸರಿಸಿಟ್ಟು ಅಲ್ಲೇ ಮಲಗುವಂತಹ ಪರಿಸ್ಥಿತಿ ಇದೆ. ಕೊಠಡಿಯ ಮತ್ತೊಂದು ಭಾಗವನ್ನು ಹಳೆ ಸೋಫಾಸೆಟ್‌ನಿಂದ ವಿಭಜಿಸಿ ಅಡುಗೆ ಕೋಣೆ ಮಾಡಲಾಗಿದೆ. ಸಣ್ಣ ಮಕ್ಕಳಿಗೆ ಬೆಳಿಗ್ಗೆ ತಣ್ಣೀರಿನಿಂದ ಸ್ನಾನ ಮಾಡಿಸಿ ಬೋಧನೆ ಶುರುವಾಗುತ್ತದೆ. ಮಕ್ಕಳು ತಮ್ಮ ಮಾತೃಭಾಷೆಗೆ ಹೊರತಾದ ಭಾಷೆಯಲ್ಲಿ ಶಿಕ್ಷಣ ಕಲಿಯುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಗಿದೆ. ವೇದಗಳಲ್ಲಿರುವ ಶ್ಲೋಕಗಳನ್ನು ಕಂಠಪಾಠ ಮಾಡಿ ಒಪ್ಪಿಸುವಂತಹ ನರಕಯಾತನೆಗೆ ಮಕ್ಕಳನ್ನು ದೂಡಲಾಗಿದೆ. ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಉತ್ತಮವಾಗಿರುವ ಮನೆಗಳಿಂದ ಮಕ್ಕಳನ್ನು ಕರೆತಂದಿದ್ದರೆ ಸ್ವಲ್ಪ ಉತ್ತಮವಾದ ಶಾಲೆಗಳಲ್ಲೇ ಅವರನ್ನು ಸೇರಿಸಲಾಗಿದೆ.

ಸಸ್ಯಾಹಾರ ಮಾತ್ರ

ಗುರುಬ್ರಹ್ಮ ಗುರು ವಿಷ್ಣು ಗುರುದೇವೋ ಮಹೇಶ್ವರದಿಂದ ಆರಂಭವಾಗುವ ಪಾಠ ಸಂಪೂರ್ಣವಾಗಿ ಬ್ರಾಹ್ಮಣ ಶ್ಲೋಕಗಳನ್ನು ಕಲಿಯುತ್ತಾ ಮುಂದುವರೆಯುತ್ತದೆ. ಮಕ್ಕಳನ್ನು ಸಂಪೂರ್ಣವಾಗಿ ಸಸ್ಯಹಾರಿಗಳನ್ನಾಗಿ ಮಾಡಲಾಗಿದೆ. ಹಸು ನಮ್ಮ ಪವಿತ್ರ ಪ್ರಾಣಿ. ಅದನ್ನು ಕೊಲ್ಲಬಾರದು. ಅದನ್ನು ಕೊಂದು ತಿನ್ನುವವರಿಗೆ ಈ ದೇಶದಲ್ಲಿ ಜಾಗ ಇಲ್ಲ ಎನ್ನುವವರೆಗೆ ಬೋಧನೆ ನಡೆಯುತ್ತದೆ.



ಮೇಘಾಲಯದ ಬುಡಕಟ್ಟು ಜಿಲ್ಲೆಗಳಾದ ರಿಬೋಯ್, ಪಶ್ಚಿಮ ಕಾಸೀ ಬೆಟ್ಟಗಳು, ಪೂರ್ವ ಕಾಸೀ ಬೆಟ್ಟಗಳು ಮತ್ತು ಜೈಂತಿಯಾ ಜಿಲ್ಲೆಗಳಿಂದ ಮಕ್ಕಳನ್ನು ಕರೆತರಲಾಗಿದೆ. ಈ ಮಕ್ಕಳ ತಂದೆ ತಾಯಂದಿರಿಗೆ ತಮ್ಮ ಮಕ್ಕಳು ಎಲ್ಲಿ ಓದುತ್ತಿದ್ದಾರೆ, ಏನು ಮಾಡುತ್ತಿದ್ದಾರೆ, ಹೇಗಿದ್ದಾರೆ ಎಂಬುದೇ ತಿಳಿದಿಲ್ಲ. ನಮ್ಮ ಮಕ್ಕಳು ಬೆಂಗಳೂರಿನಲ್ಲಿ ಓದುತ್ತಿದ್ದಾರೆ ಎಂಬ ಆಸೆಯೊಂದಿಗೆ ಅವರು ಕಾಲ ದೂಡುತ್ತಿದ್ದಾರೆ. ಆದರೆ ವಾಸ್ತವವಾಗಿ ಅವರು ಭವಿಷ್ಯದಲ್ಲಿ ಭಾರತವನ್ನು ಛಿದ್ರ ಛಿದ್ರಗೊಳಿಸುವಂತಹ ಅಪಾಯಕಾರಿ ಸಿದ್ಧಾಂತದ ಆಯುಧಗಳಾಗಿ ತಯಾರಾಗುತ್ತಿದ್ದಾರೆ ಎಂಬುದು ಅವರಿಗೆ ಗೊತ್ತಿಲ್ಲ.

ಆರ್‌ಎಸ್‌ಎಸ್ ಕಾರ್ಯಕರ್ತನಾಗಿರುವ ತುಕಾರಾಮ್ ಶೆಟ್ಟಿ ಲೀ ಶಿಂಬಾರ್ ಕಲ್ಚರಲ್ ಸೊಸೈಟಿ ಹೆಸರಿನಲ್ಲಿ ಮೇಘಾಲಯದಲ್ಲಿ ಕಾರ್ಯನಿರ್ವಹಿಸುತ್ತಾ ಅಲ್ಲಿನ ಪೋಷಕರನ್ನು ಮನವೊಲಿಸುವ ಕೆಲಸದಲ್ಲಿ ನಿರತನಾಗಿದ್ದಾನೆ. ಈ ಸೊಸೈಟಿ ಆರ್‌ಎಸ್‌ಎಸ್‌ನ ಅಂಗಸಂಸ್ಥೆಯಾಗಿದೆ. ವಾಸ್ತವವಾಗಿ ಈ ಸೊಸೈಟಿ ಮೇಘಾಲಯದ ಗ್ರಾಮೀಣ ಪ್ರದೇಶದಲ್ಲಿ ಯಾರಿಗೂ ಗೊತ್ತೇ ಇಲ್ಲ. ಆದರೆ ಆರ್‌ಎಸ್‌ಎಸ್ ಈ ಕೃತ್ಯದಲ್ಲಿ ತೊಡಗಿದೆ ಎಂದು ಎಲ್ಲರಿಗೂ ತಿಳಿದಿದೆ. ಕ್ರಿಶ್ಚಿಯನ್ ಧರ್ಮದೊಂದಿಗೆ ಯಾವ ಕುಟುಂಬ ಸಂಪರ್ಕ ಹೊಂದಿಲ್ಲವೋ ಅವರನ್ನು ಪತ್ತೆ ಹಚ್ಚಲು ನಮ್ಮನ್ನು ಮನವಿ ಮಾಡಿದ್ದಾರೆ ಎಂದು ಸೆಂಗ್ ಖಾಸಿ ಶಾಲೆಯ ಶಿಕ್ಷಕರೊಬ್ಬರು ತಿಳಿಸಿದ್ದಾರೆ. ಅಂತಹ ಕುಟುಂಬಗಳ ಮಕ್ಕಳಿಗೆ ಖಾಸಿ ಮತ್ತು ನಿಯಾಮತ್ರೆ ಸಂಸ್ಕೃತಿಯ ಅನುಸಾರವೇ ಕರ್ನಾಟಕದಲ್ಲಿ ಶಿಕ್ಷಣ ಕೊಡಿಸುವುದಾಗಿ ಕರೆತರಲಾಗುತ್ತಿದೆ.

ಅಪರಿಚಿತ ಪರಿಸರ ಶಿಕ್ಷಣ


ಕಾಪು ವಿದ್ಯಾನಿಕೇತನ್ ಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ಓದುತ್ತಿರುವ ಖತ್‌ಬಿಯಾಂಗ್ ರಿಂಬಾಯ್ ತಮ್ಮನ್ನು ಬೆಂಗಳೂರಿಗೆ ಹೇಗೆ ಕರೆತಂದರು ಎಂಬುದನ್ನು ತಿಳಿಸಿದ್ದಾನೆ. 200 ವಿದ್ಯಾರ್ಥಿಗಳಿದ್ದ ಗುಂಪನ್ನು 13-14 ಹುಡುಗರಿರುವಂತೆ ವಿಭಜಿಸಿ ಅವರಿಗೆ ಗುರುತಿನ ಪತ್ರಗಳ[...] ನೇತುಹಾಕುತ್ತಾರೆ. ಶಿಲಾಂಗ್‌ನಿಂದ ಗೌಹಾತಿ[...] ಟಾಟಾ ಸುಮೊಗಳಲ್ಲಿ ಕರೆತಂದು ಅಲ್ಲಿಂ[...] ಬೆಂಗಳೂರಿಗೆ ರೈಲಿಗೆ ಹತ್ತಿಸುತ್ತಾರೆ. ಬೆಂಗಳೂರಿ[...] ಆರ್‌ಎಸ್‌ಎಸ್ ಕಚೇರಿಗೆ ಕರೆತಂದು ಅಲ್ಲಿ ಮ[...] ಗುಂಪುಗಳನ್ನಾಗಿ ಮಾಡಿ ವಿವಿಧ ಶಾಲೆಗಳ[...] ಕಳಿಸುತ್ತಾರೆ. ಅಣ್ಣ ತಮ್ಮಂದಿರಿದ್ದಲ್ಲಿ ಗಲಾ[...] ಮಾಡುತ್ತಾರೆ ಎಂದು ಅವರನ್ನು ಸದಾ ಪ್ರತ್ಯೇಕ[...] ಇಟ್ಟಿರುತ್ತಾರೆ. ಒಬ್ಬರನ್ನು ಕಾಸರಗೋಡಿನಲ್ಲಿ ಇ[...] ಮತ್ತೊಬ್ಬರನ್ನು ಕರ್ನಾಟಕದಲ್ಲಿಡುತ್ತಾರೆ. ವಾಸ್ತವ[...] ಈ ಮಕ್ಕಳು ಪಡೆಯುತ್ತಿರುವ ಶಿಕ್ಷಣ ಸಂಪೂರ್ಣವಾ[...] ಅವರ ಮಾತೃ ಸಂಸ್ಕೃತಿ, ಧರ್ಮ, ಭಾಷೆ ಮ[...] ಸಂಪ್ರದಾಯಕ್ಕೆ ವಿರುದ್ಧವಾಗಿದೆ. ಹವಾಮಾ[...] ಬದಲಾವಣೆಯಾದ ಕಾರಣದಿಂದಾಗಿ ಈಗ [...] ಮಕ್ಕಳೆಲ್ಲ ಹಲವು ರೀತಿಯ ಕಾಯಿಲೆಗಳ[...] ತುತ್ತಾಗಿದ್ದಾರೆ. ಕರ್ನಾಟಕದ ಪ್ರಾಕೃತಿಕ ವಾತಾವರಣ[...] ಒಗ್ಗಿಗೊಳ್ಳಲು ಸಾಧ್ಯವಾಗದಿರುವುದರಿಂದ ಈ ಮ[...] ಚರ್ಮಗಳು ಸುಕ್ಕುಗಟ್ಟಿವೆ. ಸ್ಥಳೀಯ ಆಸ್ಪತ್ರೆಗಳ[...] ಚಿಕಿತ್ಸೆಗೆ ಕರೆದೊಯ್ದಾಗ ಹವಾಮಾ[...] ಬದಲಾವಣೆಯಿಂದಾಗಿ ಹೀಗಾಗಿದೆ, ಅವರ ಮೂ[...] ಸ್ಥಳಕ್ಕೆ ಕಳುಹಿಸಿ ಎಂದು ವೈದ್ಯರು ಸಲಹೆ ನೀಡಿದ್ದಾ[...] ಇಂತಹ ನರಕ ಯಾತನೆಯಲ್ಲಿ ಮಕ್ಕ[...] ಜೀವಿಸುತ್ತಿದ್ದಾರೆ. ಇದೇನಾ ಇವರ ಧ[...] ಬೋಧಿಸುವುದು ಎಂಬ ಪ್ರಶ್ನೆ ಎಲ್ಲರಲ[...] ಮೂಡುತ್ತದೆ.

ತೆಂಕಬೆಟ್ಟು ಶಾಲೆಯಲ್ಲಿರುವ ಮಕ್ಕಳ ಚರ್ಮ[...] ಬಿಸಿಯಿಂದಾಗಿ ಹುಣ್ಣಾಗಿ ಪರಿವರ್ತನೆಗೊಂಡ[...] ಆದಿ ಚುಂಚನಗಿರಿ ಶಾಲೆಯಲ್ಲಿ ಓದುತ್ತಿರುವ ಮ[...] ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಆದರೆ ಮಕ್ಕ[...] ಇತರ ಮಕ್ಕಳು ಮತ್ತು ಇಲ್ಲಿನ ವಾತಾವರಣಕ್ಕೆ ಚೆನ್ನಾ[...] ಒಗ್ಗಿಕೊಂಡಿದ್ದಾರೆ ಎಂದು ಶಾಲೆಗಳ ಮುಖ್ಯಸ್ಥ[...] ಹೇಳಿಕೊಳ್ಳುತ್ತಿದ್ದಾರೆ. ಆದರೆ ವಾಸ್ತವವಾಗಿ ಈ ಮ[...] ಮುಖದಲ್ಲಿ ಪ್ರತ್ಯೇಕತೆಯ ನೋವು ಕಾಣಿಸಿಕೊಳ್ಳುತ್ತಿ[...]

ಆಧಾರ: ತೆಹೆ[...]

'ಪಕ್ಕಾ' ವ್ಯವಸ್ಥೆ ಇದೆ!!!

ಆಚಾರ್ಯ ಗಿರಿರಾಜ ಕಿಶೋರ್, ವಿಶ್ವ ಹಿಂದೂ ಪರಿಷತ್‌ನ ರಾಷ್ಟ್ರೀಯ ಉಪಾಧ್ಯಕ್ಷ. ಬಾಬರಿ ಮಸೀದಿ ಧ್ವಂಸ ವಿಧ್ವಂಸದ ನೇತೃತ್ವ ವಹಿಸಿದ್ದ 'ನೇತಾರ; ಉಗ್ರ ಹಿಂದುತ್ವವಾದಿ. ಆಗಸ್ಟ್ 19,2009ರಂದು 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಅವರ ಸಂದರ್ಶನವೊಂದು ಪ್ರಕಟವಾಗಿದೆ. ಅದರಲ್ಲಿನ ಒಂದು ಪ್ರಶ್ನೆ ಮತ್ತು ಉತ್ತರವನ್ನು ಇಲ್ಲಿಕೊಡಲಾಗಿದೆ. 'ಹಿಂದೂ' ಧರ್ಮ ಎಂದರೇನು ವಿವರ ಬೇಕಾದವರೆಲ್ಲ ಇದನ್ನು ನೋಡಬಹುದು. ಇನ್ನೂ ಹೆಚ್ಚಿನ ವಿವರ ಬೇಕಾದಲ್ಲಿ ಆಚಾರ್ಯರನ್ನು ಕೇಳಬಹುದು.




ಸಂಯುಕ್ತ ಕರ್ನಾಟಕ: ಒಂದು ಕಾಲಕ್ಕೆ ನೀವು ಜಾತಿ ಪದ್ಧತಿಯನ್ನು ಬಲವಾಗಿ ಪ್ರತಿಪಾದಿಸುತ್ತಿದ್ದಿರಿ. ಈಗೇನಾದರೂ ನಿಮ್ಮ ನಿಲುವಿನಲ್ಲಿ ಬದಲಾವಣೆ ಆಗಿದೆಯೇ?

ಆಚಾರ್ಯ ಗಿರಿರಾಜ ಕಿಶೋರ್: ನನ್ನ ನಿಲುವಿನ ಬಗ್ಗೆ ಸ್ಪಷ್ಟನೆ ಕೊಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಆಭಾರಿಯಾಗಿದ್ದೇನೆ. ಹಿಂದೂ ಧರ್ಮದಲ್ಲಿ ಪ್ರತಿಯೊಂದು ಜಾತಿಗೂ ಪಕ್ಕಾ ವ್ಯವಸ್ಥೆ ಇದೆ. ಈಗ ಇಲ್ಲಿ ಪ್ರತಿಯೊಂದು ಜಾತಿಗೂ ಅದರದ್ದೇ ಆದ ಸಾಮಾಜಿಕ ಹೊಣೆಗಾರಿಕೆ ಇದೆ. ಆದರೆ ಒಂದು ಜಾತಿ ಇನ್ನೊಂದು ಜಾತಿಯನ್ನು ದ್ವೇಷಿಸುವುದು ಅರ್ಥಹೀನ.

ಜನರ ಪರಿತಾಪ : ಕಿವುಡು ಯುಪಿಎ

ಯುಪಿಎ ದರ್ಬಾರ್ II ನಲ್ಲಿ



4000 ಕೋಟಿ ರೂ.ಗಳ ರಕ್ಷಣಾ ಕಂಟ್ರಾಕ್ಟ್ ಇಸ್ರೇಲಿಗೆ

ಭಾರತದ ರಕ್ಷಣಾ ಸಚಿವಾಲಯ ಸೇನಾಪಡೆಗೆ ...ನೆಲದಿಂದ ಆಕಾಶ ಕ್ಷಿಪಣಿ'ಗಳ ಪೂರೈಕೆಗಾಗಿ 4000 ...ಕೋಟಿ ರೂ.ಗಳ ಒಂದು ಕಾಂಟ್ರಾಕ್ಟನ್ನು ಇಸ್ರೇಲಿನ ...ಕಂಪನಿಗಳಿಗೆ ನೀಡಲು ನಿರ್ಧರಿಸಿದೆ. ಐಎಐ ಮತ್ತು ...ರಾಫೆಲ್ ಎಂಬ ಈ ಎರಡು ಕಂಪನಿಗಳನ್ನು 1160 ...ಕೋಟಿ ರೂ.ಗಳ ಬಾರಕ್-1 ಹಗರಣದಲ್ಲಿ ಸಿಬಿಐ ...ಹೆಸರಿಸಿತ್ತು. ಆದರೆ ರಕ್ಷಣಾ ಸಚಿವಾಲಯ ಇವನ್ನು ...ಪ್ಪು ಪಟ್ಟಿಗೆ ಸೇರಿಸಿದರೆ ಅವರೊಂದಿಗೆ ...ವ್ಯವಹಾರದಲ್ಲಿ ತೊಂದರೆಯಾಗುತ್ತದೆ ಎಂದು ...ಂದೇಟು ಹಾಕುತ್ತಿತ್ತು ಎಂಬುದನ್ನು ಇಲ್ಲಿ ...ಮನಿಸಬಹುದು.

...ನಡುವೆ ಪ್ರಧಾನ ಮಂತ್ರಿಗಳು ಭ್ರಷ್ಟಾಚಾರ ...ರು ಬಗ್ಗೆ ಸಿಬಿಐ ಅಧಿಕಾರಿಗಳ ಸಭೆಯನ್ನು ...ಉದ್ದೇಶಿಸಿ ಮಾತಾಡುತ್ತ ಭ್ರಷ್ಟಾಚಾರದ ಕೇಸುಗಳಲ್ಲಿ ...ಕೇವಲ ಸಣ್ಣ ಮೀನುಗಳನ್ನು ಹಿಡಿಯಲಾಗುತ್ತದೆ, ...ತಿಮಿಂಗಿಲಗಳು ತಪ್ಪಿಸಿಕೊಳ್ಳುತ್ತವೆ ಎಂಬ ಭಾವನೆ ...ಯನ್ನು ಹೋಗಲಾಡಿಸಬೇಕು ಎಂದು ಹೇಳಿದ್ದಾರೆ. ...ಅಲ್ಲದೆ ಭ್ರಷ್ಟಾಚಾರ ಅಂತರ್ರಾಷ್ಟ್ರೀಯ ...ವ್ಯವಹಾರಗಳಲ್ಲಿಯೂ ತೊಡಕಾಗಿ ಆರ್ಥಿಕ ...ವಾಗಿಯೂ ತೊಂದರೆಯಾಗುತ್ತಿದೆ ಎಂದಿದ್ದಾರೆ!

★

...ಶೈಕ್ಷಣಿಕ ಗುಣಮಟ್ಟ ತಪಾಸಣೆಯಲ್ಲೂ ಖಾಸಗೀಕರಣ

ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ...ಉನ್ನತ ಶಿಕ್ಷಣದಲ್ಲಿ ಗುಣಮಟ್ಟ ತಪಾಸಣೆ ಕುರಿತ ...ಒಂದು ಮಸೂದೆ ತಯಾರಿಸಿದ್ದು ಅದರಲ್ಲಿ ಒಂದಕ್ಕಿಂತ ಹೆಚ್ಚು ತಪಾಸಣಾ ಸಂಸ್ಥೆಗಳಿಗೆ ಅವಕಾಶ ಕಲ್ಪಿಸಲಾಗುತ್ತಿದೆ. ಈ ಹೊಸ ತಪಾಸಣಾ ಸಂಸ್ಥೆಗಳಲ್ಲಿ ಹೆಚ್ಚಿನವು ಖಾಸಗಿ ಸಂಸ್ಥೆಗಳು. ಇದುವರೆಗೆ ಎನ್‌ಎಎಸಿಗೆ ಈ ಕೆಲಸ ವಹಿಸಲಾಗಿತ್ತು.

★

ಪರಮಾಣು ಸ್ಥಾವರಗಳಲ್ಲಿ ಎಫ್‌ಡಿಐ ಬೇಕಿಲ್ಲ

ಅಣು ಶಕ್ತಿ ಆಯೋಗದ ಅಧ್ಯಕ್ಷ ಡಾ. ಅನಿಲ್ ಕಾಕೋಡ್ಕರ್ ಪರಮಾಣು ವಿದ್ಯುತ್ ಸ್ಥಾವರಗಳಲ್ಲಿ ವಿದೇಶಿ ನೇರ ಹೂಡಿಕೆಯ ವಿಚಾರವಿಲ್ಲ ಎಂದಿದ್ದಾರೆ. ಆದರೆ ಕೇಂದ್ರ ಸರಕಾರದ ಆರ್ಥಿಕ ಸಮೀಕ್ಷೆ ಈ ವಲಯದಲ್ಲೂ 49 ಶೇಕಡಾದ ವರೆಗೆ ಎಫ್‌ಡಿಐ ಗೆ ಅವಕಾಶ ಕಲ್ಪಿಸಬೇಕು, ಇದಕ್ಕಾಗಿ ಅಣುಶಕ್ತಿ ಕಾನೂನನ್ನು ತಿದ್ದುಪಡಿ ಮಾಡಬೇಕು ಎಂದು ಕರೆ ನೀಡಿತ್ತು.

★

ದೋಹಾ ಮಾತುಕತೆ ಪುನರಾರಂಭದ ತರಾತುರಿ

ವಿಶ್ವ ವ್ಯಾಪಾರ ಸಂಸ್ಥೆಯ ದೋಹಾ ಸುತ್ತಿನ ಮಾತುಕತೆ ಶ್ರೀಮಂತ ದೇಶಗಳ ಹಠಮಾರಿತನದಿಂದಾಗಿ ಸ್ಥಗಿತಗೊಂಡಿದ್ದು ಮುಂದಿನ ಸಭೆ ನವೆಂಬರ್ 30ರಿಂದ ಡಿಸೆಂಬರ್ 2ರ ವರೆಗೆ ನಡೆಯುವುದೆಂದು ಗೊತ್ತಾಗಿತ್ತು. ಆದರೆ ಈಗ ದಿಲ್ಲಿಯಲ್ಲಿ ಸಪ್ಟಂಬರ್ 3, 4 ರಂದು ಡಬ್ಲ್ಯುಟಿಒ ವ್ಯಾಪಾರ ಮಂತ್ರಿಗಳ ಸಭೆ ನಡೆಸಲು ಭಾರತ ಮುಂದಾಗಿದೆ. ದೇಶದಲ್ಲಿ ಬರಗಾಲ ರೈತರನ್ನು ಹಣ್ಣುಗಾಯಿ ಮಾಡಿರುವಾಗ ಆ ಬಗ್ಗೆ ತುರ್ತು ಕ್ರಮಗಳನ್ನು ಕೈಗೊಳ್ಳದ ಸರಕಾರಕ್ಕೆ ತರಾತುರಿಯಲ್ಲಿ ಈ ಸಭೆ ಏರ್ಪಡಿಸುವ ಅಗತ್ಯ ಏನಿತ್ತು ಎಂಬ ಪ್ರಶ್ನೆ ಎದ್ದಿದೆ. ಇದಕ್ಕೆ ಅಮೆರಿಕಾದ ಒತ್ತಡ ಕಾರಣ, ಕಳೆದ ಜೂನ್‌ನಲ್ಲಿ ನಮ್ಮ ವಾಣಿಜ್ಯ ಮಂತ್ರಿಗಳು ಅಮೆರಿಕನ್ ವ್ಯಾಪಾರ ಪ್ರತಿನಿಧಿಯನ್ನು ಭೇಟಿಯಾದ ಫಲವಾಗಿ ಈ ಸಭೆ ಏರ್ಪಾಟಾಗಿದೆ, ಇದು ನಮ್ಮ ರೈತರಿಗೆ ಇನ್ನಷ್ಟು ಮಾರಕವಾಗಬಹುದು ಎನ್ನಲಾಗುತ್ತಿದೆ.

★

ಎರಡೇ ದಿನಗಳಲ್ಲಿ ಆರು ರೈತರ ಆತ್ಮಹತ್ಯೆ

ಮಹಾರಾಷ್ಟ್ರದ ವಿದರ್ಭ ಪ್ರದೇಶದಲ್ಲಿ ಈ ವಾರ ಎರಡೇ ದಿನಗಳಲ್ಲಿ ಆರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಒಂದು ತಿಮಗಳಲಿ ಅಲ್ಲಿ ಒಟ್ಟು 48 ರಯತರ ಆತ್ಮಹತ್ಯೆಗಳು ವರದಿಯಾಗಿದ್ದು ರೈತರ ಆತ್ಮಹತ್ಯೆಗಳ ಪ್ರಕ್ರಿಯೆ ಈ ಭಾಗದಲ್ಲಿ ಮತ್ತೆ ಪ್ರಾರಂಭವಾದಂತಿದೆ. ಈ ನಡುವೆ ಬರದ ಪರಿಸ್ಥಿತಿಯಿಂದ ಕಂಗಲಾಗ ಬೇಕಿಲ್ಲ ಎಂದು ಹಣಕಾಸು ಮಂತ್ರಿಗಳು ಭರವಸೆ ನೀಡಿದ್ದಾರೆ.

★

ಮಕ್ಕಳನ್ನು ಮಾರಲು ಅವಕಾಶ ಕೊಡಿ!

ಇದು ಆಂಧ್ರಪ್ರದೇಶದ ಮೇಡಕ್ ಜಿಲ್ಲೆಯ ಬರಪೀಡಿತ ಪಲುಗು ತಾಂಡದ ಬುಡಕಟ್ಟು ಜನಗಳ ಬೇಡಿಕೆ. ಸರಕಾರಕ್ಕೆ ಮತ್ತು ರಾಜ್ಯ ಮಾನವ ಹಕ್ಕು ಆಯೋಗಕ್ಕೆ ಈ ಬೇಡಿಕೆ ಸಲ್ಲಿಸಿದ್ದಾರಂತೆ. ನಮ್ಮ ಕುಟುಂಬಗಳನ್ನು ಸಾಕಲು ನಮಗೆ ಕೆಲಸ ಸಿಗುತ್ತಿಲ್ಲ, ಇನ್ನೇನು ಮಾಡುವುದು? ಎಂಬುದು ಅವರ ನೋವು.

ಈ ನಡುವೆ ಬಡತನದ ರೇಖೆಯ ಕೆಳಗಿರುವವರಿಗೆ 3ರೂ. ದರದಲ್ಲಿ 25 ಕೆ.ಜಿ. ಅಕ್ಕಿ ಅಥವಾ ಗೋದಿ ಕೊಡುವ ಯುಪಿಎ ಭರವಸೆ ಮುಂದೂಡಲ್ಪಡಬಹುದು ಎಂದು ಆಹಾರ ಸಚಿವಾಲಯದ ಅಧಿಕಾರಿಗಳು ಸೂಚಿಸಿದ್ದಾರಂತೆ. ಇದಕ್ಕೂ ಅವರು ಕೊಡುವ ಕಾರಣ ಬರ ಪರಿಸ್ಥಿತಿ. ಇದನ್ನು ಅಧಿಕಾರಕ್ಕೆ ಬಂದ ನೂರು ದಿನಗಳ ಒಳಗೆ ಜಾರಿಗೆ ತರುವುದಾಗಿ ಭರವಸೆ ನೀಡಲಾಗಿತ್ತು.

★

ಸಣಬು ಚೀಲಗಳ ಮೀಸಲಾತಿ ಕಡಿತ

ಭಾರತದಲ್ಲಿ ಸಣಬು ಉದ್ದಿಮೆಗೆ ರಕ್ಷಣೆ ಕೊಡಲು ಆಹಾರಧಾನ್ಯಗಳು ಹಾಗೂ ಸಕ್ಕರೆ ಪ್ಯಾಕೇಜಿಂಗ್‌ಗೆ ಸಣಬಿನ ಚೀಲಗಳನ್ನೇ ಬಳಸಬೇಕೆಂದಿದೆ. ಆದರೆ ಈಗ ಯುಪಿಎ-2 ಸರಕಾರದ ಜವಳಿ ಸಚಿವಾಲಯ ಅದರಲ್ಲಿ 25ಶೇಕಡಾ ಕಡಿತದ ಯೋಜನೆ ಹಾಕಿದೆ. ಹಿಂದೆ ಯುಪಿಎ-1 ಸರಕಾರದ ಅವಧಿಯಲ್ಲಿಯೂ ಇಂತಹ ಪ್ರಯತ್ನ ನಡೆದಿದ್ದು ಆಗ ಎಡ ಪಕ್ಷಗಳ ವಿರೋಧದಿಂದಾಗಿ ಅದು ನಡೆಯಲಿಲ್ಲ. ಇದು ಮಮತಾ ಬ್ಯಾನರ್ಜಿಯವರಿಗೆ ಮುಜುಗರ ತಂದಿದೆ.

★

ಬಿಜೆಪಿ ಬಿಟ್ಟವರಿಗೆ ರೈಲ್ವೇ ಇಲಾಖೆಯ ಆಶ್ರಯ!

ಈ ವಾರ ತಾನು ಬಿಜೆಪಿಯೊಂದಿಗೆ ಸಂಬಂಧವನ್ನು ಕೊನೆಗೊಳಿಸುವುದಾಗಿ ಪ್ರಕಟಿಸಿದ ಸುಧೀಂದ್ರ ಕುಲಕರ್ಣಿಯವರನ್ನು ರೈಲ್ವೇ ಮಂತ್ರಿ ಮಮತಾ ಬ್ಯಾನರ್ಜಿಯವರು ರೈಲ್ವೇ ಇಲಾಖೆಯಲ್ಲಿ ಸುಧಾರಣೆಗಳನ್ನು ತರಲು ರಚಿಸಿರುವ ಸಲಹಾ ಸಮಿತಿಯ ಸದಸ್ಯರಾಗಿ ನೇಮಿಸಿದ್ದಾರೆ. ಎನ್‌ಡಿಎ ಆಳ್ವಿಕೆಯಲ್ಲಿ ಬಿಜೆಪಿ ಪರವಾಗಿ ಕುಲಕರ್ಣಿ ಮಮತಾರವರೊಂದಿಗೆ ವ್ಯವಹರಿಸುತ್ತಿದ್ದರು. ಅವರು ಈಗ ತೃಣಮೂಲ ಕಾಂಗ್ರೆಸ್ ಸೇರಿದ್ದಾರೆ ಎಂಬ ಸುದ್ದಿಯನ್ನು ನಿರಾಕರಿಸಿದ್ದಾರೆ.

ರೈತರ ಆತ್ಮಹತ್ಯೆ : ಮುಖ್ಯಮಂತ್ರಿಗಳ ಜಿಲ್ಲೆ ನಂಬರ್ ಒನ್



ಬಿಜೆಪಿ ದರ್ಬಾರ್‌ನಲ್ಲಿ

...ರೈತರ ಆತ್ಮಹತ್ಯೆಗಳು 'ಸದ್ದಿಲ್ಲದೆ' ಹೆಚ್ಚತೊಡಗಿವೆ. ...ರಾಜ್ಯದಲ್ಲಿ ಮಹಾರಾಷ್ಟ್ರ, ಆಂಧ್ರಪ್ರದೇಶಗಳಂತೆ ...ಕರ್ನಾಟಕವೂ ಭಾರಿ 'ಪ್ರಸಿದ್ಧ' ಎಂಬುದು ನಮಗೆಲ್ಲಾ ...ಗೊತ್ತಿರುವ ವಿಷಯವೇ? ರೈತರ ಹೆಸರಿನಲ್ಲಿ ಪ್ರಮಾಣ ...ವಚನ ಸ್ವೀಕರಿಸಿ ರೈತರ ಹೆಸರಿನಲ್ಲಿ ಅಧಿಕಾರ ನಡೆಸುತ್ತಿದ್ದೇವೆ ಎನ್ನುವ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಏನಾದರೂ ಪರಿಸ್ಥಿತಿ ಬದಲಾಯಿಸಬಹುದೇ ಎಂದರೆ? ಊಹುಂ ಇಲ್ಲ.

2009ರ ಏಪ್ರಿಲ್ 1 ರಿಂದ ಕಳೆದ ವಾರದವರೆಗೆ ರಾಜ್ಯದಲ್ಲಿ 50 ಜನ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. 14 ತಿಂಗಳಲ್ಲಿ ಸಂಖ್ಯೆ 50 ದಾಟಿದೆ. ಕಳೆದ ವರ್ಷ ಅತಿ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು ಹಾಸನ ಜಿಲ್ಲೆಯಲ್ಲಿ. ಈ ವರ್ಷ ಈ 'ಕೀರ್ತಿ' ಮುಖ್ಯಮಂತ್ರಿಗಳ ಜಿಲ್ಲೆ, ಘಟಾನುಘಟಿ ಮಂತ್ರಿಗಳ ಜಿಲ್ಲೆ ಶಿವಮೊಗ್ಗಕ್ಕೆ ಸಲ್ಲುತ್ತಿದೆ. ಕಳೆದ ವರ್ಷ ರೈತರ ಆತ್ಮಹತ್ಯೆಯಲ್ಲಿ ಕರ್ನಾಟಕ ದೇಶದಲ್ಲೇ ಮೊದಲ ಸ್ಥಾನದಲ್ಲಿತ್ತು. ಈ ವರ್ಷವೂ ಅದೇ 'ರ್‍ಯಾಂಕ್' ಗಳಿಸುವ ಹಾದಿಯಲ್ಲಿದೆ ಎನ್ನುತ್ತಿವೆ ವರದಿಗಳು.

★

ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ

ಕಳೆದ ವರ್ಷ ಬಿಜೆಪಿ ಸರ್ಕಾರ ಗುಲ್ಬರ್ಗಾ ಜಿಲ್ಲೆಯಲ್ಲಿ ಮಂತ್ರಿ ಮಂಡಲ ಸಭೆ ನಡೆಸಿ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ ಪುಂಖಾನುಪುಂಖವಾಗಿ ಯೋಜನೆಗಳನ್ನು ಘೋಷಿಸಿತ್ತು. ಈ ಘೋಷಣೆ ಮಾಡುವ ಮುಂಚೆ ಕಳೆದ ವರ್ಷ ಇದೇ ರೀತಿಯಲ್ಲಿ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ ಬಗೆಗೆ ಘೋಷಿಸಲಾದ ಯೋಜನೆಗಳು ಎಷ್ಟು ಜಾರಿಯಾಗಿವೆ ಎಂದು ಮಾಹಿತಿ ನೀಡದಿದ್ದರೆ ಚೆನ್ನಾಗಿರುತ್ತಿತ್ತು. ಡಾ: ಡಿ.ಎಂ.ನಂಜುಂಡಪ್ಪ ವರದಿ ಸಮಿತಿ ಶಿಫಾರಸ್ಸಿನ ಆಧಾರದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಘೋಷಿಸಲಾಗಿದ್ದ 2,345 ಕೋಟಿ ರೂಪಾಯಿಗಳ ಅನುದಾನದಲ್ಲಿ ಬಿಡುಗಡೆಯಾಗಿದ್ದು ಕೇವಲ 200 ಕೋಟಿ ರೂಪಾಯಿಯಂತೆ. ಹಾಗಿದ್ದರೆ ವೀರಾವೇಶದ ಇಂತಹ ಘೋಷಣೆಗಳಿಗೆ ಅರ್ಥವೇನಿದೆ.?

ಗುಲ್ಬರ್ಗಾ ನಗರದ ಗುತ್ತಿಗೆ ಪೌರ ಕಾರ್ಮಿಕರಿಗೆ 26 ತಿಂಗಳಿಂದ ವೇತನ ದೊರೆತಿಲ್ಲವೆಂದು ಆಗಸ್ಟ್ 27ರಂದು ಗುಲ್ಬರ್ಗಾದಲ್ಲಿ ತೀವ್ರ ಪ್ರತಿಭಟನೆ ವ್ಯಕ್ತವಾಗಿದೆ. ತಿಂಗಳುಗಟ್ಟಲೆ ಶಾಂತಿಯುತ ಪ್ರತಿಭಟನೆ ನಡೆದರೂ ಸಮಸ್ಯೆ ಬಗೆಹರಿಯಲಿಲ್ಲ. ಮಂತ್ರಿ ಮಂಡಲ ಸಭೆಯ ದಿನ ಪ್ರತಿಭಟನೆ ತೀವ್ರಗೊಳ್ಳಬಾರದೆಂದು ಸರ್ಕಾರ ಪ್ರತಿಭಟನಾಕಾರರನ್ನು, ಮುಖಂಡರನ್ನು ಮೊದಲೇ ಬಂಧಿಸಿದೆ. ಹೇಗಿದೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ!! ಪೌರ ಕಾರ್ಮಿಕರಿಗೆ, ದುಡಿಯುವ ಜನಕ್ಕೆ ವೇತನವನ್ನೇ ಕೊಡದಿದ್ದರೂ ಅಭಿವೃದ್ಧಿಯ ಜಪವೋ ಜಪ.

★

ಲಜ್ಜೆಗೇಡಿ ಸರ್ಕಾರ

ನಕಲಿ ದಾಖಲೆ ನೀಡಿ ಬ್ಯಾಂಕ್‌ಗೆ ವಂಚನೆ ನಡೆಸಿದ ಪ್ರಕರಣದಲ್ಲಿ ರಾಜ್ಯ ಬಿಜೆಪಿ ಸರ್ಕಾರದ ಸಮಾಜ ಕಲ್ಯಾಣ ಸಚಿವ ಡಿ.ಸುಧಾಕರ್ ಅವರ ಮೇಲೆ ಸಿಬಿಐ ಆರೋಪ ಪಟ್ಟಿ ಸಲ್ಲಿಸಿದರೂ ಅವರು ರಾಜಿನಾಮೆ ಕೊಟ್ಟಿಲ್ಲ. ಮುಖ್ಯಮಂತ್ರಿ ಯಡಿಯೂರಪ್ಪ ರಾಜಿನಾಮೆ ಪಡೆದಿಲ್ಲ.

ಈ ನಡುವೆ ಸುಧಾಕರ್‌ರವರ ಕ್ಷೇತ್ರ ಹಿರಿಯೂರಿನಲ್ಲಿ ಆಗಸ್ಟ್ 27 ರಂದು ಹಿರಿಯೂರು ಬಂದ್ ನಡೆದು, ತೀವ್ರ ಪ್ರತಿಭಟನೆ ವ್ಯಕ್ತವಾಗಿದೆ. ಬಂದ್ ಸಂಪೂರ್ಣ ಯಶಸ್ವಿಯಾಗಿದೆ. ಬೃಹತ್ ಪ್ರತಿಭಟನೆ ನಡೆದಿದೆ. ಆದರೂ ಸಚಿವರ ರಾಜಿನಾಮೆ - ವಜಾ ಯಾವುದೂ ಇಲ್ಲ! ಎಂತಹ ಲಜ್ಜೆಗೇಡಿ ಮಂತ್ರಿ ಹಾಗೂ ನಾಚಿಕೆಗೇಡಿ ಸರ್ಕಾರ!!!

ಕುರುಡು ಕಾಂಚಾಣ

ಕಳ್ಳನಿಗೆ ಪಿಳ್ಳೆ ನೆವ

ಜಿ.ಎಸ್.ಮಣಿ


ಈ ಸಾಲಿನಲ್ಲಿ ದೇಶದ ಹಲವು ಬಾಗಗಳಲ್ಲಿ ಮುಂಗಾರು ಮಳೆ ಕೈ ಕೊಟ್ಟಿದೆ. ಮಳೆ ಕೈ ಕೊಟ್ಟಿರುವುದರಿಂದ ಖಾರಿಫ್ ಬೆಳೆ ಶೇ.50 ರಷ್ಟು ಮಾತ್ರ ಬರಲು ಸಾಧ್ಯ ಎಂಬ ಅಂದಾಜನ್ನು ಕೇಂದ್ರ ಸರ್ಕಾರ ಮಾಡಿದೆ. ಈಗಾಗಲೆ ಬೆಲೆಗಳು ಗಗನಕ್ಕೇರಿ ಕುಳಿತಿವೆ. ಮಳೆ ಕೈಕೊಟ್ಟು ಬೆಳೆ ಅರ್ಧದಷ್ಟಾದರೆ ಬೆಲೆಗಳು ಇನ್ನೂ ಮೇಲೆರಲಿವೆ ಎಂಬ ಸೂಚನೆಯನ್ನು ಕೇಂದ್ರ ಸರ್ಕಾರ ನೀಡಿದೆ ಎನ್ನಬಹುದು.

ಜಾಗತೀಕರಣ ಪ್ರಾರಂಭಿಸಿದ ದಿನಗಳಲ್ಲಿ ಜಾಗತೀಕರಣವಾದಿಗಳು ಈ ಕೆಳಗಿನ ವಾದವನ್ನು ಮಂಡಿಸಿದ್ದರು- "ಜಾಗತೀಕರಣದಿಂದ ನಮಗೆ ಅತ್ಯಂತ ಉತ್ತಮ ಸರಕು ಕಡಿಮೆ ಬೆಲೆಗೆ ದೊರೆಯುತ್ತದೆ. ಜಗತ್ತಿನಾದ್ಯಂತ ಸ್ಪರ್ಧಾತ್ಮಕತೆ ಇರುವುದರಿಂದ ಒಳ್ಳೆಯ ಗುಣಮಟ್ಟ ಮತ್ತು ಕಡಿಮೆ ಬೆಲೆ ಎರಡೂ ಸಾಧ್ಯವಾಗುತ್ತದೆ." ಈಗ ನಿಜಕ್ಕೂ ಏನಾಗಿದೆ? ಬೆಲೆಗಳು ಗಗನಕ್ಕೇರಿ ಆಹಾರ ಕೈಗೆಟುಕದಂತಾಗಿದೆ. ಹಿಂದೆ ಎಡ ಪಕ್ಷಗಳು ಇಂತಹ ಸಾಧ್ಯತೆಗಳ ಬಗ್ಗೆ ಹೇಳಿದಾಗ ಅವುಗಳನ್ನು ಗೇಲಿ ಮಾಡಿದ್ದ ಇವರು ಈಗ 'ಕಳ್ಳನಿಗೆ ಪಿಳ್ಳೆ ನೆವ' ಎಂಬಂತೆ ಪಿಳ್ಳೆ ನೆವ ಹೇಳುತ್ತಿವೆ. ಎಂತಹ ಜವಾಬುದಾರಸ್ತರಲ್ಲವೆ ಇವರು?

★

ಮುನ್ನ ಮಾಡಿದ ಕರ್ಮವೆನ್ನ ಬಿಡದು?

ಸಕ್ಕರೆಯ ಬೆಲೆ ವಿಪರೀತ ಏರಿದೆ. ಬಡವರಿಗೆ ಸಕ್ಕರೆ ಕಹಿಯಾಗಿದೆ. ಈಗ ಕೇಂದ್ರ ಸರ್ಕಾರ ಕಬ್ಬು ಬೆಳೆಗಾರರಿಗೆ ಬೋನಸ್ ನೀಡುವ ಮಾತನ್ನಾಡುತ್ತಿದೆ. ಕಳೆದ ಹಲವು ವರ್ಷಗಳು ಕಬ್ಬು ಬೆಳೆಗಾರರನ್ನು ನಿರ್ಲಕ್ಷ್ಯ ಮಾಡಿದ ಸರ್ಕಾರ ಅವರಿಗೆ ಯಾವುದೆ ಅನುಕೂಲಗಳನ್ನು ನೀಡಿರಲಿಲ್ಲ. ಸಕ್ಕರೆ ಕಾರ್ಖಾನೆಗಳು ರೈತರ ಹಣ ನೀಡದೆ ಸತಾಯಿಸುತ್ತಿದ್ದಾಗ ಮುಖ ತಿರುಗಿಸಿ ಕುಳಿತಿದ್ದ ಸರ್ಕಾರ ಈಗ ಬೆಲೆಗಳು ಏರಿ ದೇಶದಾದ್ಯಂತ ಸಕ್ಕರೆ ಕೊರತೆ ಆಗಬಹುದಾದ ಪರಿಸ್ಥಿತಿ ಬಂದಿರುವಾಗ ಮೊಸಳೆ ಕಣ್ಣೀರು ಸುರಿಸುತ್ತ ಭರವಸೆ ನೀಡುತ್ತಿದೆ. ಕಬ್ಬಿಗೆ ಹೆಚ್ಚಿನ ಬೆಂಬಲ ಬೆಲೆಯ ಘೋಷಣೆಯೂ ಆಗಿದೆ.



ಆದರೆ?

ಕಬ್ಬಿಗೆ ಸರಿಯಾದ ಬೆಲೆ ಸಿಗದೆ ಸಾಲದ ಶೂಲಕ್ಕೆ ಸಿಕ್ಕಿ ನರಳಿದ ರೈತ ಈಗ ಒಮ್ಮಿಂದೊಮ್ಮೆ ಮತ್ತೆ ಕಬ್ಬು ಕೃಷಿಗೆ ಇಳಿಯಲಾರ. ಮೂರಾಬಟ್ಟೆಯಾದ ಆತನ ಬಾಳು ನೆಲೆಗೆ ಬರಲು ಈ ಕ್ರಮಗಳಷ್ಟೆ ಸಾಲದು. ಆತ್ಮಹತ್ಯೆ ಮಾಡಿಕೊಂಡ ರೈತರು ವಾಪಸ್ಸು ಬಂದಾರೆ? ಎಷ್ಟೋ ರೈತರಿಗೆ ಕಬ್ಬು ಇನ್ನೂ ಹಲವು ವರ್ಷಗಳ ಕಾಲ ಕಹಿಯಾಗಿಯೆ ಉಳಿಯುತ್ತದೆ. ದೇಶದ ಜನತೆಗೆ ಸಕ್ಕರೆ ಹೇಗೆ ತಾನೆ ಸಿಹಿಯಾದೀತು?

★

ವೆನಿಲ್ಲಾ ಎಂಬ ಬೆಳೆಯ ಕಥೆ

ಉದಾರಿಕರಣ, ಜಾಗತೀಕರಣಗಳು ಜನಜೀವನದಲ್ಲಿ ಎಂತಹ ಅಲ್ಲೋಲ ಕಲ್ಲೋಲ ಹುಟ್ಟಿಸಬಹುದು ಎಂಬುದಕ್ಕೆ ವೆನಿಲ್ಲಾ ಬೆಳೆ ಒಳ್ಳೆಯ ಉದಾಹರಣೆ. ಮಡಗಾಸ್ಕರ ಎಂಬ ದೇಶದಲ್ಲಿ ಬಹುವಾಗಿ ಬೆಳೆಯುತ್ತಿದ್ದ ಈ ಬೆಳೆ ಕೆಲವು ವರ್ಷಗಳ ಹಿಂದೆ ಆ ದೇಶದಲ್ಲಿ ಸಮಸ್ಯೆ ಎದುರಿಸಿತು. ನೈಸರ್ಗಿಕ ಉತ್ಪನ್ನಗಳ ಹಿಂದೆ ಬಿದ್ದಿರುವ ಅಭಿವೃದ್ಧಿ ಹೊಂದಿದ ದೇಶಗಳು ಭಾರತ ಈ ಬೆಳೆ ಬೆಳೆಯಲು ಉತ್ತಮ ದೇಶ ಎಂದು ಘೋಷಿಸಿದುವು. ವೆನಿಲ್ಲಾ ಕಾಯಿಗಳಿಗೆ ಕಿಲೋಗ್ರಾಮಿಗೆ ಬರೀ ಎಪ್ಪತ್ತೈದು ರೂಪಾಯಿಗಳಿದ್ದದ್ದು ಮೂರು ಸಾವಿರದಷ್ಟಕ್ಕೇರಿದ್ದೂ ಹೌದು. ಒಂದೆರಡು ಬೆಳೆ ಬೆಳೆದು ಲಕ್ಷಾಧಿಪತಿಗಳಾದವರೂ ಉಂಟು.

ಇಂತಹ ಬೆಲೆ ಕಂಡು ವೆನಿಲ್ಲಾ ಬೆಳೆ ಬೆಳೆಯ ಹೊರಟವರು ಸಾವಿರಾರು ರೈತರು.

ಇಷ್ಟು ಹೊತ್ತಿಗೆ ಮಡಗಾಸ್ಕರ ಮತ್ತು ಇತರ ದೇಶಗಳಲ್ಲಿ ಈ ಬೆಳೆಯ ಪರಿಸ್ಥಿತಿ ಸುಧಾರಿಸಿ ಉ ಬೆಳೆ ಬರತೊಡಗಿತು. ಮತ್ತೆ ಇದರ ಕಾಯಿಗಳ ಕಿಲೋಗ್ರಾಮಿಗೆ ನೂರು ರೂಪಾಯಿಗಳಿಗಿಳಿ ಸಾಲಸೋಲ ಮಾಡಿ ವೆನಿಲ್ಲಾ ಬೆಳೆ ಬೇಸಾಯ ರೈತರ ಪರಿಸ್ಥಿತಿ ಏನಾಗಿರಬೇಕು?

ಇದೊಂದು ಉದಾಹರಣೆ ಮಾ ಉದಾರೀಕರಣದ ದಾರಿ ಇಂತಹ ಹ ಪ್ರಪಾತಗಳನ್ನು ಒಳಗೊಂಡಿದೆ. ಈ ಪ್ರಪಾತ ದೇಶದ ರೈತರನ್ನು ದೂಡಿ ಚೆಂದ ನೋಡು ಯುಪಿಎ ಸರ್ಕಾರದ ಹವ್ಯಾಸ. ಅಲ್ಲವೆ?

★

ಉದ್ಯೋಗದ ದಿನ ಹೆಚ್ಚಿಸುವುದೀ

ದೇಶವನ್ನು ಕಾಡುತ್ತಿರುವ ತೀವ್ರ ಬ ಪರಿಸ್ಥಿತಿಯಲ್ಲಿ ಗ್ರಾಮೀಣ ಉದ್ಯೋಗ ಯೋಜನೆಯನ್ನು 100 ದಿನಕ್ಕೆ ಬದಲಿಗೆ 200 ದಿ ಹೆಚ್ಚಿಸಬೇಕೆಂದು ಹಲವು ಜನಪರ ಸಂಘಟ ಚಳುವಳಿಗಳು ಒತ್ತಾಯಿಸುತ್ತಿವೆ. ಯುಪಿಎ ಸರ್ ಕೃಷಿ ಸಚಿವರು ಈ ಬಗ್ಗೆ ಪ್ರತಿಕ್ರಿಯೆ ನೀಡಿ ಉದ್ಯೋಗದ ದಿನಗಳನ್ನು ಹೆಚ್ಚಿಸುವ ಯೋಜನೆ ಎಂದಿದ್ದಾರೆ. ಇದು 'ಆಮ್ ಆದ್ಮಿ' ಸರ್ಕಾರದ ಬವಣೆಗೆ ಸ್ಪಂದಿಸುವ ರೀತಿ.

ಸತ್ಯ

ವಿಧಾನಸೌಧದೊಳು ನೈತಿಕತೆ ಉಂಟೆ?
ಬಡಿದಾಟ ಕಚ್ಚಾಟ ನಿತ್ಯವೂ ತಂಟೆ
ಗುಡಿ ಮಠದಿ ಉಂಟೇನು ಹುಡುಕಾಡಿ ನೋ
ಅಲ್ಲಿಯೂ ಇಲ್ಲ ವೈ ಮರುಳಾಗಬೇಡಿ

\- ವಿಡಂಬ

ಹೊರಳು ದಾರಿಯಲ್ಲಿ ಕರಾವಳಿ ಮೀನುಗಾರಿಕೆ....

ಪುಟ 6 ರಿಂದ

ವ್ಯವಸ್ಥೆಯೂ ಇದೆ. ಸಾಗಾಟವಾಹನಗಳಿಗೆ ಸೈಕಲು ಹಾಗೂ ದ್ವಿಚಕ್ರವಾಹನಗಳ ಚಾಲನಾ ಸರಪಳಿ ಸೇರಿಕೊಂಡು ಹಸಿಮೀನು ಕರಾವಳಿ ಜಿಲ್ಲೆಗಳ ಮೂಲೆಮೂಲೆಗಳಿಗೆ. ಮಾತ್ರವಲ್ಲ, ದೂರದ ಜಿಲ್ಲೆಗಳಿಗೂ ಅದೇ ದಿನ ತಲುಪುವ ವ್ಯವಸ್ಥೆ ಇದೆ. ಮೀನುಗಾರಿಕೆ ಇವತ್ತು ಒಂದು ಉದ್ಯಮವಾಗಿ ತನ್ನದೇ ಆದ ಆರ್ಥಿಕ ವಲಯವನ್ನು ಸೃಷ್ಟಿಸಿಕೊಂಡಿದೆ. ಹಿಂದಿನಂತೆ 'ಮೂಡಾಯಿ' ಸೀಮೆಗೆ ತಲೆಹೊರೆಯಲ್ಲಿ ಒಣಮೀನನ್ನು ಒಯ್ಯಬೇಕಿಲ್ಲ; ಬಸ್ಸು,ಕಾರು,ಟೆಂಪೋಗಳ ಮೂಲಕ ಬೆಸ್ತಮಹಿಳೆಯರು, ಬ್ಯಾರಿ ಪುರುಷರು ಹಳ್ಳಿಹಳ್ಳಿಗಳಿಗೆ ಹಸಿಮೀನು ತಲುಪಿಸುತ್ತಿದ್ದಾರೆ. ಬೆಸ್ತಮಹಿಳೆಯರು ಸ್ವಸಹಾಯ ಸಂಘಗಳ ಮೂಲಕ ಮೀನುಸಾಗಾಣ ವಾಹನಗಳನ್ನೂ ಮೀನುಮಾರಾಟವನ್ನು ಚಾಲಾಕಿಯಿಂದ ನಿರ್ವಹಿಸುತ್ತಿದ್ದಾರೆ. ಹಾಗೇ ನೋಡಿದರೆ ಮೀನುಮಾರಾಟಮಾಡುವ ಮಹಿಳೆಯರು ಆರ್ಥಿಕವಾಗಿ ಅಷ್ಟು ದುರ್ಬಲರಾಗಿಲ್ಲ. ಅವರ ದುಡಿತದೊಂದಿಗೆ ಪುರುಷರ ಸಂಪಾದನೆಯೂ ಸೇರಿಕೊಂಡಲ್ಲಿ ಸಾಮಾನ್ಯ ಮಟ್ಟಿಗೆ ಕುಟುಂಬ ನಿರ್ವಹಿಸಬಹುದಾಗಿದೆ. ಮೀನು ಮಾರುವ ಬ್ಯಾರಿಗಳ ಕುಟುಂಬಗಳಲ್ಲಿ ಅವರು ಮಾತ್ರವೇ ದುಡಿಮೆಗಾರರಾಗಿದ್ದು. ಹೇಳಿಕೊಳ್ಳುವಂತಹ ಆರ್ಥಿಕ ಪರಿಸ್ಥಿತಿ ಇರುವುದಿಲ್ಲ. ಕರಾವಳಿಯ ಜಾತಿಬೆಸ್ತರು ಇವತ್ತು ಶಿಕ್ಷಣ ಹಾಗೂ ಆಧುನಿಕ ಉದ್ಯೋಗದಲ್ಲೂ ಮುಂದುವರಿ ಯುತ್ತಿದ್ದಾರೆ. ವಿದ್ಯಾವಂತ ದೊಡ್ಡ ವಿಭಾಗ ಮುಂಬಯಿಯಲ್ಲೋ, ಬೆಂಗಳೂರಲ್ಲೋ ಇತರ ನಗರಗಳಲ್ಲೋ ಕೊಲ್ಲಿ ದೇಶಗಳಲ್ಲೋ ವಿವಿಧ ಉದ್ಯೋಗಗಳಲ್ಲಿ ದುಡಿಯುತ್ತಿದ್ದಾರೆ. ನಗರ ಸೇರದೆ ಊರಲ್ಲೇ ಉಳಿದಿರುವ ಜನರಲ್ಲಿ ಕೆಲವರು ಬೋಟುಗಳ ಪಾಲುದಾರರಾಗಿದ್ದಾರೆ; ಕೆಲ ಮಹಿಳೆಯರು ಮೀನು ಮಾರಾಟ ವೃತ್ತಿನಿರತರಾಗಿದ್ದಾರೆ; ಕೆಲ ಬೆಸ್ತ ಪುರುಷರೂ ಬೋಟಿನಲ್ಲಿ, ನಾಡದೋಣಿಯಲ್ಲಿ ದುಡಿಯುತ್ತಿದ್ದಾರೆ.

ಕರಾವಳಿಯ ಮೀನುಗಾರಿಕೆಯ ಚರಿತ್ರೆಯನ್ನು ಈ ರೀತಿ ನಿರೂಪಿಸಿದರೆ ಏನೆಂದು ಹೇಳಿದ ಹಾಗಾಯಿತು? ಸಾಂಪ್ರದಾಯಿಕ ನಾಡದೋಣಿ ಮೀನುಗಾರಿಕೆಯೊಂದೇ ನಡೆಯುತ್ತಿದ್ದ ಹಿಂದಿನ ದಿನಗಳಲ್ಲಿ ಬೆಸ್ತರು ಬಡವರಾಗಿದ್ದರು; ಆದರೆ ಹೆಚ್ಚಿಗೆ ಸ್ವಾವಲಂಬಿಗಳಾಗಿದ್ದರು. ಯಾಂತ್ರೀಕೃತ ಮೀನುಗಾರಿಕೆಯೇ ಪ್ರಧಾನವಾದ ಆಧುನಿಕ ಸಂದರ್ಭದಲ್ಲಿ ದುಡಿಮೆಗಾರ ಬೆಸ್ತರು ಹೆಚ್ಚಿನಂಶ ದುಡಿಮೆಗಾರರಾಗಿಯೇ ಇದ್ದಾರೆ; ಹಿಂದಿನ ಸ್ವಾವಲಂಬನೆಯನ್ನು ಒಂದು ಬಗೆಯ ಯಜಮಾನತನವನ್ನು- ಕಳೆದುಕೊಂಡಿದ್ದಾರೆ. ಒಟ್ಟಾರೆ ಬೆಸ್ತರ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆ; ಸಾಮಾಜಿಕ ಸ್ಥಾನಮಾನ ಹೆಚ್ಚಾಗಿದೆ. ಅದರಲ್ಲೂ ದುಡಿಯುವ ಬೆಸ್ತಮಹಿಳೆಯರು ತಮ್ಮ ಸ್ವಾವಲಂಬನೆ ಹಾಗೂ ಘನಸ್ಥಿಕೆಯನ್ನು ಉಳಿಸಿಕೊಂಡಿದ್ದಾರೆ.

. ಈ ಸಮೀಕ್ಷೆಯಲ್ಲಿ ಕರಾವಳಿಯಲ್ಲಿ ನಡೆಯುವ ಮೀನುಗಾರಿಕೆಯ ಎಲ್ಲ ಮಜಲುಗಳನ್ನು ಗುರುತಿಸಲಾಗಿಲ್ಲ. ಬೇಸಗೆಯಲ್ಲದ ಅನುಕೂಲ ದಿನಗಳಲ್ಲಿ ನಾಡದೋಣಿ ಮೀನುಗಾರಿಕೆ ಮಾಡುವ ಬೆಸ್ತರ ಸಮಸ್ಯೆಗಳು ಹಲವಿವೆ. ಕಳೆದ ಐವತ್ತು ವರ್ಷಗಳಲ್ಲಿ ಮಳೆಗಾಲದ ಅಸ್ತವ್ಯಸ್ಥೆಯಿಂದ ಉಂಟಾಗಿರುವ ಕಡಲಕೊರೆತಗಳು ಹಾಗೂ ಅವನ್ನು ತಡೆಯುವಲ್ಲಿ ವಿಫಲವಾದ ಸರಕಾರೀ ತಡೆಗೋಡೆಗಳು ಮೀನುಗಾರಿಕೆಯ ವೃತ್ತಿಯ ಪರಿಣಾಮ ಬೀರಿವೆ.

ಯಂತ್ರದೋಣಿಗಳು ಕಡಲತ ಅಡ್ಡಾಡತೊಡಗಿ ಹೇಗೆ ನಾಡದೋಣಿ ಮೀನ ಮೀನು ಕೊರತೆಗೆ ಗುರಿಯಾಯಿತೋ, ಅಂತ ಕಳೆದೆರಡು ದಶಕದಲ್ಲಿ ತೀರದ ಹೊರವಲ ಮೀನುಹಿಡಿಯುತ್ತಿರುವ ವಿದೇಶಿ ಮೀನು ಹಡಗುಗಳು, ದೇಶಿಯ ಮೀನುಗಾರಿ ಅಪಾಯಕಾರಿಯಾಗಿವೆ. ವಿದೇಶಿ ಮೀನುಗ ನಿರ್ಬಂಧಗಳನ್ನು ವಿಧಿಸದಿರುವುದು, ಮೀನುಗ ಪೂರಕವಲ್ಲದ ನಿರ್ಬಂಧಗಳನ್ನು ಸಿಆರ ನಿಯಮಗಳು, ಮೀನುಗಾರಿಕಾ ಋತ ಸಂಬಂಧಿಸಿದಂತೆ ರಾಜ್ಯ ರಾಜ್ಯಗಳ ಹೊಂದಾಣಿಕೆ ಇಲ್ಲದಿರುವುದು, ಕಡಲಕೊರೆತ ಸಂಬಂಧಿಸಿದಂತೆ ತಾಂತ್ರಿಕ ಪ ಸಾಧಿಸದಿರುವುದು, ರಾಷ್ಟ್ರದಲ್ಲಿ ಸ ಮೀನುಗಾರಿಕೆಯ ಅಭಿವೃದ್ಧಿ ಹಾಗೂ ಮೀನು ಅಭ್ಯುದಯಕ್ಕೆ ತಡೆಯಾಗಿರುವ ಪ್ರ ಸಂಗತಿಗಳಾಗಿವೆ.

...ಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಅಂತ್ಯಗೊಂಡಿದೆಯೇ ?

...11 ರಿಂದ

...ದ್ದಾರೆ. ಅಮೇರಿಕಾ ಸರ್ಕಾರವು ತನ್ನ ...ಯ ಕೊರತೆಯನ್ನು ಕಡಿಮೆ ಮಾಡಲು ಒತ್ತಾಯ ...ಲಿಕ್ಕೆ, ಬಿಕ್ಕಟ್ಟಿನ ಅಂತ್ಯ ಬಂದೇ ಬಿಟ್ಟಿತೆಂಬ ... ಅದಕ್ಕೆ ಸಾಕ್ಷಿಯಾಗಿ ಕಳೆದ ಕೆಲವು ತಿಂಗಳ ... ನಿರುದ್ಯೋಗದ ಅಂಕೆಯಲ್ಲಿ ಹೆಚ್ಚಳ ...ಬರುತ್ತಿಲ್ಲವೆಂಬ ಸಂದೇಹ ಮಾತ್ರವೇ ಸಾಕು. ...ವಿತ್ತೀಯ ಕೊರತೆಯನ್ನು ಕಡಿಮೆಗೊಳಿಸಿದಲ್ಲಿ, ...ಂದ ಅಮೇರಿಕಾದ ಆರ್ಥಿಕತೆಯು ಮತ್ತೊಮ್ಮೆ ...ಗೆ ಸಿಲುಕಲಿದೆ.

...ದೇ ಆಗಿದ್ದು

...1937ರಲ್ಲಿ ನಡೆದದ್ದು ಇದೇ. ಮಹಾನ್ ...ಂದ ಆರಂಭವಾಗಿದ್ದ ಕುಸಿತವು ತನ್ನ ಆರಂಭಿಕ ...ಯಲ್ಲಿ ಕಡಿಮೆಯಾಗುತ್ತಿದೆಯೆಂದು ...ಬಂದಾಕ್ಷಣವೇ ಅಮೇರಿಕಾದ ವಿತ್ತೀಯ ...ನ್ನು ತಗ್ಗಿಸಬೇಕೆಂದು ಅಧ್ಯಕ್ಷ ರೂಸ್‌ವೆಲ್ಟ್ ...ತೀವ ಒತ್ತಡ ಬಂತು. ಇದರ ...ಮವಾಗಿ ಅಮೇರಿಕಾದ ಆರ್ಥಿಕತೆಯು ...ಮ್ಮೆ ಬಿಕ್ಕಟ್ಟಿಗೆ ಸಿಲುಕಿತು. ಅದು ಮತ್ತೆ ...ತನ ಕಂಡದ್ದು ಮಿಲಿಟರಿ ವೆಚ್ಚದಲ್ಲಿ ತೊಡಗಿ ...ಯ ಮಹಾಯುದ್ಧ ಆರಂಭಗೊಳ್ಳುವ ...ಕವೇ. ಬಿಕ್ಕಟ್ಟು ಪೂರ್ತಿ ಅಂತ್ಯಗೊಳ್ಳದಿದ್ದರೂ ...ಕಾದ ವಿತ್ತೀಯ ಕೊರತೆಯನ್ನು ಈಗಲೇ ...ಕೆಂಬ ಒತ್ತಡ ಎಷ್ಟೊಂದು ಬಲವಾಗಿದೆ ...ದೆ, ಪ್ರಸಕ್ತ ವಿತ್ತೀಯ ವೆಚ್ಚವನ್ನು ಕಾಯು ...ವುದು ಅಧ್ಯಕ್ಷ ಒಬಾಮರಿಗೆ ಬಲುಕಠಿಣ ...ದು. ಬಿಕ್ಕಟ್ಟು ಪೂರ್ತಿಯಾಗಿ ಅಂತ್ಯವಾಗಿದೆ ...ವಾಸನೆ ಸಿಕ್ಕಿದರಂತೂ ಆ ಒತ್ತಡವನ್ನು ಯಾವ ...ಾ ತಡೆಯಲು ಸಾಧ್ಯವಾಗದೆ ಆರ್ಥಿಕವನ್ನು ...ಕ್ಕಟ್ಟಿಗೆ ತಳ್ಳುವುದು.

...ೊಸ ಸನ್ನಿವೇಶ

...ಲ್ಲ ಹೇಳುವುದೇನೆಂದರೆ ಅಮೇರಿಕಾದ ಬಿಕ್ಕಟ್ಟು ... ಅಂತ್ಯಕಾಣದು. ಹಾಗಿದ್ದಲ್ಲಿ, ವಿಶ್ವದ ...ೂ ಕೂಡ ಬಿಕ್ಕಟ್ಟಿನ ಅಂತ್ಯ ಕಾಣದು. ... ಇನ್ನೂ ಅಂತ್ಯ ಕಾಣದೇ ಇರುವುದಕ್ಕೆ ...ದ ಕಾರಣವಿದೆ ಮತ್ತು ಸಾಮಾನ್ಯವಾಗಿ ... ಹೇಳುವಂತೆ ಈ ಬಿಕ್ಕಟ್ಟು ಬರೇ ಹಿಂಜರಿತದ ...ಮಾತ್ರವೇ ಅಲ್ಲ. ಪ್ರಸಕ್ತ ಬಂಡವಾಳಶಾಹಿ ...ಹೇಗಿದೆಯೆಂದರೆ, ಅದು ಒಂದು ನಿರ್ದಿಷ್ಟ ...ಲ್ಲಿ ಕಾಣದಾಗ, ಅದು ಮತ್ತೊಂದು ...ನ್ನು ಧರಿಸಿ ಬರುತ್ತದೆ. ಅದು ಧರಿಸುವ ...ಲ್ಲಿ ಹಿಂಜರಿತವು ಒಂದು ರೂಪ ಮಾತ್ರ. ...ತ ಮರೆಯಾದಾಗ, ಬಿಕ್ಕಟ್ಟು ಮತ್ತೊಂದು ...ಲ್ಲಿ ಕಂಡುಬರುತ್ತದೆ. ಉದಾಹರಣೆಗೆ, ...ವು ಅಪ್ಪಳಿಸುವ ಮುನ್ನ ಕಂಡುಬಂದಂತಹ ...ನ್ ಮತ್ತು ಆಹಾರ ಬೆಲೆಗಳು ಹೆಚ್ಚಳಗೊಂಡು ...ಂದ ತೀವ್ರ ಹಣದುಬ್ಬರದ ರೂಪ. ...ಂದ ಬಿಕ್ಕಟ್ಟನ್ನು ಯಾವುದೋ ಒಂದು ...ರೂಪದಲ್ಲಿ ಮಾತ್ರವೇ ಗುರುತಿಸಬಾರದು; ...ದು ಸಮಗ್ರ ಹೊಸ ಸನ್ನಿವೇಶವನ್ನು ...ಸುತ್ತದೆ. ಈ ಸನ್ನಿವೇಶವನ್ನು ಅದರ ...ಯಲ್ಲಿ ನಾವು ನೋಡಿದಾಗ, ನಮಗೆ ...ನಗೂ ಗೊತ್ತಿರುವ ಬಂಡವಾಳಶಾಹಿ ಚೌಕಟ್ಟಿನೊಳಗೆ ಇದನ್ನು ಪರಿಹರಿಸಲು ಸಾಧ್ಯವಿಲ್ಲ ಎಂಬುದು ವೇದ್ಯವಾಗುತ್ತದೆ. ಇದರರ್ಥ ಬಂಡವಾಳಶಾಹಿಯು ಛಿದ್ರಗೊಳ್ಳುತ್ತದೆ ಎಂದಲ್ಲ, ಅದು ಹಾಗೇನೂ ಆಗುವುದಿಲ್ಲ; ಅಥವಾ ಬಿಕ್ಕಟ್ಟು ಒಂದು ನಿರ್ದಿಷ್ಟ ರೂಪದಲ್ಲಿ ಮಾತ್ರವೇ ಇರುತ್ತದೆ ಎಂದಲ್ಲ, ಉದಾಹರಣೆಗೆ ಹಿಂಜರಿತವನ್ನು ಪರಿಹರಿಸಲು ಸಾಧ್ಯವೇ ಇಲ್ಲ ಎಂಬುದು. ಇಲ್ಲಿ ಹೇಳಹೊರಟಿರುವ ಅಂಶವೆಂದರೆ, ಬಂಡವಾಳಶಾಹಿಯು ಎಂದಿನಂತೆ ಒಂದು ಶಾಶ್ವತ ಬಿಕ್ಕಟ್ಟಿನ ಕಾಲಾವಧಿಯನ್ನು ಪ್ರವೇಶಿಸಿದೆ. ಅಂತಹ ಸ್ಥಿತಿಯಿಂದ ಒಂದು ಗಣನೀಯ ಪುನರ್-ರಚನೆಯ ಮೂಲಕವಷ್ಟೆ ಅದು ಹೊರಬರಬಲ್ಲುದು. ಅದೂ ಕೂಡ ಕೆಲವು ಕಾಲಾವಧಿಯ ನಂತರದಲ್ಲಿ, ಶೋಧನೆಯ ಮೂಲಕ, ಅಂದರೆ ಅಂತಹ ಪುನರ್-ರಚನೆಯನ್ನು ಮಾಡಬಲ್ಲ ವರ್ಗಶಕ್ತಿಗಳ ಸೂಕ್ತ ರಾಜಕೀಯ ಹೊಂದಾಣಿಕೆಯ ಶೋಧನೆಯ ಮೂಲಕವಷ್ಟೆ ಹೊರಬರಬಲ್ಲುದು. ಸಂಕ್ಷಿಪ್ತವಾಗಿ ಹೇಳಬಹುದಾದರೆ, ಸಾಮಾನ್ಯ ಸನ್ನಿವೇಶಕ್ಕೆ ಬದಲಾಗಿ, ಯುದ್ಧ ಸಮಯದಲ್ಲಿಯಂತೆ ಒಂದು ಪ್ರಮುಖ ಗುಣಾತ್ಮಕ ಸ್ಥಿತ್ಯಂತರವನ್ನು ಹೊಂದಿರುವ ಬಂಡವಾಳಶಾಹಿ ಘಟ್ಟವೊಂದಕ್ಕೆ ನಾವು ಪ್ರವೇಶಿಸುವ ಕಾರ್ಯಸೂಚಿ ಬಂದಿದೆ. ರಾಜಕೀಯ ಹೋರಾಟದ ಫಲಿತಾಂಶವು ಈ ಸ್ಥಿತ್ಯಂತರವು ನಮ್ಮನ್ನೆಲ್ಲಿಗೆ ಎಳೆದೊಯ್ಯುತ್ತದೆಂಬುದನ್ನು ನಿರ್ಧರಿಸುತ್ತದೆ; ಆದರೆ, ಅಂತಹ ಸ್ಥಿತ್ಯಂತರವನ್ನು ಕಾರ್ಯಸೂಚಿಯಾಗಿ ತಂದಿರುವ ಸನ್ನಿವೇಶವೇ ಈ ಬಿಕ್ಕಟ್ಟು.

ಆರ್ಥಿಕ ಚಟುವಟಿಕೆ ಗೆರೆ ದಾಟಿದರೆ....

ಈ ಸನ್ನಿವೇಶದ ಗುಣಗಳು ಯಾವುವು ಮತ್ತು ಅದೇಕೆ ಎದುರಾಗಿದೆ? ಒಂದು ಆಧುನಿಕ ಬಂಡವಾಳಶಾಹಿ ಆರ್ಥಿಕತೆಯಲ್ಲಿ, ಒಂದು ನಿರ್ದಿಷ್ಟ ಗೆರೆಯಾಚೆ ಆರ್ಥಿಕ ಚಟುವಟಿಕೆಯ ಮಟ್ಟವನ್ನು ಎಳೆದೊಯ್ದರೆ, ಅದು ಹಣದುಬ್ಬರದ ಹೆಚ್ಚಳಕ್ಕೆ ಕಾರಣವಾಗುತ್ತದೆ. ವಿವಿಧ ತೆರನಾದ ಕಾರಣಗಳಿಂದ ಇದು ಸಂಭವಿಸುತ್ತದೆ: ನಿರುದ್ಯೋಗಿ ಸೇನಾಪಡೆಯು ಒಂದು ಕನಿಷ್ಟ ಮಟ್ಟಕ್ಕಿಂತ ಕೆಳಗಿಳಿದಲ್ಲಿ, ಕಾರ್ಮಿಕರ ಚೌಕಾಸಿ ಮಾಡುವ ಶಕ್ತಿ ಉತ್ತಮಗೊಳ್ಳುತ್ತದೆ, ಕೂಲಿ ಮೊತ್ತ ಹೆಚ್ಚುತ್ತದೆ, ಮತ್ತು ತತ್ಫಲವಾಗಿ ಬಂಡವಾಳಶಾಹಿಗಳು ತಮ್ಮ ಉತ್ಪನ್ನಗಳ ಬೆಲೆಯನ್ನು ಹೆಚ್ಚಿಸುವುದರಿಂದ ಹಣದುಬ್ಬರವೂ ಹೆಚ್ಚುತ್ತದೆ. ಅಂತೆಯೇ, ಚಟುವಟಿಕೆಯ ಮಟ್ಟವು ಒಂದು ಗೆರೆಯಾಚೆ ಹೆಚ್ಚಳಗೊಂಡಾಗ, ಕಚ್ಚಾ ವಸ್ತುಗಳ ಬೆಲೆ ಏರುತ್ತವೆ, ಅವುಗಳು ಮತ್ತೆ ಉತ್ಪನ್ನಗಳ ಹೆಚ್ಚಿನ ಬೆಲೆಯೇರಿಕೆಗೆ ಕಾರಣವಾಗುತ್ತವೆ. ಇದು ಮತ್ತೆ ಹೆಚ್ಚಿನ ಕೂಲಿ ಬೇಡಿಕೆಗೆ ಕಾರಣವಾಗುತ್ತದೆ ಹಾಗೂ ಮತ್ತೆ ಹಣದುಬ್ಬರ ಹೆಚ್ಚಳ ಕಂಡುಬರುತ್ತದೆ. ಹಣದುಬ್ಬರದ ಹೆಚ್ಚಳಕ್ಕೆ ಕಾರಣವಾಗುವ ಈ ಗೆರೆಯಾಚೆಗೆ, ಜೋನ್ ರಾಬಿನ್ಸನ್‌ರವರ ಪದಗಳಲ್ಲಿ ಹೇಳುವುದಾದರೆ, 'ಹಣದುಬ್ಬರ ತಡೆಗೋಡೆ' ಎಂದು ಕರೆಯಲಾಗುವ ಈ ಲಕ್ಷ್ಮಣರೇಖೆಯು ಒಂದು ಆಧುನಿಕ ಬಂಡವಾಳಶಾಹಿ ಆರ್ಥಿಕದಲ್ಲಿ ಕಾರ್ಯಸಾಧುವಾದ ಆರ್ಥಿಕ ಚಟುವಟಿಕೆಯ ಮಟ್ಟಕ್ಕೆ ಒಂದು ಸೀಮಾ ರೇಖೆ ಹಾಕುತ್ತದೆ. ಬಂಡವಾಳಶಾಹಿಯು ಕಾರ್ಯಸಾಧುವಾಗಿ ಉಳಿಯಬೇಕಾದರೆ, ಆರ್ಥಿಕ ಚಟುವಟಿಕೆಯ ವಾಸ್ತವ ಮಟ್ಟವು ಇದಕ್ಕಿಂತ ಕಡಿಮೆಯಿರಬೇಕೇ ಹೊರತು, ಇದನ್ನು ಮೀರಿ ಹೋಗಬಾರದು. ಪ್ರಸಕ್ತ ಬಿಕ್ಕಟ್ಟನ್ನು ಹೊಂದಿರುವ ಸನ್ನಿವೇಶವು 'ಹಣದುಬ್ಬರ ತಡೆಗೋಡೆ'ಯು ಕಡಿಮೆಗೊಳ್ಳುವ ಸ್ವರೂಪವನ್ನು ಒಳಗೊಂಡಿದೆ. ಅಂದರೆ, ಹಣದುಬ್ಬರ ಹೆಚ್ಚಳಗೊಳ್ಳುವಂತ'ಹ ಆರ್ಥಿಕ ಚಟುವಟಿಕೆಯ ಮಟ್ಟವು ಕೆಳಗಿಳಿದಿದೆ. ಈಗ ಬಂಡವಾಳಶಾಹಿ ವಿಶ್ವದಲ್ಲಿ ನಡೆಯುತ್ತಿರುವಂತೆ ಆರ್ಥಿಕತೆಯು ಈ ಮಟ್ಟದಿಂದ ಕೆಳಗೆ ನಡೆಯಬಲ್ಲದಾದರೂ, ಅದು ಹಿಂಜರಿತವನ್ನು ಒಳಗೊಂಡಿರುತ್ತದೆ. ಆದರದು 'ಹಣದುಬ್ಬರದ ತಡೆಗೋಡೆ'ಯು ಕಡಿಮೆಯಾಗುವ ಕಾರಣದಿಂದಾಗಿ ಹಿಂಜರಿತದಿಂದ ಆಚೆ ಬಂದಾಕ್ಷಣ, ಹಣದುಬ್ಬರದ ಹೆಚ್ಚಳಕ್ಕೆ ಸಿಲುಕುತ್ತದೆ. ಹಾಗಾಗಿ, ಬಿಕ್ಕಟ್ಟಿನಿಂದ ಕೂಡಿರುವುದು ಹಿಂಜರಿತ ಮಾತ್ರವೋ ಅಥವಾ ಹಣದುಬ್ಬರ ಮಾತ್ರವೋ ಅಲ್ಲ; ಅದೆಂದರೆ, ಬಿಕ್ಕಟ್ಟಿನ ಒಂದು ರೂಪದಿಂದ ಹೊರಬಂದು ಬಿಕ್ಕಟ್ಟಿನ ಮತ್ತೊಂದು ರೂಪಕ್ಕೆ ಪ್ರವೇಶಿಸುವ ಸನ್ನಿವೇಶದ ಸಮಗ್ರತೆ ಕಾರಣ.

ಇಂತಹ ಸನ್ನಿವೇಶ ಮೂಡಿಬಂದಿರುವುದೇಕೆಂದರೆ, ಒಂದೆಡೆ ಯಾವ ಸರಕು ಮಾರುಕಟ್ಟೆಗಳಲ್ಲಿ ವ್ಯತ್ಯಯವಿದೆ ಅಥವಾ ಕೃತಕ ಬೇಡಿಕೆಯನ್ನು ಸೃಷ್ಟಿಸಲು ಸಾಧ್ಯವಿದೆಯೆಂದು, ಲಾಭ ಅರಸುತ್ತಿರುವ ಬೃಹತ್ ಪ್ರಮಾಣದಲ್ಲಿ ಕೇಂದ್ರೀಕರಣ ಗೊಂಡಿರುವ ಹಣಕಾಸು ಬಂಡವಾಳವಿದೆ. ಮತ್ತೊಂದೆಡೆ, ಬಂಡವಾಳಶಾಹಿಯು ಹಲವು ಸರಕುಗಳ ಉತ್ಪಾದನೆಯನ್ನು ಬಹುಸುಲಭವಾಗಿ ಹೆಚ್ಚಿಸುವ ವಿಧಾನಗಳು ಮುಗಿದು ಹೋಗಿವೆ. ಹಣಕಾಸು ಬಂಡವಾಳದ ಯಜಮಾನಿಕೆಯ ಆಳ್ವಿಕೆಯಡಿ ಯಲ್ಲಿ ನರಳುತ್ತಿರುವ ಪುಟ್ಟ ಉತ್ಪಾದಕರ ಸಮುದಾಯವೇ ಇರುವ ಎಲ್ಲ ಕೃಷಿ ಸರಕುಗಳ ಉತ್ಪಾದನೆಯಲ್ಲಿ, ಪೂರೈಕೆಯನ್ನು ಹೆಚ್ಚಿಸುವುದು ದುಸ್ತರವಾಗಿದೆ; ನಿಜ ಹೇಳಬೇಕೆಂದರೆ, ಬೇಸಾಯ ನೆಚ್ಚಿ ತಮ್ಮ ಬದುಕನ್ನೇ ನಿರ್ವಹಿಸಲಾಗದೆ ಆತ್ಮಹತ್ಯೆ ಹಾದಿಹಿಡಿಯುವ ಒಂದು ದೊಡ್ಡ ಸಂಖ್ಯೆಯ ರೈತಾಪಿ ಜನ ಭಾರತದಲ್ಲಿದ್ದಾರೆ. ಸ್ವಾತ್ರಂತ್ರ್ಯಾ ನಂತರದಲ್ಲಿ ದೊರೆಯುತ್ತಿದ್ದ ಸರ್ಕಾರದ ನೆರವನ್ನು ನವ-ಉದಾರವಾದಿ ಆಳ್ವಿಕೆಯಡಿಯಲ್ಲಿ ಹಿಂತೆಗೆದುಕೊಂಡಿದ್ದು, ದೊಡ್ಡ ಸಂಖ್ಯೆಯ ರೈತಾಪಿ ಜನತೆ ಬದುಕಲು ಸಾಧ್ಯವೇ ಇಲ್ಲದಂತಾಗಿದ್ದು, ಇವುಗಳಿಂದಾಗಿ ಅವರು ಬಂಡವಾಳಶಾಹಿ ವಿಶ್ವ ಆರ್ಥಿಕತೆಯ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಿಲ್ಲದ ಸ್ಥಿತಿಯಲ್ಲಿದ್ದಾರೆ. ತೈಲದಂತಹ ಇತರೆ ಸರಕುಗಳ ವಿಷಯದಲ್ಲಿ ಹೇಳುವುದಾದರೆ, ವಸಾಹತುಶಾಹಿಯ ಆಳ್ವಿಕೆಯು ಮುಕ್ತಾಯಗೊಂಡಿರುವುದರಿಂದ ಇಂತಹ ಅತ್ಯವಶ್ಯ ಸಂಪನ್ಮೂಲದ ಮೇಲಿನ ಬಂಡವಾಳಶಾಹಿ ನಿಯಂತ್ರಣವು ಇನ್ನಿಲ್ಲವಾಗಿದೆ. ಒಪೆಕ್ (ಪೆಟ್ರೋಲಿಯಂ ರಫ್ತು ಮಾಡುವ ರಾಷ್ಟ್ರಗಳ ಸಂಘಟನೆ) ಯು ಗಣನೀಯ ಪ್ರಮಾಣದ ಪೆಟ್ರೋಲಿಯಂ ತೈಲಗಳ ಉತ್ಪಾದನೆಯನ್ನು ನಿಯಂತ್ರಿಸುತ್ತಿದ್ದರೂ, ಸಾಮ್ರಾಜ್ಯಶಾಹಿಯ ಒತ್ತಡದಿಂದೇನೂ ಪೂರ್ಣ ಮುಕ್ತವಾಗಿಲ್ಲ. ಈ ಸಂಪನ್ಮೂಲವನ್ನು ಸ್ವಾದೀನಪಡಿಸಿ ಕೊಂಡು ನಿಯಂತ್ರಿಸಲು ಸಾಮ್ರಾಜ್ಯ ಶಾಹಿಯ ಬೃಹತ್ ಪ್ರಮಾಣದ ಪುನರ್- ವಸಾಹತೀಕರಣ ಯೋಜನೆಯು ನಿರಂತರವಾಗಿ ನಡೆಯುತ್ತಿದ್ದರೂ ಫಲಕಾರಿ ಯಾಗಿಲ್ಲ. ಹೀಗಾಗಿ ಇಂತಹ ಸನ್ನಿವೇಶವನ್ನು ಬಿಕ್ಕಟ್ಟು ಒಳಗೊಂಡಿರುವುದರಿಂದ ಬಿಕ್ಕಟ್ಟನ್ನು ಅದರ ಒಂದು ಹಿಂಜರಿತದ ರೂಪದಿಂದ ಮಾತ್ರವೇ ಗುರುತಿಸಬಾರದು. ●

ಬಿಜೆಪಿಯೊಳಗೆ..........

ಪುಟ 7 ರಿಂದ

ಮರಳುವುದು ಅದಕ್ಕೆ ಹೆಚ್ಚು ಸುಲಭದ ಕೆಲಸ. ಆದರೆ ಅದಕ್ಕೆ ಮುಂದೆ ಅದು ದೊಡ್ಡ ಬೆಲೆಯನ್ನು ತೆರಬೇಕಾಗುತ್ತದೆ. ಅಂದರೆ ಒಂದು ಕೋಮುವಾದಿ, ಸಂಕುಚಿತ ಕಣ್ಣೋಟದ ಪಕ್ಷವಾಗಿಯೇ ಉಳಿಯಬೇಕಾಗುತ್ತದೆ. ಬಿಜೆಪಿಯ ಮೂಲ ಪ್ರಕೃತಿಯನ್ನು ನೋಡಿದರೆ ಅದು ಈ ಎರಡನೇ ದಾರಿಯನ್ನೇ ಅಂಗೀಕರಿಸಬೇಕಾಗುತ್ತದೆ.


ತನ್ನ ಚುನಾವಣಾ ಮಹತ್ವಾಕಾಂಕ್ಷೆಗಳ ಅವಶೇಷಗಳ ನಡುವೆ ಬಿಜೆಪಿಯ 'ಚಿಂತನ ಬೈಠಕ್'ನಲ್ಲಿ ಆ ಪಕ್ಷ ಏನೇ ಚುನಾವಣಾ ವಿಶ್ಲೇಷಣೆ ಮಾಡಿದ್ದರೂ ಒಂದು ಸಂಗತಿ, ಕರ್ನಾಟಕದಲ್ಲಿ ಮಾತ್ರವೇ(ಹಿಮಾಚಲ ಪ್ರದೇಶವನ್ನು ಬಿಟ್ಟು) ಅದರ ಶೇಕಡಾವಾರು ಮತಗಳಿಕೆಯಲ್ಲಿ ಹೆಚ್ಚಳ ಕಂಡಿರುವುದು ಎಂಬ ಸಂಗತಿ ಅದರ ಗಮನಕ್ಕೆ ಬಾರದೇ ಇರಲಿಕ್ಕಿಲ್ಲ. ಈ ಮೊದಲು ವಿಧಾನ ಸಭಾ ಚುನಾವಣೆಗಳ ನಂತರ ಅದು ತನ್ನದೇ ಸರಕಾರವನ್ನು ರಚಿಸುವಲ್ಲಿ ಯಶಸ್ವಿಯಾಯಿತು. ಇದನ್ನು ಅದು ಸಾಧಿಸಿದ್ದು ಆರೆಸ್ಸೆಸ್ ಮತ್ತು ಅದರ ಅಂಗ-ಸಂಘಟನೆಗಳ ಎರಡು ದಶಕಗಳ ಸತತ ಕೆಲಸದಿಂದ; ಕೋಮುವಾದೀ ಘರ್ಷಣೆಗಳನ್ನು, ಗಲಭೆಗಳನ್ನು ಪ್ರಚೋದಿಸುತ್ತಾ ಮತ್ತು ಕೋಮು ಧೃವೀಕರಣವನ್ನು ಸೃಷ್ಟಿಸುತ್ತಾ ಸಾಧಿಸಿತು. ಈ ಬುಡಮಟ್ಟದ ಕೆಲಸವಿಲ್ಲದೆ ಬಿಜೆಪಿ ಇಂತಹ ಒಂದು ದೊಡ್ಡ ಶಕ್ತಿಯಾಗಿ ಮೂಡಿ ಬರುವಲ್ಲಿ, ದಕ್ಷಿಣ ಬಾರತದಲ್ಲಿ ಅದರ ಮೊದಲ ಯಶಸ್ಸನ್ನು ದಾಖಲಿಸುವಲ್ಲಿ ಯಶಸ್ವಿಯಾಗುತ್ತಿರಲಿಲ್ಲ. ಹಿಂದುತ್ವ ಸಿದ್ಧಾಂತಿಗಳು ಮತ್ತು ಅವರ ಸಹಯಾತ್ರಿಕರು ಎಷ್ಟೇ ಬೌದ್ಧಿಕ ಕುತರ್ಕಗಳನ್ನು ಮುಂದಿಟ್ಟರೂ ಈ ವಾಸ್ತತೆಗೆ ಮುಖವಾಡ ತೊಡಿಸಲು ಸಾಧ್ಯವಿಲ್ಲ.

ಬಿಜೆಪಿ ಮುಖಂಡತ್ವದಲ್ಲಿನ ಪ್ರಸಕ್ತ ಕಾದಾಟದಿಂದ ಒಂದು ತಾತ್ಕಾಲಿಕ ಹಿನ್ನಡೆ ಖಂಡಿತಾ ಸಂಭವಿಸುತ್ತದೆ. ಆದರೆ ಆರೆಸ್ಸೆಸ್ ಹೇಳುವ ರೀತಿಯಲ್ಲಿ ಬಿಜೆಪಿಯನ್ನು ಪುನರ್ರೂಪಿಸುವುದು ದೇಶಕ್ಕೆ ಒಳ್ಳೆಯದಲ್ಲ. ಹಿಂದುತ್ವ ಕೋಮುವಾದಿ ತತ್ವ ಮತ್ತು ರಾಜಕೀಯವನ್ನು ಎದುರಿಸಿ ಸಮರ ನಡೆಸುವುದು ಈಗಲೂ ಪ್ರಸ್ತುತ ಮತ್ತು ಅಗತ್ಯ ಕೂಡಾ. ○



ಬರ್ಲಿನ್ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಪುರುಷರ 200 ಮೀಟರ್ ಓಟದ ಸ್ಪರ್ಧೆಯಲ್ಲಿ 19.19 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ವಿಶ್ವದಾಖಲೆ ಉತ್ತಮ ಪಡಿಸಿಕೊಂಡ

ಜಮೈಕಾದ ಉಸೇನ್ ಬೋಲ್ಟ್



ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಮಹಿಳೆಯ ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ಹೊಸ ವಿಶ್ವ ದಾಖಲೆ ನಿರ್ಮಿಸಿದ

ಪೋಲೆಂಡ್‌ನ ಅನಿಟಾ ವ್ಲಾಡರ್‌ಸಿಕ್

ಹ್ಯಾಮರ್‌ನ್ನು ಅವರು 77.96 ಮೀಟರ್ ದೂರ ಎಸೆದಿದ್ದಾರೆ.

'ನಾಗರೀಕ ರಂಗ'ದ ಉದ್ಘಾಟನೆ



ಆಗಸ್ಟ್ 25 ರಂದು ಬೆಂಗಳೂರು ನಗರದ ಎನ್‌ಜಿಓ ಹಾಲ್‌ನಲ್ಲಿ ನಡೆದ ನಾಗರಿಕ ರಂಗದ ಉದ್ಘಾಟನಾ ಸಮಾರಂಭ.

ಅರಳಿ ಮರಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಲಾಯಿತು.

ಬೆಂಗಳೂರು ಯಾರಿಗಾಗಿ? ಎಂಬ ಪ್ರಶ್ನೆಯೊಂದಿಗೆ ನಗರದ ದುಡಿಯುವ ಜನ, ದಲಿತರು, ಅಲ್ಪಸಂಖ್ಯಾತರು, ಬಡ ಜನರ ಪರವಾಗಿ ದನಿಯೆತ್ತುವ ರಂಗ ಇದಾಗಿದ್ದು, ಇದರಲ್ಲಿ ಹಲವು ರಾಜಕೀಯ ಪಕ್ಷಗಳು, ಜನಪರ ಸಂಘಟನೆ, ವ್ಯಕ್ತಿಗಳು, ಸಂಸ್ಥೆಗಳು ಒಳಗೊಂಡಿವೆ.

ಮುಖ್ಯವಾಗಿ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಭಾರತ ಕಮ್ಯುನಿಸ್ಟ್ ಪಕ್ಷ, ದಂಸಸ ಅಂಬೇಡ್ಕರ್ ವಾದ, ಎಐಎಡಿಎಂಕೆ, ಐಎನ್‌ಎಲ್, ಟಿಯುಎಫ್ ಮತ್ತು ಆರ್‌ಪಿಐ ಮತ್ತು ಪಿಪಿಸಿ ಸಂಘಟನೆಗಳು ಇದರಲ್ಲಿವೆ.

ಮುಂಬರುವ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬೆಂಗಳೂರು ನಗರದ ಜನರ ಬದುಕಿಗೆ ಸಂಬಂಧಿಸಿ ಪ್ರಶ್ನೆಗಳನ್ನು ಮುಂಚೂಣಿಗೆ ತರುವ ನಿಟ್ಟಿನಲ್ಲಿ ಕಾರ್ಯಸೂಚಿಯೊಂದನ್ನು ಬಿಡುಗಡೆ ಮಾಡಲಾಗಿದ್ದು, ಚುನಾವಣೆಯನ್ನು ಸಹ ಒಗ್ಗಟ್ಟಾಗಿ ಎದುರಿಸಲು ನಿರ್ಧರಿಸಿವೆ.



ಕವಿತೆ

'ಕ್ಯೂಬಾ' ಕುರಿತ ಹಾಯ್ಕುಗಳು

1. ಸದಾ ಕೈ ಬಿಸಿ ಕರೆವ
ನನ್ನ ಕೆಂಬಾವುಟ
ಕ್ಯೂಬಾದ ಭೂಪಟ

2. ದೊಡ್ಡಣ್ಣನಿಗೆ ಏಳು
ಸಮುದ್ರದ
ನೀರು ಕುಡಿಸುತ್ತಿದೆ
ಒಂದು ಸಣ್ಣ ಮೆಣಸಿನಕಾಯಿ

3. ರಣಹದ್ದುಗಳ ನಿದ್ದೆಗೆಡಿಸಿದೆ
ಕ್ಯೂಬಾದ ಕೋಗಿಲೆ
ಮರಿಗಳ ಗಾಯನ

4. ವಿಶ್ವದ ಎಲ್ಲಾ ಸಂಗಾತಿಗಳ
ಎದೆ ಗೂಡಿನಲ್ಲಿ ಗುಣಗುತ್ತಿದೆ
ಗ್ಯೂಬಾದ ಹಕ್ಕಿಗಳ ಹಾಡು

5. ಅನ್ಯಾಯದ ವಿರುದ್ಧ
ಹೋರಾಡುವ
ಎಲ್ಲಾ ಸಂಗಾತಿಯ
ಮುಖದಲ್ಲೂ
ಚೆಗೆವಾರನ ಛಾಯೆ

- ಕಾಂ. ಮಹೇಲ್ ಊಗಿನಹಳ್ಳಿ



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH

ಸಂಪಾದಕರ ಫೈಲ್.